ಶಾಲಾ ಶಿಕ್ಷಣ ಇಲಾಖೆ

# ಮರುಸಿಂಚನ

# ಕನ್ನಡ

**2026–2027**

## ವಿದ್ಯಾರ್ಥಿ ಅಭ್ಯಾಸ ಪುಸ್ತಕ

@KTBS NOT TO BE REPUBLISHED

**9**

ಒಂಬತ್ತನೇ ತರಗತಿ

**ಸಮಗ್ರ ಶಿಕ್ಷಣ– ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಚೇರಿ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 001

## ಪರಿಕಲ್ಪನೆ

| | | |
|---|---|---|
| **ಶ್ರೀಮತಿ ವಿ. ರಶ್ಮಿ ಮಹೇಶ್** ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಕರ್ನಾಟಕ ಸರ್ಕಾರ | **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ<br>ನೃಪತುಂಗ ರಸ್ತೆ ಬೆಂಗಳೂರು | **ಶ್ರೀಮತಿ ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು |
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು, ಗುಣಮಟ್ಟ<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು | **ಶ್ರೀ ಹೆಚ್.ಎನ್. ಗೋಪಾಲಕೃಷ್ಣ**<br>ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ<br>ಬೆಂಗಳೂರು | **ಶ್ರೀ ಸಿ.ಆರ್. ನಾಗರಾಜಯ್ಯ**<br>ಪ್ರಾಂಶುಪಾಲರು ಹಾಗೂ<br>ಉಪನಿರ್ದೇಶಕರು (ಅಭಿವೃದ್ಧಿ)<br>ಡಯಟ್ ಮೈಸೂರು |

## ಸಹಕಾರ

| | |
|---|---|
| **ಶ್ರೀ ಬಿ.ಎಸ್. ಜಗದೀಶ್ವರ**<br>ಸಹನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | **ಶ್ರೀಮತಿ ಮಂಗಳ ಜಿ.**<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು |

## ಸಂಪನ್ಮೂಲ ರಚನಾ ತಂಡ (2024–2025)

| | |
|---|---|
| **ಶ್ರೀ ಶ್ರೀಕಂಠಶೆಟ್ಟಿ**<br>ನಿವೃತ್ತ ಶಿಕ್ಷಕರು, ರಾಜ್ಯ ಸಂಪನ್ಮೂಲ ವ್ಯಕ್ತಿಗಳು,<br>ಮೈಸೂರು ಜಿಲ್ಲೆ. | **ಶ್ರೀ ಸುರೇಶ್.ಎಂ.ಎನ್**<br>ನಿವೃತ್ತ ಶಿಕ್ಷಕರು, ರಾಜ್ಯ ಸಂಪನ್ಮೂಲ ವ್ಯಕ್ತಿಗಳು,<br>ಮೈಸೂರು ಜಿಲ್ಲೆ. |
| **ಶ್ರೀಮತಿ ಸುಧಾ.ಸಿ.ಎಸ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ನಾಗನಹಳ್ಳಿ, ಮೈಸೂರು ಗ್ರಾಮಾಂತರ,<br>ಮೈಸೂರು ಜಿಲ್ಲೆ. | **ಶ್ರೀ ಶ್ರೀಕಂಠಮೂರ್ತಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ನವಿಲೂರು ನಂಜನಗೂಡು ತಾ॥<br>ಮೈಸೂರು ಜಿಲ್ಲೆ. |

| | | |
|---|---|---|
| **ಶ್ರೀ ರಾಘವೇಂದ್ರ.ಬಿ.ಎನ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಕಂಚಮಳ್ಳಿ ಹೆಚ್.ಡಿ.ಕೋಟೆ ತಾ॥<br>ಮೈಸೂರು ಜಿಲ್ಲೆ. | **ಶ್ರೀ ಸುರೇಶ್ ಕುಮಾರ್ ಜಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಮೇದಿನಿ, ಟಿ.ನರಸೀಪುರ ತಾ॥<br>ಮೈಸೂರು ಜಿಲ್ಲೆ. | **ಶ್ರೀ ಮಹೇಶ್ ಶೆಟ್ಟಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಕುಪ್ಪರವಳ್ಳಿ ನಂಜನಗೂಡು ತಾ॥<br>ಮೈಸೂರು ಜಿಲ್ಲೆ. |

## ಸಂಪನ್ಮೂಲ ಪರಿಷ್ಕರಣ ತಂಡ (2026–2027)

**ಶ್ರೀ ಆರ್.ಡಿ.ರವೀಂದ್ರ**
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲೋಕನಾಥಪುರ,
ಕೊಪ್ಪ ತಾ॥, ಚಿಕ್ಕಮಗಳೂರು ಜಿಲ್ಲೆ.

| | |
|---|---|
| **ಶ್ರೀ ಸುರೇಶ್ ಕುಮಾರ್ ಜಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಮೇದಿನಿ, ಟಿ.ನರಸೀಪುರ ತಾ॥ ಮೈಸೂರು ಜಿಲ್ಲೆ. | **ಶ್ರೀ ಮಹೇಂದ್ರಕುಮಾರ್.ಸಿ**<br>ಸಹ ಶಿಕ್ಷಕರು, ಸ.ಪ.ಪೂ.ಕಾಲೇಜು (ಪ್ರೌಢಶಾಲಾ ವಿಭಾಗ),<br>ಬನ್ನೂರು ಟಿ.ನರಸೀಪುರ ತಾ॥ ಮೈಸೂರು ಜಿಲ್ಲೆ. |

## ಸಮನ್ವಯ

- **ಶ್ರೀಮತಿ ನಾಗಮಣಿ ಎಂ.** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು
- **ಶ್ರೀಮತಿ ಶಿವಮ್ಮ,** ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕರ್ನಾಟಕ.
- **ಶ್ರೀ ಕೆ.ವಿ.ಸುರೇಶ್,** ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀಮತಿ ಬಿ.ಎನ್.ನಳಿನಾಕ್ಷಿ,** ಉಪನ್ಯಾಸಕರು, ಕಾರ್ಯಾನುಭವ ವಿಭಾಗ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀ ಶಿವಶಂಕರಯ್ಯ,** ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.

**ಬೆಂಬಲ ಟ್ರಾನ್ಸ್ ಫಾರ್ಮ್ ಸ್ಕೂಲ್ಸ್,**

©KTBS NOT TO BE REPUBLISHED

# ಮುನ್ನುಡಿ

ವಿದ್ಯಾರ್ಥಿಗಳು ಆಲೋಚನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ತಮ್ಮ ತಿಳುವಳಿಕೆಯನ್ನು ವಿಶ್ಲೇಷಿಸಿದಾಗ ಮತ್ತು ಹೊಸ ಪರಿಕಲ್ಪನೆಗಳನ್ನು ತಮ್ಮಲ್ಲಿನ ಪೂರ್ವಜ್ಞಾನದೊಂದಿಗೆ ಜೋಡಿಸಿಕೊಂಡಾಗ ಮಾತ್ರ ಕಲಿಕೆಯು ಅರ್ಥಪೂರ್ಣವಾಗುತ್ತದೆ. ಇದನ್ನು ಮನಗಂಡು, **'ಮರುಸಿಂಚನ'** ಕಾರ್ಯಕ್ರಮವು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದೆ. ಈ ಕಾರ್ಯಕ್ರಮವನ್ನು ವಿಶೇಷವಾಗಿ ಕಲಿಕಾ ಅಂತರಗಳನ್ನು (learning gaps) ಇಲ್ಲವಾಗಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ತರಗತಿಗೆ ಅನುಗುಣವಾದ ಕಲಿಕಾ ಮಟ್ಟವನ್ನು ತಲುಪಲು ಅತ್ಯಗತ್ಯವಾದ ಬುನಾದಿ (foundational) ಮತ್ತು ಪೂರ್ವ–ಅಗತ್ಯ (ಠಿಡಿಜಡಿಜಡಣಘುಣಜ) ಸಾಮರ್ಥ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಲು ಅನುವಾಗುವಂತೆ ರೂಪಿಸಲಾಗಿದೆ.
ಈ ದೂರ ದೃಷ್ಟಿಯನ್ನು ಸಾಕಾರಗೊಳಿಸಲು **'ವಿದ್ಯಾರ್ಥಿ ಅಭ್ಯಾಸ ಪುಸ್ತಕ'** (Student Activity Book - SAB) ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥಿತ ಕಲಿಕಾ ಸಂಗಾತಿಯಾಗಿ ಕಾರ್ಯ ನಿರ್ವಹಿಸುತ್ತದೆ; ವಿದ್ಯಾರ್ಥಿಗಳು ತಮ್ಮ ಪೂರ್ವ–ಅಗತ್ಯ ಪರಿಕಲ್ಪನೆಗಳನ್ನು ಪುನರ್ಮನನ ಮಾಡಿಕೊಳ್ಳಲು, ಮಾರ್ಗದರ್ಶಿತ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ತರಗತಿವಾರು ಪಾಠಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ದೃಢೀಕರಿಸಿಕೊಳ್ಳಲು ಇದು ಸಹಕಾರಿಯಾಗಲಿದೆ.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ ಚಟುವಟಿಕೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ರೂಪಿಸಲಾಗಿದೆ :

- ವಿದ್ಯಾರ್ಥಿಗಳಲ್ಲಿನ ಕಲಿಕಾ ನ್ಯೂನತೆಗಳನ್ನು ಸರಿದೂಗಿಸಿ ಸಮನ್ವಯಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ, ಚರ್ಚೆ ಮತ್ತು ಸಮಸ್ಯೆಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವುದು.
- ತರಗತಿವಾರು ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳ ಕಡೆಗೆ ಹಂತ ಹಂತವಾಗಿ ಪ್ರಗತಿ ಸಾಧಿಸಲು ಬೆಂಬಲ ನೀಡುವುದು.

ಈ **ವಿದ್ಯಾರ್ಥಿ ಅಭ್ಯಾಸ ಪುಸ್ತಕವು** ಕೇವಲ ಪರೀಕ್ಷಾ ಅಭ್ಯಾಸ ಪುಸ್ತಕವಲ್ಲ ಅಥವಾ ಹೆಚ್ಚುವರಿ ಪಠ್ಯ ಪುಸ್ತಕವೂ ಅಲ್ಲ. ಇದನ್ನು ದೈನಂದಿನ ಕಲಿಕಾ ಪ್ರಕ್ರಿಯೆಯ ಭಾಗವಾಗಿ, ಶಿಕ್ಷಕರ ಮಾರ್ಗದರ್ಶನದಲ್ಲಿ, ಸಾಮಾನ್ಯ ತರಗತಿ ಬೋಧನೆಯ ಸಮಯದಲ್ಲಿ ಬಳಸಲು ರೂಪಿಸಲಾಗಿದೆ. ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿರುವ ಮತ್ತು ಕ್ರಮಬದ್ಧವಾಗಿ ಜೋಡಿಸಲಾದ ಚಟುವಟಿಕೆಗಳ ಮೂಲಕ, ಸಿದ್ಧತೆಯಿಂದ ಹಿಡಿದು ಕಲಿಕೆಯ ದೃಢೀಕರಣದವರೆಗಿನ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಇದು ನೆರವು ನೀಡುತ್ತದೆ.

ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಯಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು, ಸಹಪಾಠಿಗಳಿಂದ ಕಲಿಯಲು ಮತ್ತು ವಿಷಯದ ಬಗ್ಗೆ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರೇರೇಪಿತರಾಗುತ್ತಾರೆ.

ಶಿಕ್ಷಕರ ಆಪ್ತ ಮಾರ್ಗದರ್ಶನದೊಂದಿಗೆ ಈ ವಿದ್ಯಾರ್ಥಿ ಅಭ್ಯಾಸ ಪುಸ್ತಕದ ನಿರಂತರ ಬಳಕೆಯು ವಿದ್ಯಾರ್ಥಿಗಳ ಪರಿಕಲ್ಪನಾ ತಿಳುವಳಿಕೆಯನ್ನು ಬಲಪಡಿಸುತ್ತದೆ, ಕಲಿಕಾಫಲಗಳನ್ನು ಸುಧಾರಿಸುತ್ತದೆ ಮತ್ತು ತರಗತಿಗಳಲ್ಲಿ ಆನಂದದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕವು ವಿದ್ಯಾರ್ಥಿಗಳ ಕಲಿಕಾ ಪಯಣದಲ್ಲಿ ಅವರ ಕುತೂಹಲ, ಪಾಲ್ಗೊಳ್ಳುವಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲಿ ಎಂದು ನಾವು ಆಶಿಸುತ್ತೇವೆ.

ಈ ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲವ್ಯಕ್ತಿಗಳಿಗೂ, ಅಧಿಕಾರಿ ಬಂಧುಗಳಿಗೂ ಧನ್ಯವಾದಗಳು.

NOT TO BE REPUBLISHED @KTBS

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬುನಾದಿ ಹಂತ | | |
|---|---|---|
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 01 | ವರ್ಣಮಾಲೆ ಮತ್ತು ಗುಣಿತಾಕ್ಷರಗಳು | 01 |
| 02 | ಸಂಯುಕ್ತಾಕ್ಷರ ಪದಗಳು | 03 |
| 03 | ಸಮಾನಾರ್ಥಕ ಪದಗಳು | 04 |
| 04 | ವಿಭಕ್ತಿ ಪ್ರತ್ಯಯಗಳು | 06 |
| 05 | ಸಂಧಿಗಳು | 07 |
| 06 | ದ್ವಿರುಕ್ತಿ, ಜೋಡುನುಡಿ ಮತ್ತು ಅನುಕರಣಾವ್ಯಯಗಳು | 09 |
| 07 | ನಾಮವಾಚಕಗಳು | 11 |
| 08 | ಛಂದಸ್ಸು | 13 |
| 09 | ಅಲಂಕಾರಗಳು | 15 |
| 10 | ಗಾದೆಗಳು | 17 |
| 11 | ಲೇಖನ ಚಿಹ್ನೆಗಳು | 19 |
| 12 | ವಾಕ್ಯಪ್ರಭೇದಗಳು | 21 |
| 13 | ಸಾಮಾನ್ಯ, ಸಂಯೋಜಿತ ಮತ್ತು ಮಿಶ್ರ ವಾಕ್ಯಗಳು | 23 |
| 14 | ಸಾರಾಂಶ ಬರೆಯೋಣ | 25 |
| 15 | ಕವಿತೆ ಮತ್ತು ಕಥೆ | 27 |
| 16 | ವಚನ ಸಾಹಿತ್ಯ ಮತ್ತು ಕೀರ್ತನೆಗಳು | 30 |
| 17 | ಪತ್ರ ಬರೆಹ | 32 |
| 18 | ಆತ್ಮಕಥೆ ಮತ್ತು ಜೀವನ ಚರಿತ್ರೆ | 35 |
| 19 | ಪ್ರವಾಸ ಕಥನಗಳು | 37 |
| 20 | ಸನ್ನಿವೇಶ ರಚನೆ | 38 |
| 21 | ಸನ್ನಿವೇಶ ರಚನೆ | 39 |
| 22 | ಚಿತ್ರದಲ್ಲಿರುವ ಘಟನೆಗಳನ್ನು ಆಧರಿಸಿ ಬರೆಯೋಣ | 41 |
| 23 | ನಮ್ಮ ಅನುಭವಗಳನ್ನು ಬರೆಯೋಣ | 43 |
| 24 | ಅನುಭವ ಮತ್ತು ಅನಿಸಿಕೆಗಳನ್ನು ಬರೆಯೋಣ | 44 |


@KTBS NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬೆಂಬಲಿತ ಕಲಿಕೆಯ ಹಂತ | | |
|---|---|---|
| ಕ್ರ.ಸಂ | ಅವಧಿ | ಪುಟ ಸಂಖ್ಯೆ |
| 01 | ವಿಭಕ್ತಿ ಪ್ರತ್ಯಯಗಳು ಮತ್ತು ಲಿಂಗಗಳು | 46 |
| 02 | ವಚನಗಳು ಮತ್ತು ಕಾಲಗಳು | 48 |
| 03 | ಸಂಧಿಗಳು | 50 |
| 04 | ಸಮಾಸಗಳು | 53 |
| 05 | ನಾಮಪದ ಮತ್ತು ಸರ್ವನಾಮಗಳು | 55 |
| 06 | ದ್ವಿರುಕ್ತಿ, ಜೋಡುನುಡಿ ಮತ್ತು ಅನುಕರಣಾವ್ಯಯಗಳು | 57 |
| 07 | ದೇಶಿಯ ಮತ್ತು ಅನ್ಯದೇಶಿಯ (ಎರವಲು) ಪದಗಳು | 59 |
| 08 | ತತ್ಸಮ–ತದ್ಭವ | 60 |
| 09 | ಛಂದಸ್ಸು | 61 |
| 10 | ಪ್ರಸ್ತಾರ ಹಾಕೋಣ | 63 |
| 11 | ಅಲಂಕಾರ ತಿಳಿಯೋಣ | 65 |
| 12 | ರೂಪಕಾಲಂಕಾರ ತಿಳಿಯೋಣ | 67 |
| 13 | ಕಥೆಯನ್ನು ಓದೋಣ | 68 |
| 14 | ನಾಟಕ ರೂಪ ತಿಳಿಯೋಣ | 69 |
| 15 | ಏಕೆ? ಹೇಗೆ? ಹಾಗಾದರೆ | 71 |
| 16 | ಕಥನ ಕವನ | 73 |
| 17 | ಗಾದೆ ಮಾತು | 74 |
| 18 | ಪದ್ಯ ಪ್ರಕಾರ – ಜನಪದ | 77 |
| 19 | ವಚನ ಸಾಹಿತ್ಯ ಓದೋಣ | 80 |
| 20 | ನುಡಿಗಟ್ಟು | 83 |
| 21 | ಲೇಖನ ಓದಿ ಉತ್ತರಿಸೋಣ | 85 |
| 22 | ಕಥೆ ಕವಿತೆ ಓದಿ ಉತ್ತರಿಸೋಣ | 87 |
| 23 | ಪತ್ರ ಲೇಖನ– ವೈಯಕ್ತಿಕ | 89 |
| 24 | ಪತ್ರ ಲೇಖನ– ವ್ಯಾವಹಾರಿಕ | 90 |
| 25 | ಗದ್ಯವನ್ನು ಓದಿ ಮೌಲ್ಯ ಗುರುತಿಸೋಣ | 92 |
| 26 | ಕಥೆಯಲ್ಲಿನ ಸಾರಾಂಶ | 93 |
| 27 | ಪದ್ಯದಲ್ಲಿರುವ ಹೊಸ ಪದ ಪರಿಚಯ | 95 |
| 28 | ದಿನಪತ್ರಿಕೆ ಓದು | 97 |


NOT TO BE REPUBLISHED ©KTBS

ಬುನಾದಿ ಹಂತ – ಚಟುವಟಿಕೆ ಹಾಳೆ 1

# ವರ್ಣಮಾಲೆ ಮತ್ತು ಗುಣಿತಾಕ್ಷರ

T5T2R5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ವರ್ಣಮಾಲೆ ಮತ್ತು ಗುಣಿತಾಕ್ಷರಗಳ ಸಹಾಯದಿಂದ ಪದಗಳನ್ನು ರಚಿಸುವುದು ಮತ್ತು ತಪ್ಪಿಲ್ಲದೆ ಓದುವುದನ್ನು, ಬರೆಯುವುದನ್ನು ಕಲಿತು ಪ್ರಾಯೋಗಿಕವಾಗಿ ಬಳಸುವರು.

**ಚಟುವಟಿಕೆ 1 :** ಕೊಟ್ಟಿರುವ ಪಟ್ಟಿಯಲ್ಲಿ ಅಕ್ಷರಗಳಿಗೆ ಸಂಖ್ಯೆಗಳನ್ನು ಸಂಕೇತಿಸಲಾಗಿದೆ ಕೊಟ್ಟಿರುವ ಸಂಖ್ಯೆಗಳಿಗೆ ನೀಡಿರುವ ಅಕ್ಷರಗಳನ್ನು ಗುರುತಿಸಿ ಬರೆಯಿರಿ ಮತ್ತು ಎಲ್ಲರಿಗೂ ಕೇಳಿಸುವಂತೆ ಓದಿ ತಿಳಿಸಿರಿ.

| ರ | ಗ | ಸ | ದ | ಅ | ಜ | ವ | ಮ | ಬ | ನ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |

ಉದಾಹರಣೆ: –1) 4,3,1= ದಸರ 2) 8,4,10= ಮದನ

ಇದೆ ಮಾದರಿಯಲ್ಲಿ ಕೊಟ್ಟಿರುವ ಸಂಖ್ಯೆಗಳಿಗೆ ಅಕ್ಷರ ಬರೆದು ಓದಿರಿ.

| ಸಂಖ್ಯೆ | ಅಕ್ಷರ |
|---|---|
| 3,1 | |
| 8,10 | |
| 3,4,10 | |
| 6,10,8,10 | |
| 5,7,10 | |
| 5,7,3,1 | |
| 7,10,6 | |
| 5,8,1 | |
| 3,8,1 | |
| 9,10,4,6,10 | |

@KTBS NOT TO BE REPUBLISHED

**ಚಟುವಟಿಕೆ 2 :** ಶಿಕ್ಷಕರು ಹೇಳುವ ಉಕ್ತಲೇಖನ ಪದಗಳನ್ನು ಬರೆಯಿರಿ.

| | |
|---|---|
| | |
| | |
| | |
| | |
| | |
| | |
| | |
| | |

**ಮನೆಗೆಲಸ / ಮೌಲ್ಯಮಾಪನ ಚಟುವಟಿಕೆ : 1** ರಿಂದ 10ರವರೆಗೆ ನೀವು ಅಕ್ಷರಗಳಿಗೆ ಸಂಕೇತ ನೀಡಿ, ಆ ಅಕ್ಷರಗಳಿಂದ ಪದಗಳನ್ನು ರಚಿಸಿರಿ.

| | | | | | | | | | |
|---|---|---|---|---|---|---|---|---|---|
| | | | | | | | | | |
| | | | | | | | | | |

| ಸಂಖ್ಯೆ | ಅಕ್ಷರ |
|---|---|
| | |
| | |
| | |
| | |
| | |
| | |
| | |
| | |

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 2

# ಸಂಯುಕ್ತಾಕ್ಷರ ಪದಗಳು

W4Y9X4
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ವಿದ್ಯಾರ್ಥಿಗಳು ಸಂಯುಕ್ತಾಕ್ಷರ ಪದಗಳ ಸಹಾಯದಿಂದ ಪದಗಳನ್ನು ರಚಿಸುವರು. ತಪ್ಪಿಲ್ಲದೆ ಓದುವುದು ಮತ್ತು ಬರೆಯುವುದನ್ನು ಕಲಿತು ಪ್ರಾಯೋಗಿಕವಾಗಿ ಬಳಸುವರು.

**ಚಟುವಟಿಕೆ 1 :** ಕೊಟ್ಟಿರುವ ಪರಿಚ್ಛೇದದಲ್ಲಿರುವ ಒತ್ತಕ್ಷರಗಳಿರುವ ಪದಗಳಿಗೆ ಅಡಿಗೆರೆ ಎಳೆದು ಅವುಗಳನ್ನು ಪಟ್ಟಿಮಾಡಿ.

ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ. ವೀರಗಾಸೆಯ ಸಾಮೂಹಿಕ ನೃತ್ಯ. ವೀರಭದ್ರ ಕುಣಿತಕ್ಕೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದು ಹೆಸರಿದೆ. ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು ಜನಪ್ರಿಯವಾಗಿದೆ. ವೀರಶೈವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರ ವೇಷಧಾರಿ ದಕ್ಷಯಾಗ, ವೀರಭದ್ರನ ಜನನ ಮತ್ತು ವೀರಭದ್ರನ ವಿಜಯ ಮುಂತಾದ ಒಡಪುಗಳನ್ನು ಹೇಳುತ್ತಾನೆ. ಇದಕ್ಕೆ ಖಡ್ಗ ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಒಡಪು ಎನ್ನುವರು. ಮತ್ತೊಬ್ಬ ವ್ಯಕ್ತಿ "ಭಲರೇ ವೀರ, ಅಹಹಾ ವೀರ" ಎಂದು ಕಾಕು ಹೇಳುತ್ತಾ ಜಾಗಟೆ ಬಡಿಯುತ್ತಾ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ .

| ಪದಗಳನ್ನು ಪಟ್ಟಿಮಾಡಿ | |
|---|---|
| | |
| | |
| | |
| | |
| | |
| | |
| | |
| | |
| | |

@KTBS NOT TO BE REPUBLISHED

**ಚಟುವಟಿಕೆ 2 :** ನೀವು ಪಟ್ಟಿ ಮಾಡಿರುವ ಪದಗಳನ್ನು ಸಜಾತೀಯ ಮತ್ತು ವಿಜಾತೀಯ ಪದಗಳಾಗಿ ವಿಂಗಡಿಸಿ ಬರೆಯಿರಿ.

| ಸಜಾತಿಯ ಸಂಯುಕ್ತಾಕ್ಷರ ಪದಗಳು | ವಿಜಾತಿಯ ಸಂಯುಕ್ತಾಕ್ಷರ ಪದಗಳು |
|---|---|
| ಕುಣಿತಕ್ಕೆ | ವೀರಭದ್ರ |
| | |
| | |
| | |
| | |
| | |
| | |
| | |

## ಬುನಾದಿ ಹಂತ – ಚಟುವಟಿಕೆ ಹಾಳೆ 3

# ಸಮಾನಾರ್ಥಕ ಪದಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

K9X8I2

**ಕಲಿಕಾ ಫಲ :** ಪದ್ಯಭಾಗವನ್ನು ಓದಿ, ಹೊಸ ಪದಗಳನ್ನು ಗುರುತಿಸಿ ಅರ್ಥವನ್ನು ತಿಳಿಯುವರು. ಸಮಾನಾರ್ಥಕ ಪದಗಳ ಅರ್ಥವನ್ನು ಬಳಸಿ ಸರಳ ವಾಕ್ಯ ರಚನೆ ಮತ್ತು ಪದ್ಯದ ಸಾರಾಂಶ ಬರೆಯುವರು. ಪದ್ಯದಲ್ಲಿರುವ ಮೌಲ್ಯಗಳನ್ನು ಗುರುತಿಸಿ, ಜೀವನದಲ್ಲಿ ಅನ್ವಯಿಸಿಕೊಳ್ಳುವರು.

**ಚಟುವಟಿಕೆ : 01** ಕೊಟ್ಟಿರುವ ಪದ್ಯಭಾಗವನ್ನು ಓದಿರಿ.

ಸದಾ ಉರಿಯುತ್ತಿರುವ ಹಾಗೆ ಸ್ವಾತಂತ್ರ್ಯದ ಹಣತೆ
ದುಡಿಮೆ ತೈಲವೆರೆಯುತಿರಲು ಬಿಡುವಿಲ್ಲದೆ ಜನತೆ
ಎಂತು ಕುಂದಬಹುದು ಎಂಬ ತಾಯ್ನಾಡಿನ ಘನತೆ ॥

ಮುಳ್ಳಿನಿಂದ ಅರಿವೆ ಬಿಡಿಸಿದಂತೆ ಬಂತೆ ಮುಕ್ತಿ?
ಹುಲಿಯ ಬಾಯ ಮೇವ ಕಸಿಯುವಂತೆ ಧೀರಶಕ್ತಿ
ಪಡೆಯಿತದನು ಜನತೆ, ಬಾಳ ಬೆಸೆಯ ನಾಡಭಕ್ತಿ ॥

ಸ್ವಾತಂತ್ರ್ಯದ ಜೊತೆಗೆ ಬಂದು ಕೂಡಲಿಲ್ಲಗಳಿಗೆ
ವ್ಯಕ್ತಿ ವ್ಯಕ್ತಿ ಬೆವರ ಹೀರಿ ಮರವಾಗಿದೆ ಮೊಳಕೆ
ಮೇಲೇರಿದ ಹಾಗೆ ಭದ್ರಪಾಯ ಉಂಟು ಗೃಹಕೆ ॥

ಸಾಕಿದಂತೆ ಸಲ್ಲುತ್ತಿರಲಿ ಸಾಧನೆ ಎಡೆ ಗಮನ
ಪ್ರಾಣವನ್ನೇ ಪಗಡೆಯಾಡಿದವರಿಗೆಮ್ಮ ನಮನ
ತಾಯಿಯ ಮುಡಿಗೆ ದಿನವು ಏರುತಿರಲಿ ಹೂವುದವನ ॥

© KTBS
NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದ್ಯಭಾಗದಲ್ಲಿ ಅಡಕವಾಗಿರುವ ಹೊಸ ಪದಗಳನ್ನು ಪಟ್ಟಿ ಮಾಡಿರಿ.

| | | |
|---|---|---|
| | | |
| | | |
| | | |
| | | |

**ಚಟುವಟಿಕೆ 3 :** ನೀವು ಪಟ್ಟಿ ಮಾಡಿರುವ ಹೊಸಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥವನ್ನು ಹುಡುಕಿ ಬರೆಯಿರಿ.

| ಪದಗಳು | ಅರ್ಥಗಳು | ಪದಗಳು | ಅರ್ಥಗಳು |
|---|---|---|---|
| | | | |
| | | | |
| | | | |
| | | | |
| | | | |

**ಚಟುವಟಿಕೆ 4 :** ಈ ಮೇಲೆ ಪಟ್ಟಿ ಮಾಡಿರುವ ಹೊಸಪದಗಳ ಅರ್ಥಗಳ ಸಹಾಯದಿಂದ ಪದ್ಯಭಾಗಕ್ಕೆ ಸಾರಾಂಶ ಬರೆಯಿರಿ.

**ಚಟುವಟಿಕೆ 5 :** ಈ ಮೇಲಿನ ಪದ್ಯಭಾಗದಲ್ಲಿ ಅಡಕವಾಗಿರುವ ಮೌಲ್ಯವನ್ನು ಗುರುತಿಸಿ ಬರೆಯಿರಿ.

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 4

# ವಿಭಕ್ತಿ ಪ್ರತ್ಯಯಗಳು

L4Q2J2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ವಿಭಕ್ತಿಪ್ರತ್ಯಯಗಳ ಅರ್ಥವನ್ನು ತಿಳಿದುಕೊಳ್ಳುವರು. ವಿದ್ಯಾರ್ಥಿಗಳು ನಾಮಪದಗಳೊಂದಿಗೆ ವಿಭಕ್ತಿಪ್ರತ್ಯಯಗಳನ್ನು ಗುರುತಿಸುವರು. ಪಾಠದಲ್ಲಿ ಬರುವ ವಿಭಕ್ತಿಪ್ರತ್ಯಯ ಪದಗಳನ್ನು ವಿಭಜಿಸಿ ಪ್ರತ್ಯಯ ಮತ್ತು ವಿಭಕ್ತಿಯ ಹೆಸರನ್ನು ಗುರುತಿಸುವರು.

**ಚಟುವಟಿಕೆ 1** :ಕೊಟ್ಟಿರುವ ಪಟ್ಟಿಯನ್ನು ಗಮನಿಸಿ ಓದಿರಿ.

| ವಿಭಕ್ತಿಗಳು | ವಿಭಕ್ತಿಪ್ರತ್ಯಯಗಳು | ನಾಮಪದ |
|---|---|---|
| ಪ್ರಥಮಾ | ಉ | ಮನೆಯು |
| ದ್ವಿತೀಯಾ | ಅನ್ನು | ಮನೆಯನ್ನು |
| ತೃತೀಯಾ | ಇಂದ | ಮನೆಯಿಂದ |
| ಚತುರ್ಥೀ | ಗೆ, ಇಕೆ, ಕ್ಕೆ | ಮನೆಗೆ |
| ಪಂಚಮಿ | ದೆಸೆಯಿಂದ | ಮನೆಯದೆಸೆಯಿಂದ |
| ಷಷ್ಠೀ | ಅ | ಮನೆಯ |
| ಸಪ್ತಮಿ | ಅಲ್ಲಿ | ಮನೆಯಲ್ಲಿ |

**ಚಟುವಟಿಕೆ–2** ಕೊಟ್ಟಿರುವ ಪಠ್ಯಭಾಗದಲ್ಲಿ ಕಂಡುಬರುವ ನಾಮಪದಗಳನ್ನು ಪಟ್ಟಿಮಾಡಿ, ವಿಭಕ್ತಿಯ ಹೆಸರು ಹಾಗೂ ಪ್ರತ್ಯಯಗಳನ್ನು ಬರೆಯಿರಿ.

ಗದ್ಯಭಾಗ : ಅರಮನೆಯಲ್ಲಿ ಮೂರನೆಯ ಅಂತಸ್ತಿಗೆ ಹೋದರೆ ರಾಜರ ಅಂತಃಪುರವನ್ನು ನೋಡಬಹುದು. ಇಲ್ಲಿನ ಕೆಲವು ಭಾಗಗಳಲ್ಲಿ ಚಂದ್ರಕಾಂತಶಿಲೆಯ ಸುಂದರ ಮಂಟಪಗಳಿವೆ. ಶಿಲೆಯನ್ನು ಕೆತ್ತಿ ಬಣ್ಣದ ಕಲ್ಲುಗಳಿಂದ ಕೊರೆಯಲ್ಪಟ್ಟ ಲತಾಪುಷ್ಪಗಳ ಚಿತ್ರಾವಳಿಗಳು ಇವೆ. ಇನ್ನೊಂದು ಎರಡು ಚಾವಡಿಗಳು ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದ ಕಂಬ, ಮುಚ್ಚಿಕೆಗಳುಳ್ಳ ರಚನೆ ಕತ್ತಲಿನಲ್ಲಿ ದೀಪ ಹೊತ್ತಿಸಿದಾಗ ಲಕ್ಷೋಪಲಕ್ಷ ಗಾಜಿನ ತುಣುಕುಗಳು ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ನೀಡುತ್ತವೆ. ಅರಮನೆಯ ಮೊದಲನೆಯ ಮಟ್ಟದಲ್ಲಿ ಇನ್ನೊಂದು ಅಂತಃಪುರವಿದೆ.

ಉದಾಹರಣೆಯೊದಿಗೆ ಪಟ್ಟಿ:

| ನಾಮಪದ | ವಿಭಕ್ತಿ | ಪ್ರತ್ಯಯ |
|---|---|---|
| ಶಿಲೆಯನ್ನು | ದ್ವಿತೀಯ ವಿಭಕ್ತಿ | ಅನ್ನು |
| | | |
| | | |
| | | |
| | | |
| | | |

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 5
## ಸಂಧಿಗಳು

P3V9Q1
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ಲೋಪಸಂಧಿ, ಆಗಮಸಂಧಿ ಮತ್ತು ಆದೇಶಸಂಧಿಗಳನ್ನು ಗುರುತಿಸುವರು, ಉದಾಹರಣೆಗಳೊಂದಿಗೆ ವಿವರಿಸುವರು.

**ಚಟುವಟಿಕೆ 1 :** ಕೊಟ್ಟಿರುವ ವಾಕ್ಯಗಳನ್ನು ಗಮನಿಸಿ, ಗೆರೆ ಎಳೆದ ಪದಗಳನ್ನು ಪ್ರತ್ಯೇಕವಾಗಿ ನೀಡಿರುವ ಜಾಗದಲ್ಲಿ ಬರೆಯಿರಿ.

1. ನಾವೆಲ್ಲರೂ ತೋಟವನ್ನು ಶುದ್ಧಮಾಡೋಣ.
2. ಅಲ್ಲಿಗೆ ಬೇರೊಬ್ಬರನ್ನು ಕಳುಹಿಸಿ.
3. ನೀವೆಲ್ಲಾ ಮನೆಯನ್ನು ಶುಚಿಯಾಗಿಟ್ಟುಕೊಳ್ಳಿ.
4. ಊರಿಂದ ಪುಸ್ತಕವನ್ನು ತನ್ನಿರಿ.
5. ಹುಲ್ಲುಗಾವಲು ಮಳೆಗಾಲದಲ್ಲಿ ಸೊಂಪಾಗಿ ಬೆಳೆಯುತ್ತದೆ.

| | | | |
|---|---|---|---|
| | | | |
| | | | |
| | | | |
| | | | |

**ಚಟುವಟಿಕೆ 2 :** ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಸಂಧಿಗಳು ಎಂದರೇನು?

2. ಕನ್ನಡ ಸಂಧಿಗಳು ಯಾವುವು ?

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಲೋಪಸಂಧಿಯ ಪದಗಳನ್ನು ಬಿಡಿಸಿ ಬರೆಯಿರಿ.

ಸೂತ್ರ:~ಸಂಧಿಕ್ರಿಯೆ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಅಂತ್ಯ ಸ್ವರ ಲೋಪವಾದರೆ ಅದು ಲೋಪಸಂಧಿ.

**ಉದಾಹರಣೆ:– ನಾವು + ಎಲ್ಲರೂ =ನಾವೆಲ್ಲರೂ ವ್+ಉ+ಎ = ವೆ(ವ್+ಎ)**

| | |
|---|---|
| 1. ಬೇರೊಬ್ಬ = | |
| 2. ಊರಿಂದ = | |
| 3. ನೀವೆಲ್ಲರೂ= | |
| 4. ಸೊಂಪಾಗಿ= | |

**ಚಟುವಟಿಕೆ 4 :** ಕೊಟ್ಟಿರುವ ಪದಗಳನ್ನು ಕೂಡಿಸಿ ಬರೆಯಿರಿ.
ಸೂತ್ರ : ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ 'ಯ'ಕಾರ ಅಥವಾ 'ವ'ಕಾರವು ಸ್ವರಗಳ ಮಧ್ಯೆ ಹೊಸದಾಗಿ ಸೇರುವುದು.

1. ಪುಸ್ತಕ + ಅನ್ನು = ------------------------------------
2. ಮನೆ + ಅನ್ನು = ------------------------------------
3. ಶಿಕ್ಷಣ + ಅನ್ನು = ------------------------------------
4. ಮಳೆ + ಅನ್ನು = ------------------------------------
5. ಶಾಲೆ + ಇಂದ = ------------------------------------

**ಚಟುವಟಿಕೆ 5 :** ಕೊಟ್ಟಿರುವ ಪದಗಳನ್ನು ಕೂಡಿಸಿ ಬರೆಯಿರಿ.
ಸೂತ್ರ : ಸಂಧಿ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದು.

1. ಹುಲ್ಲು + ಕಾವಲು = ____________________
2. ಬೆಟ್ಟ + ತಾವರೆ = ____________________
3. ಹೊಸ + ಕನ್ನಡ = ____________________
4. ಮಳೆ + ಕಾಲ = ____________________
5. ಕಣ್ + ಪನಿ = ____________________
6. ಬೆನ್ + ಪತು = ____________________
7. ನೀರ್ + ಪೊನಲು = ____________________

@KTBS
NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 6

# ದ್ವಿರುಕ್ತಿ ಜೋಡುನುಡಿ ಅನುಕರಣಾವ್ಯಯಗಳು

C8Q3M4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ನಾಮಪದ, ಸರ್ವನಾಮ, ಜೋಡುನುಡಿ, ದ್ವಿರುಕ್ತಿ, ಅನುಕರಣಾವ್ಯಯ ಪದಗಳ ಪ್ರತ್ಯೇಕ ಅರ್ಥವನ್ನು ತಿಳಿದು, ಉದಾಹರಣೆಗಳಲ್ಲಿ ಗುರುತಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಸಂಭಾಷಣೆಯನ್ನು ಓದಿ, ಗೆರೆ ಎಳೆದಿರುವ ಪದಗಳನ್ನು ಗಮನಿಸಿ ಪಟ್ಟಿ ಮಾಡಿರಿ.

ಅಮ್ಮ: ಎದ್ದೇಳು ಪುಟ್ಟ, **ಬೇಗಬೇಗ** ರೆಡಿಯಾಗು.
ರಾಜು: ಸರಿ ಅಮ್ಮ, ನದಿಯಲ್ಲಿ ಸ್ನಾನಮಾಡುವೆ.
ಅಮ್ಮ: ಏಕೆ ಅಲ್ಲೇ ಸ್ನಾನ ಮಾಡುವುದು? ಮನೆಯಲ್ಲಿಯ **ಬಿಸಿಬಿಸಿ** ನೀರು ಸಿದ್ಧವಿದೆಯಲ್ಲಾ?
ರಾಜು: ನದಿಯಲ್ಲಿ ನೀರು ಜುಳುಜುಳನೆ ಹರಿಯುತ್ತದೆ. ನಾನು ಅಲ್ಲಿಯೇ ಗೆಳೆಯರೊಡನೆ ಸ್ನಾನ ಮಾಡುತ್ತೇನೆ. **ಕಾಫಿಗೀಫಿ** ಕೊಡಮ್ಮ?
ರಂಜಿತ್: ರಾಜು, ನಾನು ರಸ್ತೆಯಲ್ಲಿ ಬರುತ್ತಿದ್ದಾಗ ಹಾವು **ಸರಸರನೆ** ಹೋಗುತ್ತಿತ್ತು. ಅದನ್ನು ನೋಡಿ ನನಗೆ ಎದೆ **ಢವಢವ** ಎನ್ನುತ್ತಿತ್ತು.
ರಾಜು: ಹೌದು, ರಸ್ತೆಯ **ಎಡಬಲ**ಗಳಲ್ಲಿ **ಗಿಡಮರ**ಗಳ ಬಳಿಯಲ್ಲಿ ಹಾವು ಇರುತ್ತವೆ. ಅಲ್ಲದೆ **ಹುಳಹುಪ್ಪಡಿ**ಗಳು ಇರುತ್ತವೆ. **ಬನ್ನಿಬನ್ನಿ** ಎಚ್ಚರಿಕೆಯಿಂದ ಹೋಗೋಣ.
ರಂಜಿತ್: ರಾಜು, ನದಿಯಲ್ಲಿ **ಮೆಲ್ಲಮೆಲ್ಲನೆ** ಇಳಿಯೋ.
ರಾಜು: ರಂಜಿತ್, ನೀನು ನದಿಯಲ್ಲಿ ಇಳಿದವರಲ್ಲಿ **ಕಟ್ಟಕಡೆ**ಯ ಹುಡುಗ. ಹಾ ಹಾ ಹಾ.
ರಂಜಿತ್: ರಾಜು, ನನಗೆ ನೀರಿನಲ್ಲಿ ಆಟವಾಡುವುದು **ಅಚ್ಚುಮೆಚ್ಚು.**

| | | |
|---|---|---|
| | | |
| | | |
| | | |
| | | |

@KTBS NOT TO BE REPUBLISHED

**ದ್ವಿರುಕ್ತಿ :** ಕ್ರಿಯೆಯ ವೇಗವನ್ನುತಿಳಿಸಲು ಅರ್ಥವಿರುವ ಒಂದು ಪದವನ್ನು ಎರಡು ಬಾರಿ ಉಪಯೋಗಿಸುವುದೇ ದ್ವಿರುಕ್ತಿ. ಸಂತೋಷ, ಅವಸರ ಸಂಭ್ರಮ, ಕೋಪ ಅಥವಾ ಹತಾಶೆಗಳನ್ನು ವ್ಯಕ್ತಪಡಿಸಲು ಬಳಸಲಾಗುತ್ತದೆ. **ಉದಾಹರಣೆ: ಬನ್ನಿಬನ್ನಿ, ಬೇಗಬೇಗ, ನಡೆನಡೆ**
**ಅನುಕರಣಾವ್ಯಯ :** ಅರ್ಥವಿಲ್ಲದ ಧ್ವನಿವಿಶೇಷಗಳನ್ನು ಪುನಃ ಉಚ್ಚರಣೆ (ಎರಡುಬಾರಿ) ಮಾಡಿ ಹೇಳುತ್ತೇವೆ. **ಉದಾಹರಣೆ: ಪಟಪಟ, ಸರಸರ**
**ಜೋಡುನುಡಿ :** ಅಭಿಪ್ರಾಯಗಳನ್ನು ಒತ್ತಿ ಹೇಳುವುದಕ್ಕೂ, ವಿವಿಧತೆಯನ್ನು ಸೂಚಿಸುವುದಕ್ಕೂ ಒಂದಕ್ಕೊಂದು ಪೂರಕವಾದ, ಒಂದಕ್ಕೊಂದು ವಿರುದ್ಧವಾದ ಅಥವಾ ಬೇರೆಬೇರೆ ಅರ್ಥಗಳುಳ್ಳ ಎರಡು ಪದಗಳನ್ನು ಒಟ್ಟಾಗಿ ಹೇಳಿದರೆ ಜೋಡುನುಡಿಗಳು ಎಂದು ಹೇಳುತ್ತೇವೆ
**ಉದಾಹರಣೆ : ಹಾಲ್ಜೇನು, ಕಾಫಿಗೀಫಿ**

**ಚಟುವಟಿಕೆ 2 :** ಕೊಟ್ಟಿರುವ ಮಾದರಿಯಂತೆ ಜೋಡುನುಡಿಯ ಉದಾಹರಣೆಗಳನ್ನು ಪಟ್ಟಿಮಾಡಿ.

| ಎರಡುಪದಗಳಿಗೆ ಬೇರೆಬೇರೆ ಅರ್ಥವಿರುವ ಪದ | ವಿರುದ್ಧಾರ್ಥಕ ಪದ | ಎರಡನೇ ಪದ ಅರ್ಥರಹಿತವಾಗಿರುವ |
|---|---|---|
| ಸತಿಪತಿ | ಹಗಲುರಾತ್ರಿ | ಹುಳಹುಪ್ಪಡಿ |
| | | |
| | | |
| | | |
| | | |
| | | |

**ಚಟುವಟಿಕೆ 3 :** ಕೊಟ್ಟಿರುವ ಪಟ್ಟಿಯಲ್ಲಿರುವ ದ್ವಿರುಕ್ತಿ, ಜೋಡುನುಡಿ, ಅನುಕರಣಾವ್ಯಯ ಪದಗಳನ್ನು ಪ್ರತ್ಯೇಕಿಸಿ ಬರೆಯಿರಿ.

ಪಟಪಟನೆ, ಓಡಿಓಡಿ, ಕೆನೆಮೊಸರು, ಹಾಲುಜೇನು, ಗುಳುಗುಳು, ದೊಡ್ಡದೊಡ್ಡ, ಬೇಗಬೇಗ, ಒಂದೊಂದು,

ಸಾಕುಸಾಕು, ಕಾಳುಕಡ್ಡಿ, ಮನೆಮಠ, ಘಮಘಮ, ಹೌದುಹೌದು, ಕಾಫಿಗೀಫಿ, ಪಟಪಟ, ಆಟಪಾಠ, ಬೇಡಬೇಡ, ಬೆಟ್ಟಗುಡ್ಡ, ಥರಥರ, ಉಡುಗೆತೊಡುಗೆ, ಆದಿಅಂತ್ಯ, ಅಬ್ಬಬ್ಬಾ, ಅಕ್ಕಪಕ್ಕ, ಬನ್ನಿಬನ್ನಿ, ಹಿಂದೆಹಿಂದೆ, ಮೆಲ್ಲಮೆಲ್ಲನೆ, ಚುರುಚುರು.

| ದ್ವಿರುಕ್ತಿ | ಜೋಡುನುಡಿ | ಅನುಕರಣಾವ್ಯಯ |
|---|---|---|
| | | |

**ಚಟುವಟಿಕೆ 4 :** ದ್ವಿರುಕ್ತಿ, ಜೋಡುನುಡಿ ಮತ್ತು ಅನುಕರಣಾವ್ಯಯಗಳನ್ನು ನೀಡಲಾಗಿದ್ದು, ಕೊಟ್ಟಿರುವ ಪದಗಳು ಯಾವುದಕ್ಕೆ ಉದಾಹರಣೆಯಾಗಿವೆ ಎಂಬುದನ್ನು ಬರೆಯಿರಿ.

| ಅಭ್ಯಾಸಕ್ಕಾಗಿ |
|---|
| ಬೇವುಬೆಲ್ಲ : |
| ನೋಡುನೋಡು : |
| ಝುಣಝುಣ : |
| ನಟ್ಟನಡುವೆ : |
| ಓದುಬರೆಹ : |
| ಚುಮುಚುಮು : |

@KTBS NOT TO BE REPUBLISHED

ಬುನಾದಿ ಹಂತ –ಚಟುವಟಿಕೆ ಹಾಳೆ 7

# ನಾಮವಾಚಕಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

G2N4U3

**ಕಲಿಕಾಫಲ :** ನಾಮವಾಚಕ ಪದಗಳಲ್ಲಿನ ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳ ಅರ್ಥವನ್ನು ತಿಳಿದು, ಉದಾಹರಣೆಗಳಲ್ಲಿ ಗುರುತಿಸಲು ಶಕ್ತರಾಗುವರು

**ಚಟುವಟಿಕೆ 1 :** ನಾಮವಾಚಕಗಳಾದ ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳನ್ನು ತಿಳಿಯೋಣ.

ನಾನು ಒಬ್ಬ ಹುಡುಗ.

ನನ್ನ ಹೆಸರು ಸೋಮೇಶ .

ನಾನು ವಿದ್ಯಾರ್ಥಿಯಾಗಿ ಶಾಲೆಯಲ್ಲಿ ಕಲಿಯುತ್ತೇನೆ.



@KTBS NOT TO BE REPUBLISHED

ಈತ ಒಬ್ಬ ಮನುಷ್ಯ.

ಈತನ ಹೆಸರು ಪ್ರದೀಪ.

ಈತ ವೃತ್ತಿಯಲ್ಲಿ ವೈದ್ಯ.



ನಾನು ಯಾರು?– ನಾನು ಮಹಿಳೆ.

ನನ್ನ ಹೆಸರು ಏನು? – ನನ್ನ ಹೆಸರು ಉಮಾದೇವಿ.

ನನ್ನ ವೃತ್ತಿ ಯಾವುದು?– ನಾನು ವೃತ್ತಿಯಲ್ಲಿ ವಕೀಲೆ.



**ಚಟುವಟಿಕೆ 2 :** ಕೆಳಗೆ ನೀಡಿರುವ ಪಟ್ಟಿಯಲ್ಲಿ ಉದಾಹರಣೆಗಳನ್ನು ಗಮನಿಸಿ ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮ ಪದಗಳನ್ನು ಸಂಗ್ರಹಿಸಿ ಪಟ್ಟಿಮಾಡಿರಿ.

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
| --- | --- | --- |
| ರೂಢಿಯಿಂದ ಬಂದ ಪದಗಳು | ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳು | ರೂಪ, ಗುಣ, ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳು |
| ಉದಾ: ನದಿ, ಪರ್ವತ ಊರು | ಉದಾ: ಭಾರತ, ಗಂಗಾ, ಪುರಂದರವಿಠಲ, ಅರ್ಜುನ | ಉದಾ: ವ್ಯಾಪಾರಿ, ರೋಗಿ |
| | | |

@KTBS
NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 8
# ಛಂದಸ್ಸು

J9T3U7
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗಿಸಿ, ಛಂದಸ್ಸನ್ನು ಲಕ್ಷಣಗಳೊಂದಿಗೆ ತಿಳಿಯುವರು.

**ಚಟುವಟಿಕೆ 1 :** ಈ ಅಕ್ಷರಗಳಿಗೆ ಲಘು ಮತ್ತು ಗುರು ಗುರುತಿಸಿ(ಪ್ರಸ್ತಾರ ಹಾಕಿ) ಬರೆಯಿರಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| ನ | ನಾ | ನಿ | ನೀ | ನು | ನೂ | ನೃ | ನೆ | ನೇ | ನೈ | ನೊ | ನೋ | ನೌ | ನಂ | ನಃ |
| ಳ | ಳಾ | ಳಿ | ಳೀ | ಳು | ಳೂ | ಳೃ | ಳೆ | ಳೇ | ಳೈ | ಳೊ | ಳೋ | ಳೌ | ಳಂ | ಳಃ |

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಅಕ್ಷರಗಳಿಗೆ ಲಘು ಮತ್ತು ಗುರು ಗುರುತಿಸಿ(ಪ್ರಸ್ತಾರ ಹಾಕಿ)

| | | |
|---|---|---|
| ಆ ಲ ದ ಮ ರ | ಉ ಡು ರಾ ಜ | ಭೂ ಮಿ ಜಾ ತೆ |
| ಸುಂ ದ ರ | ಕಂ ಠ ಪಾ ಠ | ಕ ರು ನಾ ಡು |
| ಹಾ ಲು ಜೇ ನು ಭಾ | ರ ತ ದೇ ಶ | ಅಂ ತಃ ಕ ರ ಣ |

**ಚಟುವಟಿಕೆ 3 :** ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗಿಸಿ ಲಕ್ಷಣಗಳನ್ನು ತಿಳಿಯಿರಿ.

ಕಾವೇರಿಯಿಂದಮಾ ಗೋ
ದಾವರಿ ವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ

_______________________________________________

_______________________________________________

_______________________________________________

_______________________________________________

_______________________________________________

ಬಿಟ್ಟ ಸ್ಥಳವನ್ನು ಭರ್ತಿಮಾಡಿರಿ ಲಕ್ಷಣಗಳನ್ನು ತಿಳಿಯಿರಿ.

1.ಕಂದಪದ್ಯವು ______________ ಸಾಲುಗಳಿಂದ ಕೂಡಿದೆ.

2.ಒಂದು ಮತ್ತು __________ ಸಾಲುಗಳು ಮಾತ್ರಾ ದೃಷ್ಟಿಯಿಂದ ಸಮನಾಗಿದ್ದು, ನಾಲ್ಕು ಮಾತ್ರೆಯ

_____________ ಗಣಗಳಿಂದ ಕೂಡಿವೆ

3. ___________ ಮತ್ತು ನಾಲ್ಕನೆಯ ಸಾಲುಗಳು ಮಾತ್ರಾ ದೃಷ್ಟಿಯಿಂದ ಸಮನಾಗಿದ್ದು, _____________

ಮಾತ್ರೆಯ ಐದು ಗಣಗಳಿಂದ ಕೂಡಿವೆ.

4.ಕಂದಪದ್ಯದಲ್ಲಿ ಒಟ್ಟು 16 ಗಣಗಳಿದ್ದು, ಒಟ್ಟು ______________ ಮಾತ್ರೆಗಳಿರುತ್ತವೆ.

5.ಕಂದಪದ್ಯವು ವಿಷಮಗಣ ಸ್ಥಾನದಲ್ಲಿ ________________ ಗಣ ಬರುವುದಿಲ್ಲ.

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 9

# ಅಲಂಕಾರಗಳು

Z5K5Q2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಅಲಂಕಾರಗಳನ್ನು ಬಳಸಿ ಬರೆಯಲು ಬಲ್ಲವರಾಗುವರು.

**ಚಟುವಟಿಕೆ 1 :** ಕೊಟ್ಟಿರುವ ಲೇಖನವನ್ನು ಓದಿ ಅಲಂಕಾರಿಕ ಮಾತುಗಳಿಗೆ ಗೆರೆ ಎಳೆಯಿರಿ.

ಕಥೆ – ಮೇದಿನಿ ಗ್ರಾಮದ ಪ್ರೌಢಶಾಲೆಯಲ್ಲಿ ಗೋವಿಂದ್ ಎಂಬ ಶಿಕ್ಷಕರಿದ್ದರು. ಅವರು ಕನ್ನಡ ಪಾಠವನ್ನು ಹಾಗೂ ಕ್ರೀಡೆಯನ್ನು ಚೆನ್ನಾಗಿ ಕಲಿಸುತ್ತಿದ್ದರು. ಅವರೆಂದರೆ ಮಕ್ಕಳಿಗೆ ಅಚ್ಚುಮೆಚ್ಚು. ಅವರ ಶಾಲೆಯಲ್ಲಿ ಸುಧಾ ಎಂಬ ಬುದ್ಧಿವಂತೆ ಹುಡುಗಿ ಇದ್ದಳು. ಅವರು ತರಗತಿಗೆ ಹೋದಾಗ, ಇಂದು 'ಸುಧಾಳ ಕಣ್ಣುಗಳು ಕಮಲದಂತೆ ಅರಳಿವೆ' ಏನು ವಿಷಯ? ಎಂದರು. ಇದರಿಂದ ಸುಧಾಳಿಗೆ ತುಂಬಾ ಸಂತೋಷವಾಯಿತು. ನಂತರ ಶಿಕ್ಷಕರು ಎಲ್ಲರನ್ನೂ ಆಟ ಆಡಲು ಕರೆದರು. ತಕ್ಷಣ ವಿದ್ಯಾರ್ಥಿಗಳು 'ನಮ್ಮ ಶಾಲೆಯ ವಿದ್ಯಾರ್ಥಿಗಳ ಸೇನಾಸಾಗರ ಶಾಲಾ ಕ್ರೀಡಾಂಗಣದತ್ತ ಹೆಜ್ಜೆಇಟ್ಟಿತು'. ಮೊದಲಿಗೆ ಕ್ರಿಕೆಟ್ ಆಡಲು ಶುರುಮಾಡಿದರು, ಸಂಜೆಯಾಗುತಲಿದ್ದಿತು ಸಂಜಯ್ಎಂಬ ವಿದ್ಯಾರ್ಥಿ ಸರ್ ಕ್ರಿಕೆಟ್ ಆಡುವ ಚೆಂಡು ಸಂಜೆಯ ಸೂರ್ಯನಂತೆ ಕೆಂಪಾಗಿದೆ' ಎಂದನು. ಇನ್ನೇನು ಆಟ ಮುಗಿಯಬೇಕು ಅಷ್ಟರಲ್ಲಿ ವಿದ್ಯಾರ್ಥಿಗಳು ಜಗಳ ಶುರು ಮಾಡಿದರು. ಗೋವಿಂದ್ ಸರ್ ಬುದ್ಧಿಮಾತುಗಳನ್ನು ಹೇಳುತ್ತ 'ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ' ಗಾದೆಯನ್ನು ಉದಾಹರಣೆ ನೀಡಿ ನಮ್ಮೊಳಗೆ 'ಪ್ರೀತಿಯ ಹಣತೆ' ಹಚ್ಚಿ ಸೌಹಾರ್ದತೆಯಿಂದ ಆಡೋಣ ಎಂದರು.

**ಚಟುವಟಿಕೆ 2 :** ಆವರಣದಲ್ಲಿ ನೀಡಿರುವ ಹೇಳಿಕೆಗಳ ಮೂಲಕ ಉಪಮಾಲಂಕಾರದ ಲಕ್ಷಣಗಳನ್ನು ತಿಳಿಯಿರಿ.

ಉದಾ: "ಕ್ರಿಕೆಟ್ ಆಡುವ ಚೆಂಡು ಸಂಜೆಯ ಸೂರ್ಯನಂತೆ ಕೆಂಪಾಗಿದೆ"

- ಇಲ್ಲಿ ಹೋಲಿಸಿ ಹೇಳುತ್ತಿರುವ ಪದ ____________________

  (ಇದನ್ನು ಉಪಮೇಯ (ವರ್ಣ್ಯ) ಎನ್ನುತ್ತೇವೆ.)

- ಕ್ರಿಕೆಟ್ ಆಡುವ ಚೆಂಡನ್ನು ____________________ ಗೆ ಹೋಲಿಸಲಾಗಿದೆ. (ಇದನ್ನು'ಉಪಮಾನ' (ಅವರ್ಣ್ಯ) ಎನ್ನುತ್ತೇವೆ.)

- ಉಪಮೇಯ ಮತ್ತು ಉಪಮಾನ ಈ ಎರಡಕ್ಕೂ ಸಾಮಾನ್ಯ ಲಕ್ಷಣಕ್ಕೆ ಸಂಬಂಧಿಸಿದ ಪದ

  ____________________ (ಇದನ್ನು 'ಸಮಾನ ಧರ್ಮ ಅಥವಾ 'ಸಾಧಾರಣ ಧರ್ಮ' ಎನ್ನುತ್ತೇವೆ.)

- ಸಾಮಾನ್ಯ ಧರ್ಮಕ್ಕೂ, ಉಪಮಾನಕ್ಕೂ ಸಂಬಂಧ ಕಲ್ಪಿಸುವ ಪದ__________ (ಇದನ್ನು 'ಉಪಮಾವಾಚಕ' ಎನ್ನುತ್ತೇವೆ.)

- ಇಲ್ಲಿ ಉಪಮೇಯವಾದ ________________ ಅನ್ನು ಉಪಮಾನವಾದ ____________ ಗೆ ಅವುಗಳ ಅರ್ಥಸಾದೃಶ್ಯವನ್ನು ಪರಸ್ಪರ ಹೋಲಿಸಿ ಹೇಳಿರುವುದರಿಂದ ಇದನ್ನು 'ಉಪಮಾಲಂಕಾರ' ಎನ್ನುವರು. ಈ ರೀತಿ ಬರೆಯುವುದನ್ನು ಸಮನ್ವಯ ಎನ್ನುವರು.

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಅಲಂಕಾರಗಳನ್ನು ಸಮನ್ವಯಿಸಿ ಬರೆಯಿರಿ.

1) "ಶಶಿಪ್ರಭೆಯ ಕಣ್ಣುಗಳು ನಕ್ಷತ್ರಗಳಂತೆ ಕಂಗೊಳಿಸುತ್ತಿದೆ"

ಉಪಮೇಯ : ______________________

ಉಪಮಾನ : ______________________

ಉಪಮಾವಾಚಕ : ______________________

ಸಮಾನಧರ್ಮ : ______________________

ಸಮನ್ವಯ : ________________________________________________________________________

________________________________________________________________________________

________________________________________________________________________________

2) ಗಂಗೂಬಾಯಿ ಹಾನಗಲ್ಲರು ಕೋಗಿಲೆಯಂತೆ ಹಾಡುತ್ತಿದ್ದರು.

* ________________ : __________________________________

* ________________ : __________________________________

* ________________ : __________________________________

* ________________ : __________________________________

* ________________ : __________________________________

________________________________________________________________________________

________________________________________________________________________________

________________________________________________________________________________

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 10

# ಗಾದೆಗಳು

U7A8D2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಗಾದೆ ಮಾತುಗಳನ್ನು ಅರ್ಥ ಮಾಡಿ, ಲೇಖನ ರೂಪದಲ್ಲಿ ಬಳಸಲು ಬಲ್ಲವರಾಗುವರು.

**ಚಟುವಟಿಕೆ 1 :** ಕೊಟ್ಟಿರುವ ಗಾದೆ ಮಾತುಗಳನ್ನು ಪೂರ್ಣಗೊಳಿಸಿ.

- ಮಾತು ಬಲ್ಲವನಿಗೆ ಜಗಳವಿಲ್ಲ; ____________________
- ಹಾಡ್ತಾ ಹಾಡ್ತಾ ರಾಗ; ____________________
- ಕುಂಬಾರನಿಗೆ ವರುಷ; ____________________
- ಹೆತ್ತತಾಯಿ ಹೊತ್ತನಾಡು; ____________________
- ಕೈಕೆಸರಾದರೆ____________________

**ಚಟುವಟಿಕೆ 2 :** ಕೊಟ್ಟಿರುವ ವಾಕ್ಯಗಳನ್ನು ಗಮನಿಸಿರಿ ಮತ್ತು ಗಾದೆಯ ಮಹತ್ವವನ್ನು ಅರಿತು ಬರೆಯಿರಿ.

- ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.
- ಗಾದೆಗಳು ಆಕಾರದಲ್ಲಿ ವಾಮನನಾದರೂ ಗಾತ್ರದಲ್ಲಿ ತ್ರಿವಿಕ್ರಮನಾಗಿದೆ.
- ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಎಂಬ ಮಾತಿದೆ.

@KTBS
NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಗಾದೆ ಮಾತನ್ನು ಗಾದೆಯ ಮಹತ್ವದೊಂದಿಗೆ ವಿವರಿಸಿ ಬರೆಯಿರಿ.

1. ಗಿಡವಾಗಿ ಬಗ್ಗದ್ದು; ಮರವಾಗಿ ಬಗ್ಗಿತೇ.

2. ಹಾಸಿಗೆ ಇದ್ದಷ್ಟು; ಕಾಲು ಚಾಚು.

3. ಆಳಾಗ ಬಲ್ಲವನು; ಅರಸನಾಗಬಲ್ಲ

@KTBS
NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 11

# ಲೇಖನಚಿಹ್ನೆಗಳು

Q5V7F8
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ಲೇಖನ ಚಿಹ್ನೆಗಳನ್ನು ಗುರುತಿಸಿ, ಸಮರ್ಪಕವಾಗಿ ಬಳಸಲು ಶಕ್ತರಾಗುವರು.

**ಚಟುವಟಿಕೆ 1 :** ಕೊಟ್ಟಿರುವ ವಾಕ್ಯಗಳಿಗೆ ಸೂಕ್ತ ಲೇಖನ ಚಿನ್ಹೆಯನ್ನು ಬಳಸಿ ವಾಕ್ಯ ಬರೆಯಿರಿ.

| |
|---|
| ಪಾಂಡವರು ಅರಣ್ಯವಾಸಕ್ಕೆ ಹೋದರು |
| |
| |
| ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ |
| |
| |
| ನಾನು ಅಂಗಡಿಯಲ್ಲಿ ರಟ್ಟು ಪೆನ್ಸಿಲ್ ರಬ್ಬರ್  ಮತ್ತು ಚಾಕಲೇಟ್ಗಳನ್ನು ಕೊಂಡು ಕೊಂಡೆನು |
| |
| |
| ಇವು ನಿನ್ನ ಪುಸ್ತಕಗಳೇ |
| |
| |
| ಅಯ್ಯೋ ಹೀಗಾಗಬಾರದಿತ್ತು |
| |
| |
| ರಾಧಾಕೃಷ್ಣನ್ ಮಾನವತೆಯೇ  ವಿಶ್ವ ಅನುಸರಿಸಬೇಕಾದ ಮಾರ್ಗ ಎಂದು ಹೇಳಿದರು |
| |
| |
| ರಾಧಾಕೃಷ್ಣನ್ ರವರ ಅನುಪಮಾ ಸೇವೆಗಾಗಿ ಭಾರತರತ್ನವನ್ನು ನೀಡಿ ಗೌರವಿಸಲಾಗಿದೆ |
| |
| |
| ರಾಧಾಕೃಷ್ಣನ್ ನಿವೃತ್ತಿಯ ನಂತರ ಮದ್ರಾಸಿಗೆ ಹಿಂದಿರುಗಿದರು |
| |
| |

@KTBS
NOT TO BE REPUBLISHED

**ಚಟುವಟಿಕೆ 2 :** ನಾನು ಯಾರು ಗುರುತಿಸುವಿರಾ?–ಲೇಖನ ಚಿನ್ಹೆಗಳನ್ನು ಗುರುತಿಸಿ.

1) ಪೂರ್ಣ ಕ್ರಿಯಾಪದವಿರುವ ವಾಕ್ಯದ ಕೊನೆಗೆ ನಾನು ಬರುವೆನು. :________________________

2) ಪ್ರಶ್ನೆ ಮಾಡುವಾಗಲೆಲ್ಲ ನನ್ನ ನೆನಪಾಗುವುದು. :________________________

3) ಕೋಪ, ದುಃಖ, ಆಶ್ಚರ್ಯ ಇಂತಹ ಮನದ ಭಾವನೆಗಳನ್ನು ತೋರಿಸಲು ನನ್ನನ್ನೇ ಬಳಸಿರಿ.:

________________________________________

4) ಉಪವಾಕ್ಯಗಳು ಮುಗಿದಾಗಲೆಲ್ಲ ನಾನು ಬರುತ್ತಿರುವೆನು. :________________________

5) ಸಮಾನಾರ್ಥಕ ಪದ ಬಳಸುತ್ತಿರುವಿರಾ? ಹಾಗಾದರೆ ನನ್ನನ್ನು ಬಳಸಿ ಬರೆಯಿರಿ.:

________________________________________

6) ಪ್ರಧಾನವಾದದ್ದು, ಪಾರಿಭಾಷಿಕಪದ ಎನಿಸಿದರೆ ನನ್ನನ್ನು ನೆನೆಯಿರಿ. :________________________

7) ಕರ್ತೃ, ಕರ್ಮ, ವಿಶೇಷಣಗಳ ಮುಂದೆ ಅನೇಕ ವಸ್ತು ವಿಷಯಗಳು ಬರುವಾಗ ಕೊನೆಯದನ್ನು ಬಿಟ್ಟು ಉಳಿದ ಕಡೆ ನನ್ನನ್ನು ಬಳಸಿರಿ. :________________________

8) ಇದರ ವಿವರಣೆ ಮುಂದೆ ಇದೇ ನೋಡಿ ಎಂದು ಬರುವಾಗ ನಾನು ಬರುವೆನು. : ________________

________________________________________

**ಚಟುವಟಿಕೆ 3 :** ಶಿವರಾಮಕಾರಂತರ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ಸೂಕ್ತ ಲೇಖನ ಚಿನ್ಹೆಗಳನ್ನು ಬಳಸಿ ವಾಕ್ಯ ರೂಪದಲ್ಲಿ ಬರೆಯಿರಿ.

________________________________________
________________________________________
________________________________________
________________________________________
________________________________________
________________________________________
________________________________________
________________________________________
________________________________________

**ಚಟುವಟಿಕೆ 4 :** ನಿಮಗೆ ತಿಳಿದಿರುವ ಯಾವುದಾದರೂ ಒಂದು ಕಥೆಯನ್ನು ಸೂಕ್ತ ಲೇಖನ ಚಿನ್ಹೆಗಳೊಂದಿಗೆ ಬರೆಯಿರಿ.

________________________________________
________________________________________
________________________________________
________________________________________
________________________________________
________________________________________
________________________________________

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 12

# ವಾಕ್ಯ ಪ್ರಭೇದಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಾಕ್ಯ ಮತ್ತು ವಾಕ್ಯರಚನೆಯ ಅರ್ಥವನ್ನು ತಿಳಿಯುವರು.

**ಚಟುವಟಿಕೆ 1 :** ಓದಿ ತಿಳಿಯಿರಿ ಮತ್ತು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಪೂರ್ಣವಾದ ಅರ್ಥವನ್ನು ಕೊಡುವ ಪದಗಳ ಗುಂಪಿಗೆ 'ವಾಕ್ಯ' ಎನಿಸುವದು.
2) ಮಾತಿನ ವಿಚಾರವೂ ಪರರಿಗೆ ತಿಳಿಯಲು ಬರುವಂತೆ ಶಬ್ದವನ್ನು ಕ್ರಮಬದ್ಧವಾಗಿ ಸೇರಿಸುವುದನ್ನು **'ವಾಕ್ಯ ರಚನೆ'** ಎಂದು ಹೇಳುತ್ತಾರೆ.
3) ಈ ವಾಕ್ಯದಲ್ಲಿ ಮೊದಲು ಕರ್ತೃಪದ, ಆಮೇಲೆ ಕರ್ಮಪದ, ಕೊನೆಗೆ ಕ್ರಿಯಾಪದ ಹೀಗೆ ಅನುಕ್ರಮವಿರುತ್ತದೆ.

**ಉದಾಹರಣೆ :** ಹುಡುಗರು ಆಟವನ್ನು ಆಡುತ್ತಾರೆ.

ಕರ್ತೃಪದ : ಹುಡುಗರು, ಕರ್ಮಪದ : ಆಟವನ್ನು, ಕ್ರಿಯಾಪದ : ಆಡುತ್ತಾರೆ.

- ವಾಕ್ಯ ಎಂದರೇನು?

---------------------------------------------

- ವಾಕ್ಯ ರಚನೆ ಎಂದರೇನು?

---------------------------------------------

---------------------------------------------

- ವಾಕ್ಯ ರಚನೆಯಲ್ಲಿ ಯಾವ ಅನುಕ್ರಮವಿರುತ್ತದೆ?

---------------------------------------------

---------------------------------------------

'ಹುಡುಗಿಯು ಪ್ರವಾಸ ಮಾಡಿದಳು' – ಈ ವಾಕ್ಯದಲ್ಲಿರುವ ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.ಕರ್ತೃಪದ : ____________ ಕರ್ಮಪದ : ____________ ಕ್ರಿಯಾಪದ:____________

* ವಾಕ್ಯದಲ್ಲಿ ಎಷ್ಟು ಪ್ರಭೇದಗಳಿವೆ ? ಅವು ಯಾವುವು ?

_____________________________________________

_____________________________________________

_____________________________________________

@KTBS NOT TO BE REPUBLISHED

**ಚಟುವಟಿಕೆ 2 :** ನಿಮ್ಮ ಮನೆಯ ಪರಿಸರವನ್ನು ನೋಡಿ ವಾಕ್ಯಗಳನ್ನು ರಚಿಸಿರಿ.

ನಾನು ನಿಮ್ಮ ತಾಯಿ ಭೂದೇವಿ
ನಿಮಗೆ ಗಾಳಿ, ಮಳೆ, ಬಿಸಿಲು, ಬೆಳಕು, ಅನ್ನ,
ನೀರು, ಆಶ್ರಯ ಎಲ್ಲವನ್ನು ನಾನೇ ಫ್ರಿಯಾಗಿ ಕೊಟ್ಟಿರುವೆ.
ನೀವು ನನ್ನ ಮನೆಯಲ್ಲಿ ಬಾಡಿಗೆ ಕೊಡದೇ ಇರುವಿರಿ,
ಇರುವುದಾದರೆ ಸರಿಯಾಗಿರಿ,
ಸ್ವಚ್ಛತೆ ಪಾಲಿಸಿ ನನ್ನನ್ನು ಕಾಪಾಡಿ
ಇಲ್ಲವಾದರೆ ನಾನು ನಿಮ್ಮನ್ನು ಖಂಡಿತ ಕೊಲ್ಲುವೆ,,,
ನಾನು ಕೆರಳಿ ಒಮ್ಮೆ ಕಂಪಿಸಿದರೆ ಸಾಕು
ನೀವೆಲ್ಲ ಕ್ರಿಮಿ ಕೀಟಗಳಂತೆ ನನ್ನ ಗರ್ಭದಲ್ಲಿ
ಮಣ್ಣಾಗಿ ಹೋಗುವಿರಿ.
ಆಗ ನೀವು ಕಿರುಚುವಿರಿ "ನನ್ನನ್ನು ಕಾಪಾಡಿ,



©KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 13

# ಸಾಮಾನ್ಯ, ಸಂಯೋಜಿತ ವಾಕ್ಯ ಮತ್ತು ಮಿಶ್ರ ವಾಕ್ಯಗಳು

V1E1X1
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಾಕ್ಯದ ಪ್ರಭೇದಗಳಾದ ಸಾಮಾನ್ಯ, ಸಂಯೋಜಿತ ಮತ್ತು ಮಿಶ್ರ ವಾಕ್ಯಗಳನ್ನು ಗುರುತಿಸಲು ಶಕ್ತರಾಗುವರು. ಉದಾಹರಣೆಗಳ ಆಧಾರದಲ್ಲಿ ವಾಕ್ಯ ಪ್ರಭೇದಗಳನ್ನು ತಿಳಿಯುವರು.

**ಚಟುವಟಿಕೆ 1 :** ವಾಕ್ಯ ಪ್ರಭೇದಗಳನ್ನು ಓದಿ ತಿಳಿಯಿರಿ.

**ಸಾಮಾನ್ಯವಾಕ್ಯ :** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು 'ಸಾಮಾನ್ಯವಾಕ್ಯ' ಎನ್ನುವರು.
**ಉದಾಹರಣೆ :** ಜಾಣ ವಿದ್ಯಾರ್ಥಿಯು ತನ್ನ ಅಭ್ಯಾಸವನ್ನು ಚೆನ್ನಾಗಿ ಮಾಡುತ್ತಾನೆ. ಈ ವಾಕ್ಯದಲ್ಲಿ 'ಮಾಡುತ್ತಾನೆ' ಎಂಬ ಒಂದೇ ಒಂದು ಕ್ರಿಯಾಪದವಿದೆ ಅಲ್ಲದೆ ಯಾವ ಅಪೂರ್ಣ ಕ್ರಿಯಾಪದಗಳು ಇರುವುದಿಲ್ಲ. ಆದ್ದರಿಂದ ಇದು ಸಾಮಾನ್ಯ ವಾಕ್ಯ.

**ಸಂಯೋಜಿತ ವಾಕ್ಯ :** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣ ಅಭಿಪ್ರಾಯದ ವಾಕ್ಯ ಇದ್ದರೆ ಅದು ಸಂಯೋಜಿತ ವಾಕ್ಯ. ಉದಾಹರಣೆಗೆ: ಶ್ರೀರಾಮ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿ ಋಷಿ ಆಶ್ರಮದ ಉಪವನ ಹೊಕ್ಕಿತು. ಆದ್ದರಿಂದ ಲವನು ಕುದುರೆಯನ್ನು ಕಟ್ಟಿ ಹಾಕಿದನು. ಈ ಮೇಲಿನ ವಾಕ್ಯದಲ್ಲಿ ಪೂರ್ಣ ವಿಚಾರ ತಿಳಿಸುವ ಎರಡು ಸ್ವತಂತ್ರ ವಾಕ್ಯಗಳಿವೆ.

1) ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿ ಋಷಿ ಆಶ್ರಮದ ಉಪವನ ಹೊಕ್ಕಿತು.
2) ಆದ್ದರಿಂದ ಲವನು ಅದನ್ನು ಕಟ್ಟಿ ಹಾಕಿದನು.

**ಮಿಶ್ರವಾಕ್ಯ :** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದರೆ ಅದು ಮಿಶ್ರವಾಕ್ಯ.
**ಉದಾಹರಣೆ :** ದಯಾನಂದರು ವಿದ್ಯಾಭ್ಯಾಸವನ್ನು ಮುಗಿಸಿ ಗುರುವಿನ ಆಶೀರ್ವಾದ ಪಡೆದು, ವೈಯಕ್ತಿಕ ಜ್ಞಾನ ಪ್ರಸಾರಕ್ಕಾಗಿ ದೇಶ ಸಂಚಾರ ಹೊರಟರು.

**ಪ್ರಧಾನವಾಕ್ಯ** – ದಯಾನಂದರು ಜ್ಞಾನಪ್ರಸಾರಕ್ಕಾಗಿ ದೇಶ ಸಂಚಾರ ಹೊರಟರು.
**ಅಧೀನವಾಕ್ಯ** – ದಯಾನಂದರು ವಿದ್ಯಾಭ್ಯಾಸ ಮುಗಿಸಿ, ಗುರುವಿನ ಆಶೀರ್ವಾದ ಪಡೆದು,

© KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ವಾಕ್ಯಗಳನ್ನು ಗಮನಿಸಿ ವಾಕ್ಯ ಪ್ರಭೇದವನ್ನು ಹೆಸರಿಸಿ.

1. ಸಾಮ್ರಾಟ ಅಶೋಕನು ಬೌದ್ಧಧರ್ಮ ಪ್ರಚಾರಕ್ಕಾಗಿ ಬಹಳ ಶ್ರಮಿಸಿದನು.:

______________________________

2. ಕಲಾವಿದ ವೆಂಕಟಪ್ಪನವರು ಇಂದು ಕಣ್ಮರೆಯಾಗಿದ್ದಾರೆ. ಆದರೆ ಅವರ ಕಲಾಕೃತಿಗಳು ಅಜರಾಮರವಾಗಿವೆ.

______________________________

3. ಪಿಟೀಲು ಚೌಡಯ್ಯನವರ ಕಲಾಪ್ರೌಢಿಮೆಯನ್ನು ಮೆಚ್ಚಿ, ಅಂದಿನ ಮೈಸೂರು ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರು 'ಸಂಗೀತರತ್ನ'ವೆಂಬ ಬಿರುದು ದಯಪಾಲಿಸಿ ಗೌರವಿಸಿದರು.

______________________________

**ಚಟುವಟಿಕೆ 3 :** ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಸಾಮಾನ್ಯವಾಕ್ಯ ಎಂದರೇನು? ಉದಾಹರಣೆ ಕೊಡಿ.

2. ಸಂಯೋಜಿತವಾಕ್ಯ ಎಂದರೇನು? ಉದಾಹರಣೆ ಕೊಡಿ.

@KTBS
NOT TO BE REPUBLISHED

3. ಮಿಶ್ರವಾಕ್ಯ ಎಂದರೇನು? ಉದಾಹರಣೆ ಕೊಡಿ.

ಬುನಾದಿ ಹಂತ – ಚಟುವಟಿಕೆ ಹಾಳೆ 14

# ಸಾರಾಂಶ ಬರೆಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪದ್ಯವನ್ನು ಓದಿ ಅರ್ಥೈಸುವುದು ಪದ್ಯ/ಗದ್ಯದ ಸಾರಾಂಶ ಬರೆಯುವರು ಮತ್ತು ಮೌಲ್ಯಚಿಂತನೆ ಮಾಡುವರು.

**ಚಟುವಟಿಕೆ 1 :** ಕೊಟ್ಟಿರುವ ಪದ್ಯಭಾಗವನ್ನು ಶಿಕ್ಷಕರ ಸಹಾಯದಿಂದ ಓದಿ ಅರ್ಥಮಾಡಿಕೊಂಡು ಸಂವಾದದಲ್ಲಿ ಭಾಗವಹಿಸುವುದು.

## ಪದ್ಯ: ಮಾನವೀಯತೆ

ಕವಿ: ಕೆ. ಷರೀಫಾ

ಮಾನವೀಯತೆ
ಏನಾಗಿದೆ ನಿನಗೆ?
ಹೀಗೇಕೆ ನಡುಬೀದಿಯಲಿ
ಮೌನವಾಗಿ ಮಲಗಿರುವೆ

ಸತ್ಯಕ್ಕೆ ಜಯವೆಂಬ
ನಿನ್ನ ವಾಕ್ಯ ಏನಾಯಿತಿಂದು?
ನಿನ್ನ ಸಂಗಾತಿಗಳೆಲ್ಲ ಇಂದು
ಯಾಕೆ ಪಕ್ಷಾಂತರ ಮಾಡಿದರು?

ಈ ಕೊರಗಿನಲ್ಲಿಯೇ ನೀನು
ಸೊರಗಿ ಹೋಗುತ್ತಲಿರುವೆಯಾ?
ನೆಲದಲಿ ಹುಗಿದು ಹೋಗಿ
ಅವಶೇಷವಾಗುತ್ತಲಿರುವೆಯಾ?

ಹೀಗೆ ಬೀದಿಯಲಿ ಬಿದ್ದು,
ಒದ್ದಾಡಿ ಕೊನೆಯುಬಿಕ್ಕು
ಹತ್ತಿದಾಗಲೂ ಜನ ನಿನಗೆ
ಕಲ್ಲು ಹೊಡೆದು ಘಾಸಿಗೊಳಿಸಿ

ಗಾಯ ಮಾಡಿದರು.
ನಿನ್ನ ದೇಹದಿಂದಹರಿದು
ಸೋರಿದ ರಕ್ತದ ಕೆಂಪು
ಬಡಿದೆಬ್ಬಿಸಿತು ನನ್ನ
ಮಲಗಿರುವ ಆತ್ಮವ
ಸಿಡಿದೇಳುವಂತೆ ಮಾಡಿತು.

ಹಾದಿಬೀದಿಯಲಿ ಹೀಗೆ
ನಿನಗೆ ಅವಮಾನಿಸುತ್ತಿರುವಾಗ
ನಾನು ನಿನ್ನ ಹತ್ತಿರ ಬಂದು
ಎಬ್ಬಿಸಿ ಮಾತನಾಡಿಸಿದೆ.

ಇದನ್ನು ಕಂಡೂ ಕಾಣದಂತೆ
ಸತ್ಯ ಮಾನವೀಯತೆಗಳ ಬಗ್ಗೆ
ಭಾಷಣ ಮಾಡುವ ಜನರು
ಮೂಗು ಮುಚ್ಚಿಕೊಂಡು
ರಸ್ತೆಯಂಚಿನಲಿ ಮುಖ
ತಿರುವಿಕೊಂಡು ಹೋಗುತ್ತಿದ್ದರು



@KTBS NOT TO BE REPUBLISHED

**ಚಟುವಟಿಕೆ 2 :** ಘಟನೆ ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

## ಚಿಪ್ಕೋ ಚಳವಳಿ

ಪರಿಸರ ಪ್ರಜ್ಞೆಯ ತೀವ್ರ ಅಭಾವ ಬಹು ಸಾಮಾನ್ಯವಾದರೂ ಪರಿಸರವನ್ನು ಸಂರಕ್ಷಿಸಲು ಹೋರಾಟಕ್ಕೇ ನಿಲ್ಲುವ ಅಪೂರ್ವ ಪ್ರಯತ್ನಗಳನ್ನು ನಾವು ಆಗಾಗ ಅಪರೂಪವಾಗಿ ನೋಡಬಹುದು. 'ಚಿಪ್ಕೋ ಚಳವಳಿ' ಇದಕ್ಕೊಂದು ಉತ್ತಮ ಉದಾಹರಣೆ. ಚಿಪ್ಕೋ ಈ ಹೆಸರು ನಿಮಗೆ ವಿಚಿತ್ರವಾಗಿ ಕೇಳಬಹುದು. ಇದೊಂದು ಹಿಂದಿ – ಭಾಷೆಯ ಪದ. ಅರ್ಥ: ಅಪ್ಪಿಕೋ, ತಬ್ಬಿಕೋ ! ಈ ಚಳವಳಿ ಪ್ರಾರಂಭವಾದದ್ದು 1973ರಲ್ಲಿ, ಉತ್ತರಪ್ರದೇಶದ ಚಮೋಲಿ ಜಿಲ್ಲೆಯ ಮಂಡಲ್ ಹಳ್ಳಿಯಲ್ಲಿ. ಈ ಚಳವಳಿಗೆ ಕಾರಣರಾದವರು ಮಂಡಲ್ ಹಳ್ಳಿಯ ಅನಕ್ಷರಸ್ಥ ಮಹಿಳೆಯರು. ಅದಾದದ್ದು ಹೀಗೆ: ಮಂಡಲ್ ಗ್ರಾಮದ ಸುತ್ತಮುತ್ತ ಅರಣ್ಯವಿದೆ. ಈ ಅರಣ್ಯದಿಂದ ಮರ ಮುಟ್ಟು, ಸೌದೆ ಇತ್ಯಾದಿಗಳಿಗಾಗಿ ಮರ ಕಡಿಯುವುದನ್ನು ಸರ್ಕಾರ ನಿಷೇಧಿಸಿತ್ತು; ಆದರೆ ಅದೇ ಅರಣ್ಯದಲ್ಲಿ ಮರಗಳನ್ನು ಕಡಿಯಲು ಅಲಹಾಬಾದಿನ ಆಟದ ಸಾಮಾನುಗಳ ತಯಾರಕನೊಬ್ಬನಿಗೆ ಅನುಮತಿ ನೀಡಿತ್ತು. ಮರ ಕಡಿಯಲು ಮಂಡಲ್ ಗ್ರಾಮಕ್ಕೆ ಸಿಬ್ಬಂದಿಯವರೊಂದಿಗೆ ಕಂಟ್ರಾಕ್ಟರ್ ಬಂದ. ಗ್ರಾಮದ ಮಹಿಳೆಯರು ಮರ ಕಡಿಯಕೂಡದೆಂದು ಕೇಳಿಕೊಂಡರು. ಆದರೆ ಕಂಟ್ರಾಕ್ಟರ್ ಅದಕ್ಕೆ ಸಿದ್ಧನಿರಲಿಲ್ಲ. ಗ್ರಾಮದ ಜನತೆ ಮರಗಳನ್ನು ರಕ್ಷಿಸಲು ನಿರ್ಧರಿಸಿತು. ಜನ ಮುಂದೆ ಬಂದು ಕಡಿಯಬೇಕೆಂದು ಗುರುತು ಮಾಡಿದ್ದ ಮರಗಳನ್ನು ಅಪ್ಪಿಕೊಂಡರು. "ಮರಗಳನ್ನು ಕಡಿಯಬೇಕಾದರೆ ಅದಕ್ಕಿಂತ ಮುಂಚೆ ನಮ್ಮನ್ನು ಕತ್ತರಿಸಿ"ಎಂದರು. ಈ ಅಹಿಂಸಾತ್ಮಕ ಪ್ರತಿಭಟನೆ ಕಂಟ್ರಾಕ್ಟರನ್ನು ತಬ್ಬಿಬ್ಬುಗೊಳಿಸಿತು. ಅಲ್ಲಿಂದ ಆತ ಬರಿಗೈಯಲ್ಲಿ ಹಿಂದಿರುಗಿ ಹೋದ.

@KTBS NOT TO BE REPUBLISHED

1. ಚಿಪ್ಕೋ ಚಳುವಳಿ ಎಂದು ಕರೆಯಲು ಕಾರಣವೇನು? ಅದು ಹೇಗೆ ಪ್ರಾರಂಭವಾಯಿತು?

______________________________________________

______________________________________________

______________________________________________

______________________________________________

______________________________________________

______________________________________________

______________________________________________

2. ಅರಣ್ಯ ಸಂರಕ್ಷಿಸಲು ನಾವು ಕೈಗೊಳ್ಳಬಹುದಾದ ಕ್ರಮಗಳೇನು?

______________________________________________

______________________________________________

______________________________________________

______________________________________________

______________________________________________

______________________________________________

______________________________________________

3. ಅರಣ್ಯವನ್ನು ನಾವು ಏಕೆ ಸಂರಕ್ಷಿಸಬೇಕು?

______________________________________________

______________________________________________

______________________________________________

______________________________________________

______________________________________________

ಬುನಾದಿ ಹಂತ – ಚಟುವಟಿಕೆ ಹಾಳೆ 15

# ಕವಿತೆ ಮತ್ತು ಕಥೆ

D2Q9I6
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕವಿತೆ ಮತ್ತು ಕಥೆಗಳನ್ನು ಓದಿಕೊಂಡು ಅರ್ಥೈಸುವರು.

**ಚಟುವಟಿಕೆ 1 :** ಪದ್ಯವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಪದ್ಯ: **ನಾ ಬರಿ ಭ್ರೂಣವಲ್ಲ**
ಕವಯತ್ರಿ – ಮಾಲತಿ ಪಟ್ಟಣ ಶೆಟ್ಟಿ

ಅವ್ವಾ
ನಾ ನಿನ್ನ ಮಗಳು
ದೇಹದ ಮುಗುಳು
ನಿನ್ನ ಕನಸಿನ ಅರಳವ್ವಾ
ನಾ ಬರಿ ಭ್ರೂಣವಲ್ಲ

ಏ ಅವ್ವಾ
ಔಷಧಿಯೆಲ್ಲ ವಿಷವಾಗಿ
ಗುಳಿಗೆಗಳೆಲ್ಲ ನಶೆಯಾಗಿ
ಪಾಶವಾಗಿದೆಯವ್ವ ನನ್ನುಸಿರಿಗೆ!
ನಾ ಬರಿ ಭ್ರೂಣವಲ್ಲ

ಏ ಅವ್ವಾ
ನನ್ನ ಜಗತ್ತೆ ಪುಟ್ಟದು
ಕರಿಯುಗುರು ಬೆನ್ನಟ್ಟಿಯಲ್ಲೆ?
ಚಿಂತಿಸಿ ನಾ ಕೆಟ್ಟನವ್ವ
ನಾ ಬರಿ ಭ್ರೂಣವಲ್ಲ

1. ಅವ್ವನ ದೇಹದ ಮುಗುಳು ಯಾರು?

_______________________________________

_______________________________________

2. ಭ್ರೂಣಾವಸ್ಥೆಯಲ್ಲಿರುವ ಮಗುವಿಗೆ ವಿಷವಾಗಿರುವುದು ಯಾವುದು?

_______________________________________

_______________________________________

3. ಭ್ರೂಣಾವಸ್ಥೆಯ ಮಗುವನ್ನು ಬೆನ್ನಟ್ಟಿರುವುದು ಯಾವುದು?

_______________________________________

_______________________________________

@KTBS
NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಕಥೆಯನ್ನು ಓದೋಣ ಮೌಲ್ಯವನ್ನು ಅರ್ಥೈಸಿಕೊಳ್ಳೋಣ.

ಒಂದೂರಿನಲ್ಲಿ ಬಡದಂಪತಿಗಳ ಬಳಿ ಒಂದು ಹಸುವಿತ್ತು. ಹಸು ಕೊಡುವ ಹಾಲೇ ಅವರ ಜೀವನಾಧಾರ. ಹಸುವಿಗೆ ಸಾಕಷ್ಟು ಹುಲ್ಲು ಹಾಕಲು ಅವರಿಗೆ ಅನುಕೂಲಗಳಿರಲಿಲ್ಲ. ಪ್ರತಿದಿನ ಬೆಳಿಗ್ಗೆ ಗೃಹಿಣಿ ಹಸುವಿಗೆ ಸ್ನಾನ ಮಾಡಿಸಿ, ಕುಂಕುಮವಿಟ್ಟು ಪೂಜಿಸುತ್ತಿದ್ದಳು. 'ನೀನು ನಮ್ಮ ಪಾಲಿನ ದೇವರು. ನಿನ್ನಿಂದಾಗಿ ನಮ್ಮ ಜೀವನ ನಡೆಯುತ್ತಿದೆ' ಎಂದು ಹೇಳಿ ಅದರ ಪಾದಕ್ಕೆ ನಮಸ್ಕರಿಸುತ್ತಿದ್ದಳು. ನಂತರ ಹಸುವನ್ನು ಹುಲ್ಲು ಮೇಯ್ದು ಕೊಂಡು ಬರಲು ಅಟ್ಟುತ್ತಿದ್ದಳು. ಹಸು ಯಾರದೋ ಹೊಲಕ್ಕೆ ಹೋಗುತ್ತಿತ್ತು. ಹುಲ್ಲು ಮೇಯುತ್ತಿತ್ತು. ಕೆಲವೊಮ್ಮೆ ಹೊಲದ ಮಾಲೀಕರ ಕೈಗೆ ಸಿಕ್ಕಿ ಹಾಕಿ ಕೊಂಡು ಪೆಟ್ಟು ತಿನ್ನುತ್ತಿತ್ತು. ಅವರು ಹೊಡೆದೋಡಿಸಿದಾಗ ಅಲ್ಲಿಂದ ಮುಂದಿನ ಹೊಲಕ್ಕೆ ನುಗ್ಗುತ್ತಿತ್ತು. ಕೆಲವೊಮ್ಮೆ ಅಲ್ಲಿಯೂ ಹೊಡೆತ ತಿನ್ನುತ್ತಿತ್ತು. ಹೇಗೋ ಏನೋ ಅರೆಹೊಟ್ಟೆ ತುಂಬಿಸಿ ಕೊಂಡು ಸಂಜೆ ಮನೆಗೆ ಮರಳುತ್ತಿತ್ತು. ಆಗ ಗೃಹಿಣಿ ಅದರ ಕಾಲುಗಳನ್ನು ತೊಳೆದು 'ನೀನು ನಮ್ಮ ಪಾಲಿನ ದೇವರು. ನಿನ್ನಿಂದಾಗಿ ನಮ್ಮ ಜೀವನ ನಡೆಯುತ್ತಿದೆ'. ಎಂದು ಹೇಳಿ ನಮಸ್ಕರಿಸಿ, ಹಾಲು ಕರೆದುಕೊಳ್ಳುತ್ತಿದ್ದಳು. ಒಮ್ಮೆ ಎಲ್ಲೂ ಹುಲ್ಲು ಸಿಗದೆ ಬೇಸರಗೊಂಡ ಹಸು ಊರಂಚಿನಲ್ಲಿದ್ದ ಕಾಡನ್ನು ಪ್ರವೇಶಿಸಿತು. ಕಾಡಿನಲ್ಲಿ ದೊಡ್ಡ ಹುಲ್ಲುಗಾವಲೇ

ಇತ್ತು. ಹಸು ಆನಂದದಿಂದ ಹುಲ್ಲು ಮೇಯಿತು. ಬೈಯ್ಯುವವರು ಹೊಡೆಯುವವರು ಯಾರೂ ಇರಲಿಲ್ಲ. ಕಾಡಿನಲ್ಲೇ ವಾಸವಾಗಿದ್ದ ಮತ್ತೊಂದು ಹಸುವಿನ ಪರಿಚಯವಾಯಿತು. ಎರಡೂ ಕಷ್ಟ ಸುಖ ಹೇಳಿಕೊಂಡವು. ಸಂಜೆಯಾಯಿತು. ಹೊಟ್ಟೆ ತುಂಬ ಹುಲ್ಲು ಮೇಯ್ದಿದ್ದ ಹಸು ಮನೆಗೆ ಹಿಂತಿರುಗಿತು. ಅಂದು ಒಂದೆರಡು ಲೀಟರು ಹಾಲು ಹೆಚ್ಚಾಗಿ ಕೊಟ್ಟಿತು. ಸಂತೋಷಗೊಂಡ ಗೃಹಿಣಿ ಮತ್ತೊಂದು ನಮಸ್ಕಾರ ಮಾಡಿದಳು. ಮರುದಿನ ಹಸು ಮತ್ತೆ ಕಾಡಿಗೆ ಹೋಯಿತು. ಸ್ವಚ್ಛಂದವಾಗಿ ಹುಲ್ಲು ಮೇಯುತ್ತಿದ್ದಾಗ ಕಾಡಿನ ಹಸು 'ಇಲ್ಲಿ ಬೇಕಾದಷ್ಟು ಹುಲ್ಲಿದೆ. ಹೊಡೆಯುವವರು ಯಾರೂ ಇಲ್ಲ. ನೀನು ಇಲ್ಲೇ ಇದ್ದು ಬಿಟ್ಟರೆ, ಊರಿಂದ ಇಲ್ಲಿಗೆ ಮೈಲುಗಟ್ಟಲೇ ನಡೆಯುವ ತೊಂದರೆ ಇರುವುದಿಲ್ಲ. ಒಂದು ಹಿಡಿ ಹುಲ್ಲೂ ಹಾಕದ ಮನೆಗೇಕೆ ಹೋಗುತ್ತೀಯ?' ಎಂದು ಪ್ರಶ್ನಿಸಿತು. ಆಗ ಊರ ಹಸು 'ಅವರು ನನಗೆ ಹುಲ್ಲು ಹಾಕುವುದಿಲ್ಲ ನಿಜ. ಅಲ್ಲಿಂದಿಲ್ಲಿಗೆ ನಡೆಯುವುದು ಕಷ್ಟವೆಂಬುದೂ ನಿಜ. ನನ್ನನ್ನು ಸಾಕಿ ಕೊಂಡವರು ಬಡವರೆಂಬುದೂ ನಿಜ. ಆದರೆ ಪ್ರತಿದಿನ ಬೆಳಗ್ಗೆ ಸಾಯಂಕಾಲ ಗೃಹಿಣಿ ನನ್ನ ಪಾದ ತೊಳೆದು ಪೂಜೆ ಮಾಡಿ ನಮಸ್ಕರಿಸಿ ನೀನು ನಮ್ಮ ಪಾಲಿನ ದೇವರು. ನಿನ್ನಿಂದಾಗಿ ನಮ್ಮ ಜೀವನ ನಡೆಯುತ್ತಿದೆ ಎನ್ನುವ ಒಳ್ಳೆಯ ಮಾತುಗಳನ್ನು ಕೇಳಿದಾಗ ಒಂದು ರೀತಿಯ ಆನಂದವಾಗುತ್ತದೆ. ಆ ಒಳ್ಳೆಯ ಮಾತುಗಳಿಗಾಗಿ ನಾನು ಅಲ್ಲಿಗೆ ಹೋಗುತ್ತೇನೆ' ಎಂದಿತು. ಎಂದೂ ಯಾರಿಂದಲೂ ಒಳ್ಳೆಯ ಮಾತು ಕೇಳದಿದ್ದ ಕಾಡಿನ ಹಸುವಿಗೆ ಊರ ಹಸುವಿನ ಮಾತು ಅರ್ಥವಾಗಲಿಲ್ಲ.

ಪ್ರಶ್ನೆಗಳಿಗೆ ಉತ್ತರಿಸಿ.

1. ಗೃಹಿಣಿಯ ಯಾವ ಮಾತು ಹಸುವಿಗೆ ಆನಂದವನ್ನು ನೀಡುತ್ತಿತ್ತು?

___

___

2. ಕಾಡಿನ ಹಸು ಊರಿನ ಹಸುವಿಗೆ ಏನು ಹೇಳಿತು?

___

___

3. ಈ ಕಥೆಯಿಂದ ನೀನು ತಿಳಿದುಪಾಲಿಸ ಬಹುದಾದ ನೀತಿ ಏನು?

___

___

@KTBS NOT TO BE REPUBLISHED

**ಚಟುವಟಿಕೆ 3 :** ಇಲ್ಲಿರುವ ಸಂಭಾಷಣೆಯನ್ನು ಓದಿ ಅರ್ಥೈಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಮಾನಸಿಕ ಒತ್ತಡ ಯಾರಿಗಿಲ್ಲ? ಅದರ ನಿವಾರಣೆ ಯಾರಿಗೆ ಬೇಡ? ಹಾಗಾಗಿ ಈ ವಿಷಯದ ಬಗ್ಗೆ ಡಾ॥ಪ್ರಕಾಶ್ ವೈದ್ಯರು ಉಪನ್ಯಾಸ ನೀಡಿದಾಗ ಸಭಿಕರು ಕಿಕ್ಕಿರಿದು ಸೇರಿದ್ದರು. ವೈದ್ಯರು ಮಾತನಾಡುತ್ತ 'ಮಾನಸಿಕ ಒತ್ತಡಕ್ಕೆ ಮುಖ್ಯ ಕಾರಣ, ಬದುಕಿನಲ್ಲಿ ಬರುವ ಸಮಸ್ಯೆಗಳಲ್ಲ. ಸಮಸ್ಯೆಗಳ ಬಗ್ಗೆಯೇ ಅನವಶ್ಯಕವಾಗಿ ಚಿಂತಿಸುತ್ತಾ ಇರುವುದು ಮುಖ್ಯ ಕಾರಣ' ಎಂದರು. 'ನಿಮ್ಮ ಮಾತುಗಳನ್ನು ವಿವರಿಸಿ ಹೇಳಿ' ಎಂದು ಸಭಿಕರು ಕೇಳಿದರು.

ವೈದ್ಯರು: ಈಗ ನಾನು 500 ಗ್ರಾಂ ತೂಕದ ಹೂಗುಚ್ಛವನ್ನು ಕೈಯಲ್ಲಿ ಎತ್ತಿ ಹಿಡಿದು ಕೊಂಡಿದ್ದೇನೆ. ಹತ್ತು ನಿಮಿಷ ಹೀಗೇ ಇಟ್ಟು ಕೊಂಡರೆ ಏನಾಗುತ್ತದೆ?

ಸಭಿಕರು: ಏನೂ ಆಗುವುದಿಲ್ಲ.

ವೈದ್ಯರು: ಅರ್ಧ ಗಂಟೆ ಹಾಗೇ ಹಿಡಿದು ಕೊಂಡಿದ್ದರೆ?

ಸಭಿಕರು: ಕೈನೋವು ಬರುತ್ತದೆ.

ವೈದ್ಯರು: 2 ಗಂಟೆಗಳ ಕಾಲ ಹಾಗೆಯೇ ಹಿಡಿದು ಕೊಂಡರೆ ಏನಾಗುತ್ತದೆ?

ಸಭಿಕರು: ಕೈಮರಗಟ್ಟಿ ಹೋಗುತ್ತದೆ.
ವೈದ್ಯರು: ನೀವು ಸರಿಯಾಗಿ ಹೇಳಿದಿರಿ! ಇದನ್ನು ಇಡೀ ದಿನ ಹಿಡಿದಿಟ್ಟುಕೊಂಡರೆ ಏನಾಗುತ್ತದೆ?
ಸಭಿಕರು: ನಿಮ್ಮ ತೋಳು ನಿರುಪಯೋಗವಾಗುತ್ತದೆ. ರಕ್ತಸಂಚಲನೆ ನಿಂತು ಹೋಗಬಹುದು. ಆ ತೋಳು ಪಾರ್ಶ್ವವಾಯುವಿಗೆ ತುತ್ತಾಗಬಹುದು. ಚಿಕಿತ್ಸೆಗಾಗಿ ಆಸ್ಪತ್ರೆ ಸೇರ ಬೇಕಾಗಬಹುದು.
ವೈದ್ಯರು: ಖಂಡಿತವಾಗಿಯೂ ಹೌದು! ಈ ಮಧ್ಯೆ ಆ ಹೂವಿನ ಗುಚ್ಛಕ್ಕೆ ಏನಾದರೂ ಆಗುತ್ತದೆಯೇ? ಅದರ ತೂಕ ಹೆಚ್ಚು ಕಡಿಮೆಯಾಗುತ್ತದೆಯೇ?
ಸಭಿಕರು: ಹೂವಿನಗುಚ್ಛಕ್ಕೆ ಏನೂ ಆಗುವುದಿಲ್ಲ. ಅದು ಹಾಗೇ ಇರುತ್ತದೆ.
ವೈದ್ಯರು: ಈ ತೋಳು ಏಕೆ ನೋವನ್ನನುಭವಿಸುತ್ತದೆ? ಏಕೆ ಚಿಕಿತ್ಸೆ ಪಡೆಯಬೇಕಾಗುತ್ತದೆ?
ಸಭಿಕರು: ತೋಳು ನೋವನ್ನನುಭವಿಸುವುದು. ಏಕೆಂದರೆ ಅದು ಹೂವಿನ ಗುಚ್ಛವನ್ನು ಬಹಳ ಹೊತ್ತು ಎತ್ತಿ ಹಿಡಿದುಕೊಂಡೇ ಇದ್ದುದರಿಂದ!
ವೈದ್ಯರು: ತೋಳಿನ ನೋವನ್ನೂ, ಮರಗಟ್ಟುವುದನ್ನೂ ನಿವಾರಿಸಲು ಏನು ಮಾಡಬೇಕು?
ಸಭಿಕರು: ಆ ಹೂವಿನ ಗುಚ್ಛವನ್ನು ಕೆಳಗಿಟ್ಟರೆ ಸಾಕು!
ವೈದ್ಯರು: ಶಹಬ್ಬಾಷ್! ನಾನು ಇದೇ ಉತ್ತರವನ್ನು ನಿರೀಕ್ಷಿಸುತ್ತಿದ್ದೆ. ಈಗ ಈ ಪ್ರಯೋಗ ಮಾಡಿ ತೋರಿಸಿದ ಉದ್ದೇಶ ನಿಮಗೆ ತಿಳಿಸುತ್ತೇನೆ. ಜೀವನದಲ್ಲಿ ಸಮಸ್ಯೆಗಳು ಬರುತ್ತವೆ. ಅದನ್ನು ಸ್ವಲ್ಪ ಹೊತ್ತು ಎತ್ತಿ ಹಿಡಿದರೆ ತೊಂದರೆಯೇನೂ ಆಗುವುದಿಲ್ಲ. ಆದರೆ ದೀರ್ಘಕಾಲ ಅದರ ಬಗೆಗೇ ಯೋಚಿಸುತ್ತಿದ್ದರೆ, ತಲೆಯ ಮೇಲಿಟ್ಟು ಕೊಂಡರೆ ಆಗ ನಮ್ಮ ಜೀವನವೂ ಮರಗಟ್ಟುತ್ತದೆ. ನೋವಾಗುತ್ತದೆ. ಪಾರ್ಶ್ವವಾಯುವಿಗೆ ತುತ್ತಾಗುತ್ತದೆ. ಚಿಕಿತ್ಸೆ ಬೇಕಾಗುತ್ತದೆ. ಸಮಸ್ಯೆಗಳು ಬಂದಾಗ ಅವನ್ನು ಎದುರಿಸಬೇಕು. ಎಷ್ಟು ಬೇಕೋ ಅಷ್ಟು ಗಮನ ಕೊಡಬೇಕು. ಎತ್ತಿ ತಲೆಯ ಮೇಲಿಟ್ಟುಕೊಳ್ಳಬಾರದು. ಇದು ಮಾನಸಿಕ ಒತ್ತಡವನ್ನು ನಿವಾರಿಸಿಕೊಳ್ಳುವ ಒಂದು ಸರಳ ಉಪಾಯ! ಈಗ ನಾವೂ ಯಾವುದಾದರು ಹೂವಿನಗುಚ್ಛವನ್ನು ಎತ್ತಿ ಹಿಡಿದು ಕೊಂಡಿದ್ದರೆ ಅದನ್ನು ಕೆಳಗಿಳಿಸುವ ಸರಳ ಉಪಾಯವನ್ನು ಅನುಸರಿಸಬಹುದು.

NOT TO BE REPUBLISHED @KTBS

ಪ್ರಶ್ನೆಗಳು: 1. ವೈದ್ಯರಾದ ಡಾ. ಪ್ರಕಾಶ್ ಅವರು ಯಾವ ವಿಷಯವನ್ನು ಕುರಿತು ಉಪನ್ಯಾಸ ನೀಡುತ್ತಿದ್ದರು?

____________________________________________________

____________________________________________________

____________________________________________________

____________________________________________________

2. ಮಾನಸಿಕ ಒತ್ತಡವನ್ನು ನಿವಾರಿಸಲು ಸರಳ ಉಪಾಯ ಯಾವುದು?

____________________________________________________

____________________________________________________

____________________________________________________

____________________________________________________

____________________________________________________

ಬುನಾದಿ ಹಂತ – ಚಟುವಟಿಕೆ ಹಾಳೆ 16

# ವಚನಗಳು ಹಾಗೂ ಕೀರ್ತನೆಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

K3T9Q9

**ಕಲಿಕಾಫಲ :** ವಚನಗಳು ಹಾಗೂ ಕೀರ್ತನೆಗಳನ್ನು ಓದಿ ಅರ್ಥೈಸಿಕೊಂಡು ಬರೆಯುವರು.

**ಚಟುವಟಿಕೆ 1 :** ವಚನಕಾರರ ವಚನಗಳನ್ನು ಗಟ್ಟಿಯಾಗಿ ಓದಿ, ಅವುಗಳ ವೈಶಿಷ್ಟ್ಯವನ್ನು ತಿಳಿದು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸೋಣ.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕಂಜಿ;
ಕಳವೆಯಲ್ಲಾ ಹೋಗಿ ಬರಿಗೋಣಿ ಉಳಿದಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತಾ! ರಾಮನಾಥ.

ಪದಗಳ ಅರ್ಥ : ಕಳವೆ = ಬತ್ತ, ಇರುಳು = ರಾತ್ರಿ, ಸುಂಕ= ತೆರಿಗೆ, ಅಳಿಮನ = ಹೀನ ಮನಸ್ಸು, ಅಪ್ರಮಾಣಿಕ ಮನಸ್ಸು

1. ಹರಿದ ಗೋಣಿಯಲ್ಲಿ ಏನನ್ನು ತುಂಬಿದ?

_______________________________________

_______________________________________

2. ಕಳವೆ ತುಂಬಿದ ಚೀಲವನ್ನು ಹೊತ್ತು ಇರುಳು ನಡೆದದ್ದು ಏಕೆ?

_______________________________________

_______________________________________

3. ಅಳಿಮನದವನ ಭಕ್ತಿ ಹೇಗಿರುತ್ತದೆ?

_______________________________________

_______________________________________

4. ಈ ವಚನದಿಂದ ನೀವು ತಿಳಿದ ನೀತಿ ಏನು? ಇದನ್ನು ನಿಮಗೂ ಅನ್ವಯಿಸಬಹುದೇ?

_______________________________________

_______________________________________

_______________________________________

**ಚಟುವಟಿಕೆ 2 :** ಕೊಟ್ಟಿರುವ ವಚನಕ್ಕೆ ಸಾರಾಂಶ ಬರೆಯಿರಿ.

_______________________________________

_______________________________________

ಅರಿಯದವರೊಡನೆ ಸಂಗವ ಮಾಡಿದಡೆ
ಕಲ್ಲ ಹೊಯ್ದು ಕಿಡಿಯ ತೆಗೆದು ಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪೂರದ ಗಿರಿಯನುರಿಕೊಂಬಂತೆ

_______________________________

_______________________________

_______________________________

NOT TO BE REPUBLISHED @KTBS

**ಚಟುವಟಿಕೆ 3 :** ಕೀರ್ತನೆಯನ್ನು ಓದಿ, ಅದರಲ್ಲಿ ವ್ಯಕ್ತವಾಗಿರುವ ಸಾರಾಂಶವನ್ನು ಸಂಕ್ಷಿಪ್ತವಾಗಿ ಬರೆಯೋಣ.

> ಅಂಬಿಗ, ನಾ ನಿನ್ನನಂಬಿದೆ ಜಗ-
> ದಂಬಾರಮಣ ನಿನ್ನ ನಂಬಿದೆ
> ಆರು ತೆರೆಯ ನೋಡಂಬಿಗ, ಅದು
> ಮೀರಿ ಬರುತಲಿದೆ ಅಂಬಿಗ
> ಯಾರಿಂದಲಾಗದು ಅಂಬಿಗ ಅದ ನಿ-
> ವಾರಿಸಿ ದಾಟಿಸೊ ಅಂಬಿಗ
>
> ಪದಗಳ ಅರ್ಥ : ಅಂಬಿಗ = ಪರಮಾತ್ಮ, ಆರು ತೆರೆ = ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು, ಸಾವು

________________________________________
________________________________________
________________________________________
________________________________________
________________________________________
________________________________________
________________________________________

**ಚಟುವಟಿಕೆ 4 :** ಕೊಟ್ಟಿರುವ ತತ್ವಪದವನ್ನು ಓದಿ ಅರ್ಥೈಸಿಕೊಂಡು ಸಾರಾಂಶವನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

> ಚೊಕ್ಕವಾಯಿತು ಈಗ ಹಣ ಬಣ್ಣ
> ಚಿನ್ನ ಚಿಕ್ಕವಾಯಿತು ಈಗ
> ಕತ್ತಲೆ ದಿನದಲ್ಲಿ ಬೆಳದಿಂಗಳುಟ್ಟಿಸಿ
> ಕತ್ತಲೆಯ ಬಿಡಿಸೋ ಕಾಂತಿಯ ಬಣ್ಣ
> ಕಷ್ಟ ಕಾಮಕ್ರೋಧ ಮದಮತ್ಸರಂಗಳು
> ನಷ್ಟವಾಯಿತು ಕಾಯ ಪಟ್ಟಣದಲ್ಲಿ
> ವೆಚ್ಚ ಮಾಡುವುದಲ್ಲ ವೇಳೆ ತೀರುವುದಲ್ಲ
> ಅವಸಾನ ಕಾಲಕ್ಕೆ ಆಧಾರ ಬಣ್ಣ

> ಪದಗಳಅರ್ಥ : ಚೊಕ್ಕ = ಶುದ್ಧ, ಅವಸಾನ = ಕೊನೆಗಾಲ, ಅರಿಷಡ್ವರ್ಗಗಳು = ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ

NOT TO BE REPUBLISHED @KTBS

____________________________________________________________
____________________________________________________________
____________________________________________________________
____________________________________________________________
____________________________________________________________
____________________________________________________________

## ಬುನಾದಿ ಹಂತ – ಚಟುವಟಿಕೆ ಹಾಳೆ 17

# ಪತ್ರಲೇಖನ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ** : ವಿದ್ಯಾರ್ಥಿಗಳು ದೈನಂದಿನ ವ್ಯವಹಾರಗಳಿಗೆ ಸಂಬಂಧಿಸಿದ ವೈಯಕ್ತಿಕ ಮತ್ತು ವ್ಯವಹಾರಿಕ ಪತ್ರಗಳನ್ನು ಹಂತಗಳೊಂದಿಗೆ ಬರೆಯುವರು.

**ಚಟುವಟಿಕೆ 1 :** ಪತ್ರ ಬರೆವಣಿಗೆಯ ಅವಶ್ಯಕತೆಯ ಕುರಿತು ಸಹಪಾಠಿಯೊಂದಿಗೆ ಚರ್ಚಿಸಿ ಬರೆಯಿರಿ.

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

@KTBS NOT TO BE REPUBLISHED

2. ಪತ್ರ ಬರೆಯುವ ಸಂದರ್ಭಗಳು ಯಾವುವು?

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

**ಚಟುವಟಿಕೆ 2 :** ಮಾದರಿ ಪತ್ರಗಳನ್ನು ಓದಿ, ಗುಂಪಿನಲ್ಲಿ ಚರ್ಚಿಸಿ ಪ್ರಶ್ನೆಗಳಿಗೆ ಉತ್ತರಿಸೋಣ.

## ವ್ಯಾವಹಾರಿಕ ಪತ್ರ

ಇಂದ,
ಶ್ರುತಿ
# 48. ಹೊಸಬಡಾವಣೆ,
3 ನೇ ಕ್ರಾಸ್, ತೀರ್ಥಹಳ್ಳಿ.

ಗೆ,
ಮಾನ್ಯ ಅಧ್ಯಕ್ಷರು,
ಪುರಸಭೆ, ತೀರ್ಥಹಳ್ಳಿ.

ಮಾನ್ಯರೇ,

ವಿಷಯ : ಶುದ್ಧ ಕುಡಿಯುವ ನೀರಿನ ಘಟಕವನ್ನು ಒದಗಿಸಿಕೊಡುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಊರಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಕೊಳವೆ ಬಾವಿಗಳಲ್ಲಿ ಹಾಗೂ ಕೊಳಾಯಿಗಳಲ್ಲಿ ಬರುವ ನೀರು ಕಲುಷಿತವಾಗಿದ್ದು, ಕುಡಿಯಲು ಯೋಗ್ಯವಾಗಿಲ್ಲ. ಈ ನೀರನ್ನು ಕುಡಿದ ಹಲವರಿಗೆ ಆರೋಗ್ಯದಲ್ಲಿ ಸಮಸ್ಯೆ ಉಂಟಾಗಿದೆ. ನಮ್ಮ ಊರಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಇರುವುದಿಲ್ಲ. ಆದ್ದರಿಂದ ತಾವು ನಮ್ಮ ಊರಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಒದಗಿಸಿಕೊಟ್ಟು, ನಮಗೆ ಆಗಿರುವ ತೊಂದರೆಯನ್ನು ಸರಿಪಡಿಸಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಸ್ಥಳ : ತೀರ್ಥಹಳ್ಳಿ,
ತಮ್ಮ ನಂಬುಗೆಯ

ದಿನಾಂಕ : 17/06/2025

@KTBS NOT TO BE REPUBLISHED

ಹೊರವಿಳಾಸ

| | |
|---|---|
| ಶ್ರುತಿ<br># 48. ಹೊಸಬಡಾವಣೆ,<br>3 ನೇ ಕ್ರಾಸ್, ತೀರ್ಥಹಳ್ಳಿ. | ಮಾನ್ಯ ಅಧ್ಯಕ್ಷರು,<br>ಪುರಸಭೆ, ತೀರ್ಥಹಳ್ಳಿ. |

# ವೈಯಕ್ತಿಕ ಪತ್ರ

ಕ್ಷೇಮ  ದಿನಾಂಕ : 08/07/2025

ವತ್ಸಲ
ಚಾಮರಾಜನಗರ

ಮಾತೃಶ್ರೀಯವರಿಗೆ,

ನಿಮ್ಮ ಮಗಳಾದ ವತ್ಸಲ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿದ್ದೀರೆಂದು ನಂಬಿರುತ್ತೇನೆ. ಈ ಪತ್ರ ಬರೆದ ಮುಖ್ಯ ಉದ್ದೇಶವೆಂದರೆ ನಾನು ಈ ಬಾರಿಯ ಎಸ್. ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಬೇಕೆಂದು ನಿರ್ಧರಿಸಿದ್ದೇನೆ. ಅದಕ್ಕಾಗಿ ಪ್ರತಿದಿನ ಬೆಳಗ್ಗೆ 5.00 ಗಂಟೆಗೆ ಎದ್ದು ನಮ್ಮ ಗುರುಗಳು ಹಾಕಿ ಕೊಟ್ಟ ವೇಳಾಪಟ್ಟಿಯಂತೆ ಆಯಾಯ ದಿನದ ಪಾಠಗಳನ್ನು ಅಂದಂದೇ ಓದುತ್ತಿದ್ದೇನೆ. ಪ್ರತಿ ಭಾನುವಾರದಂದು ಕಳೆದ ವರ್ಷದ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿಕೊಂಡು, ಅವುಗಳಿಗೆ ಉತ್ತರಿಸುತ್ತಿದ್ದೇನೆ. ನನಗೆ ಅರ್ಥವಾಗದ ವಿಷಯಗಳನ್ನು ಶಿಕ್ಷಕರಿಂದ ಕೇಳಿ ಅರ್ಥೈಸಿಕೊಳ್ಳುತ್ತಿದ್ದೇನೆ. ಬಿಡುವಿನ ವೇಳೆಯಲ್ಲಿ ಗೆಳೆಯರೊಡನೆ ಪಾಠದ ಬಗ್ಗೆ ಚರ್ಚೆ ನಡೆಸುತ್ತಿದ್ದೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ನೀವು ನನ್ನ ಬಗ್ಗೆ ಚಿಂತಿಸಬೇಡಿ. ತಂದೆಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ. ಇನ್ನೇನು ವಿಷಯವಿಲ್ಲ.

ವಂದನೆಗಳೊಂದಿಗೆ,

ಇತಿ ನಿಮ್ಮ ಪ್ರೀತಿಯ

ಮಗಳು

ವತ್ಸಲ

@KTBS NOT TO BE REPUBLISHED

1. ಎರಡು ಪತ್ರಗಳ ವಿಷಯಗಳೇನು?

_______________________________________________

_______________________________________________

_______________________________________________

_______________________________________________

2.ಎರಡು ಪತ್ರಗಳಲ್ಲಿರುವ ಬರೆವಣಿಗೆ ಸ್ವರೂಪದ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

_______________________________________________

_______________________________________________

_______________________________________________

_______________________________________________

## ಬುನಾದಿ ಹಂತ – ಚಟುವಟಿಕೆ ಹಾಳೆ 18
# ಆತ್ಮಕಥೆ ಮತ್ತು ಜೀವನಚರಿತ್ರೆ

S1G6L4
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಆತ್ಮಕಥೆ, ಜೀವನ ಚರಿತ್ರೆಗಳ ಸ್ವರೂಪವನ್ನು ಗುರುತಿಸುವರು.

**ಚಟುವಟಿಕೆ 1 :** ಸಾಹಿತ್ಯ ಮಂಜರಿ

### ಏಣಗಿ ಬಾಳಪ್ಪ – ನನ್ನ ಕಥೆ ನನ್ನ ವ್ಯಥೆ

ನಾನು ಒಂದು ತೀರ ಸಾದಾ ಕುಟುಂಬದಲ್ಲಿ 1914ರಲ್ಲಿ ಹುಟ್ಟಿದವ. ತಾರೀಖು ಗೊತ್ತಿಲ್ಲ. ಅವ್ವ ಬಾಳಮ್ಮ, ತಂದೆ ಕರಿಬಸಪ್ಪ. ಇವರಿಗೆ ನಾವು ಮೂರು ಮಕ್ಕಳು. ಅಣ್ಣಬಸಪ್ಪ, ಅಕ್ಕವೀರವ್ವ ಮತ್ತು ನಾನು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಏಣಗಿ ನನ್ನೂರು. ನಮಗೆ ಪೂರ್ವಾರ್ಜಿತವಾಗಿ ಹದಿನಾಲ್ಕು ಎಕರೆ ಹೊಲವಿತ್ತು. ಅದು ಬಾಗಾಯತಲ್ಲ ಅಥವಾ ನೀರಾವರಿಯಲ್ಲ. ತಂದೆ ಇದ್ದಿದ್ದರೆ ಅಷ್ಟರಲ್ಲಿಯೇ ಉಂಡುಟ್ಟು ಬದುಕ ಬಹುದಿತ್ತೇನೋ. ಆದರೆ ನನ್ನ ಬಾಲ್ಯದಲ್ಲಿ ಆ ಭಾಗ್ಯ ನನಗಿಲ್ಲವಾಯಿತು. ನಾನು ಹುಟ್ಟಿದ ಮೂರು ವರ್ಷಕ್ಕೆ ತಂದೆ ತೀರಿಕೊಂಡರು. 12–13 ವರ್ಷದವನಿದ್ದಾಗ ಅಕ್ಕ, ಅಣ್ಣನು ತೀರಿಕೊಂಡರು. ಹೊಲವು ಸಾಲದಲ್ಲಿ ಒತ್ತೆಬಿತ್ತು. ನನ್ನ ತಾಯಿ ಸ್ವಲ್ಪ ಸ್ಥಿತಿವಂತರ ಮನೆಯಿಂದ ಬಂದವಳು. ಅದರಿಂದ ಅವಳಿಗೆ ಹೊಲದಲ್ಲಿ ಕೂಲಿ ಮಾಡುವ ಅಭ್ಯಾಸವಿರಲಿಲ್ಲ. ಆದರೆ ದುರ್ದೈವ ಆಕೆಯಿಂದ ಅದನ್ನೂ ಮಾಡಿಸಿತು.ನನ್ನ ಅವ್ವ ಬೇರೆಯವರ ಹೊಲದಲ್ಲಿ ಕೆಲಸಕ್ಕೆ ಹೋಗಲು ಮನಸ್ಸು ಗಟ್ಟಿಮಾಡಿದಳು. ದುಡೀಲಿಕ್ಕೂ ಹೋದಳು. ಆದರೆ ಬೇರೆ ಆಳುಗಳಂತೆ ಇವಳಿಂದ ಕೆಲಸವಾಗುವುದಿಲ್ಲವೆಂದು ಕಂಡ ಸಾಹುಕಾರರು ನಾಳೆಯಿಂದ ಕೆಲಸಕ್ಕೆ ಬರಬೇಡವೆಂದು ಹೇಳಿದರು. ಕಣ್ಣೀರು ಹಾಕುತ್ತಿದ್ದ ಅವ್ವನಿಗೆ ಆಗ ನಾನು ನನ್ನ ಬಾಲಬುದ್ಧಿಗೆ ತಕ್ಕಂತೆ ಹೇಳಿದೆ. 'ಅವ್ವ, ನಾನೂ ನಿನ್ನ ಕೂಡ ಕೆಲಸಕ್ಕೆ ಬರ್ತಿನಿ. ಇಬ್ಬರೂ ದುಡಿದ್ರೆ ಒಂದೇ ಆಳಿನ ಲೆಕ್ಕ ಸಾಹುಕಾರರು ಕೊಡ್ಲಿ' ಎಂದೆ. ಅವ್ವನಿಗೆ ನನ್ನನ್ನು ದುಡಿಸಲು ಮನಸ್ಸಿರಲಿಲ್ಲ. ನನ್ನ ಒತ್ತಾಯಕ್ಕೆ ಒಪ್ಪಿದಳು. ಇಬ್ಬರೂ ದುಡಿಯಲು ಯತ್ನಿಸಿದೆವು. ಆದರೆ ದುಡಿದು ಗೊತ್ತೇ ಇಲ್ಲದ ನನ್ನ ಕೈತುಂಬ ಗುಳ್ಳೆಗಳೆದ್ದವು. ಹಾಗಾಗಿ ಅದೂ ಸಾಗಲಿಲ್ಲ.

ಕೊಟ್ಟಿರುವ ಗದ್ಯದ ಸಾಹಿತ್ಯ ಪ್ರಕಾರವನ್ನು ತಿಳಿಸಿ. ತನ್ನ ಜೀವನಾನುಭವವನ್ನು ತಾನೇ ಬರೆದುಕೊಳ್ಳುವ ಬರೆಹಗಳ ಕುರಿತು ಶಿಕ್ಷಕರೊಂದಿಗೆ ಚರ್ಚಿಸಿ. ಕೆಲವು ಆತ್ಮಕಥೆಗಳನ್ನು ಪಟ್ಟಿಮಾಡಿ.

| | |
|---|---|
| | |
| | |
| | |
| | |
| | |
| | |
| | |
| | |
| | |

© KTBS NOT TO BE REPUBLISHED

**ಚಟುವಟಿಕೆ : 2** ಗದ್ಯವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಗಾಂಧೀಜಿ ದಕ್ಷಿಣಆಫ್ರಿಕಾದಿಂದ ಬಂದು ಕಾಂಗ್ರೆಸ್‌ನ ನಾಯಕರಾಗಿ ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಿದ್ದ ಸಂದರ್ಭ ಅದು. ಸುಭಾಷ್ ಚಂದ್ರ ಗಾಂಧೀಜಿಯನ್ನು ಕಂಡು ಅವರ ಅನುಯಾಯಿಗಳಾದರು. ಸುಭಾಷ್‌ಚಂದ್ರ ಸ್ವತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಅರ್ಪಣಾಭಾವದಿಂದ ಭಾಗವಹಿಸಿದರು. ಗಾಂಧೀಜಿಯವರ ಅಸಹಕಾರ ಸಿದ್ಧಾಂತ ಅವರಿಗೆ ಹಿಡಿಸಲಿಲ್ಲ. ಆಗ ಬಂಗಾಳದ ಹಿರಿಯ ನಾಯಕರಾಗಿದ್ದ ದೇಶಬಂಧು ಚಿತ್ತರಂಜನ್ ದಾಸ್ ರವರನ್ನು ತಮ್ಮ ಗುರುವಾಗಿ ಸ್ವೀಕರಿಸಿದರು. ಭಾರತಕ್ಕೆ 'ಪ್ರಿನ್ಸ್ ಆಫ್ ವೇಲ್ಸ್' ಬರುವುದನ್ನು ವಿರೋಧಿಸಿ ನಡೆದ ಚಳವಳಿಯಲ್ಲಿ ಭಾಗವಹಿಸಿ ಪ್ರಥಮವಾಗಿ ಸೆರೆಮನೆ ಸೇರಿದರು. ಅಲ್ಲಿ ಅವರಿಗೆ ಗುರು ಸಿ. ಆರ್. ದಾಸರವರ ಸಹವಾಸವೂ ಲಭಿಸಿ, ಇದರ ಫಲವಾಗಿ ಅವರ ಜೀವನದಲ್ಲಿ ಮಹತ್ತರ ಬದಲಾವಣೆಗಳಾದವು. ಸೆರೆಮನೆಯಿಂದ ಹೊರಗೆ ಬಂದ ಸಿ. ಆರ್. ದಾಸ್ ಬಂಗಾಳದಲ್ಲಿ ಸ್ವರಾಜ್ಯ ಪಕ್ಷ ಸ್ಥಾಪಿಸಿದರು. ಕಲ್ಕತ್ತಾದ ಮೇಯರ್ ಆದರು. ಆಗ ಸುಭಾಷ್ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಆಗಿ ಸೇವೆ ಸಲ್ಲಿಸಿದರು. ಆ ಅವಧಿಯಲ್ಲಿ ಪೌರರಿಗೆ ನಾಗರಿಕ ಸೌಲಭ್ಯಗಳನ್ನು ಅತ್ಯುತ್ತಮ ರೀತಿಯಲ್ಲಿ ಕಲ್ಪಿಸಿ ಕೊಡಲಾಯಿತು. ಬಂಗಾಳದಲ್ಲಿ ಕ್ರಾಂತಿಕಾರರ ಚಟುವಟಿಕೆಯಿಂದಾಗಿ ಒಬ್ಬ ಯುವಕನು ಆಂಗ್ಲ ಅಧಿಕಾರಿಯನ್ನು ಗುಂಡಿಟ್ಟುಕೊಂದನು. 'ರೌಲಟ್ ಕಾನೂನು' ಬಂಗಾಳದಲ್ಲೆ ಜಾರಿಗೆ ಬಂದು ಸುಭಾಷರೂ ಸೇರಿದಂತೆ ಹಲವರು ಸೆರೆಯಾದರು. ಆರೋಗ್ಯ ಸರಿಯಿಲ್ಲದಿದ್ದ ಅವರನ್ನು ನಂತರ ಬಿಡುಗಡೆ ಮಾಡಲಾಯಿತು.

ಪ್ರಶ್ನೆಗಳು:

1. ಈ ಗದ್ಯಭಾಗವು ಯಾರನ್ನು ಕುರಿತು ಮಾಹಿತಿ ನೀಡುತ್ತದೆ ?

2. ಸುಭಾಷರ ಜೀವನದಲ್ಲಿ ಮಹತ್ತರವಾದ ಪರಿಣಾಮ ಬೀರಿದವರು ಯಾರು ?

3. ಈ ಬಗೆಯ ಬರೆಹಗಳಾದ ಆತ್ಮಕಥೆ ಹಾಗೂ ಜೀವನಚರಿತ್ರೆಯ ವ್ಯತ್ಯಾಸ ಬರೆಯಿರಿ.

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 19
# ಪ್ರವಾಸ ಕಥನ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಯು ತನ್ನ ಜೀವನದ ಪ್ರವಾಸದ ಅನುಭವವನ್ನು ಬರೆಯುವಲ್ಲಿ ಭಾಗವಹಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಪ್ರವಾಸಕಥನವನ್ನು ಗಮನಿಸಿ, ನಿಮ್ಮ ಪ್ರವಾಸದ ಅನುಭವವನ್ನು ಬರೆಯಿರಿ.

ಪ್ಯಾರಿಸ್ ಮಹಾನಗರದ ಸೌಂದರ್ಯವನ್ನು ಹೆಚ್ಚಿಸಿರುವ 984 ಅಡಿ ಎತ್ತರದ ಪ್ರಸಿದ್ಧ "ಐಫೆಲ್ ಟವರ್" ಸೀನ್ ನದಿಯ ದಂಡೆಯಲ್ಲೇ ಇದೆ. ನಾವು ಇದನ್ನು ನೋಡಲು ಎರಡು ಸಾರಿ ಹೋದೆವು, ರಾತ್ರಿಯ ವೇಳೆ ಈ ಟವ–ರಿನ ತುದಿಗೆ ಏರಲು ಆಗದೆ ನಿರಾಶೆ ಗೊಂಡೆವು. ಈ ಟವರ್ ಏರಲು ವಿದ್ಯುತ್ ಲಿಫ್ಟುಗಳಿವೆ. ಬೇಕೆಂದರೆ ಮೆಟ್ಟಲು ಹತ್ತಿ ತುದಿಯ ತನಕವೂ ಹೋಗಿ ಬರಬಹುದು. ಅಲ್ಲಿ ನಿಂತರೆ ಸುಮಾರು ಮೈಲಿಗಳ ದೂರದ ನೋಟ ಸಿಗುತ್ತದೆ. ವಿಮಾನದಲ್ಲಿ ಕುಳಿತು ಈ ಟವರನ್ನು ನೋಡಿದ್ದೆ. ಚಿಕ್ಕ ಆಟಿಕೆಯ ವಸ್ತುವಾಗಿ ಕಾಣಿಸಿತ್ತು. ಈ ಟವರಿನ ಆಚೆ ಕೆನಡಿ ಹೆಸರಿನ ರಸ್ತೆಯೂ ಇದೆ. ಈ ಪ್ರಸಿದ್ಧ ಟವರನ್ನು 1890ರಲ್ಲಿ **ಗುಸ್ಟವೆ ಐಫೆಲ್‌ನು** ನಿರ್ಮಿಸಿದ. ಈ ಟವರಿನ ಅಡಿಯಲ್ಲಿ ಈ ಮಹಾಶಿಲ್ಪಿಯ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಪ್ಯಾರಿಸ್‌ನಗರಕ್ಕೆ ಬರುವ ಪ್ರತಿಯೊಬ್ಬ ಪ್ರವಾಸಿಯೂ ಈ ಟವರನ್ನು ನೋಡದೆ ಹೋಗುವುದಿಲ್ಲ. ಐಫೆಲ್ ಟವರ್ ನೋಡಿ ಹಿಂದಿರುಗುವಾಗ ಮಾರ್ಗದರ್ಶಿನಿ ಡಾಲ್ವಿನ್ ನಮ್ಮ ಗಮನವನ್ನು ಅನೇಕ ಚಾರಿತ್ರಿಕ ಕಟ್ಟಡಗಳ, ಸ್ಮಾರಕಗಳ ಕಡೆ ಸೆಳೆದಳು. ಅವುಗಳಲ್ಲಿ ಫ್ರೆಂಚ್ ಖ್ಯಾತ ಸಾಹಿತಿ ವಾಲ್ಟರ್‌ನ ಸಮಾಧಿ ಕಣ್ಣಿಗೆ ಕಟ್ಟಿದಂತಿದೆ.

@KTBS NOT TO BE REPUBLISHED

# ಸನ್ನಿವೇಶ ರಚನೆ

B4D7H3
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಚಿತ್ರ, ಘಟನೆ ಅಥವಾ ದೃಶ್ಯದಿಂದ ಸನ್ನಿವೇಶವನ್ನು ಕಲ್ಪಿಸಿ ಕಥೆ ರಚಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಪ್ರಶ್ನೆಗಳಿಗೆ ಉತ್ತರಿಸಿ.



ಚಿತ್ರ – 1



ಚಿತ್ರ – 2

@KTBS NOT TO BE REPUBLISHED

ಚಿತ್ರ – 1 ಅನ್ನು ಗಮನಿಸಿ, ಒಂದು ಕಥೆಯನ್ನು ಬರೆಯಿರಿ.

______________________________

ಚಿತ್ರ – 2 ಅನ್ನು ಗಮನಿಸಿ, ಅಲ್ಲಿರುವ ಪ್ರಾಣಿಗಳು ಯಾವುವು? ಅವು ಏಕೆ ಸಭೆ ಸೇರಿರಬಹುದೆಂದು ಊಹಿಸಿ ಕಥೆ ಬರೆಯಿರಿ.

______________________________

## ಬುನಾದಿ ಹಂತ – ಚಟುವಟಿಕೆ ಹಾಳೆ 21
## ಸನ್ನಿವೇಶ ರಚನೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

Z2J6T7

**ಕಲಿಕಾ ಫಲ :** ಒಂದು ಚಿತ್ರ ಅಥವಾ ಚಿತ್ರಸರಣಿ ಅಥವಾ ಘಟನೆಗಳನ್ನು ಆಧರಿಸಿ ತಮ್ಮ ಅನುಭವಗಳನ್ನು ಕಥೆ ಅಥವಾ ವಿವರದ ರೂಪದಲ್ಲಿ ವ್ಯಕ್ತಪಡಿಸುವರು.

**ಚಟುವಟಿಕೆ 1 :** ಚಿತ್ರ ನೋಡಿ ಒಂದಕ್ಕೊಂದು ಸಂಬಂಧ ಕಲ್ಪಿಸಿ ಒಂದು ಟಿಪ್ಪಣಿ ಬರೆಯಿರಿ .



© KTBS NOT TO BE REPUBLISHED

**ಚಟುವಟಿಕೆ 2 :** ಕಥೆ ಜೋಡಿಸಿ–ಕಟ್ಟೋಣ

1. ಕೆಳಗಿನ ಕಥಾ ಪ್ರಸಂಗವನ್ನು ಓದಿಕೊಂಡು ಅರ್ಥ ಕೆಡದಂತೆ ಅನುಕ್ರಮವಾಗಿ ಬರೆಯಿರಿ:

ಎ) ದ್ರೋಣಾಚಾರ್ಯರು ಇನ್ನೂ ಸ್ವಲ್ಪ ದೂರ ಪ್ರಯಾಣ ಮುಂದುವರೆಸಿದಾಗ ಸಮೀಪದಲ್ಲಿ ಒಬ್ಬ ಬಾಲಕ ಮಣ್ಣಿನಮೂರ್ತಿಯ ಎದುರು ಬಿಲ್ವಿದ್ಯೆ ಅಭ್ಯಾಸ ಮಾಡುತ್ತಿದ್ದನು. ಅವನನ್ನು ಕಂಡ ದ್ರೋಣರು, ಅವನನ್ನು ಮಾತನಾಡಿಸಿ, ನಾಯಿಯ ಬಾಯಿಯೊಳಗೆ ಬಾಣ ಬಿಟ್ಟವರು ಯಾರು? ಎಂದು ಪ್ರಶ್ನಿಸಿದರು. ಅದಕ್ಕೆ ಬಾಲಕ ನಾನೇ ಬಿಟ್ಟೆ, ಏಕೆಂದರೆ ನಾಯಿಯ ಕೂಗು ನನ್ನ ಅಭ್ಯಾಸಕ್ಕೆ ಭಂಗ ತರುತ್ತಿತ್ತು ಎಂದನು. ಅದಕ್ಕೆ ದ್ರೋಣರು ನಾಯಿಯ ಬಾಯಿಗೆ ಸ್ವಲ್ಪವೂ ಗಾಯವಾಗದಂತೆ ಹೇಗೆ ಬಾಣ ಪ್ರಯೋಗಿಸಿದೆ? ಎಂದರು. ಅದಕ್ಕೆ 'ಶಬ್ದವೇದಿ' ಎಂಬ ಬಿಲ್ವಿದ್ಯೆಯಿಂದ ಎಂದು ಹೇಳಿದ.

ಬಿ) ಈ ವಿದ್ಯೆಯನ್ನು ಯಾರು ನಿನಗೆ ಹೇಳಿ ಕೊಟ್ಟರು? ನಿನ್ನ ಗುರುಗಳು ಯಾರು? ಎಂದು ಪ್ರಶ್ನಿಸಿದರು. ಅದಕ್ಕೆ ಬಾಲಕನು ನಾನು ಕಾಡಿನ ಬೇಡರ ಬಾಲಕ 'ಏಕಲವ್ಯ' ಎಂದು, ದ್ರೋಣಾಚಾರ್ಯರು ನನ್ನ ಬಿಲ್ವಿದ್ಯೆಯ ಮಾನಸ ಗುರುಗಳು. ಅವರ ಮಣ್ಣಿನ ಮೂರ್ತಿಯನ್ನು ಮಾಡಿಕೊಂಡು, ಅವರ ಆಶೀರ್ವಾದ ಬಲ ಮತ್ತು ಏಕಾಗ್ರತೆಯಿಂದ ಈ ಬಿಲ್ವಿದ್ಯೆ ಕಲಿತೆ ಎಂದನು.

ಸಿ) ಸ್ವಲ್ಪ ಸಮಯದ ನಂತರ ನಾಯಿ ಬೊಗಳುವ ಶಬ್ದ ನಿಂತಿತು. ಸದ್ಯ ಯಾರೋ ಅದು ಕೂಗುವುದನ್ನು ನಿಲ್ಲಿಸಿದರಲ್ಲ ಎಂದುಕೊಂಡು ಕಾಡಿನಲ್ಲಿ ಮುಂದೆ ಸಾಗಿದರು. ಸ್ವಲ್ಪ ದೂರ ಬಂದಾಗ ಅವರಿಗೆ ಅಚ್ಚರಿ ಕಾದಿತ್ತು. ಜೋರಾಗಿ ಬೊಗಳುತ್ತಿದ್ದ ನಾಯಿ ಸಮೀಪದಲ್ಲಿಯೇ ಇತ್ತು. ಅದರ ಬಾಯಿಯೊಳಗೆ ಒಂದು ಬಾಣ ಅಡ್ಡಲಾಗಿ ನಿಲ್ಲಿಸಿದಂತೆ ಇತ್ತು. ಈ ಬಾಣ ನಾಯಿಗೆ ಯಾವುದೇ ಗಾಯಮಾಡದೇ ಶಬ್ದ ನಿಲ್ಲುವಂತೆ ಮಾಡಿತ್ತು. ಇದನ್ನು ಕಂಡ ದ್ರೋಣರು ಆಶ್ಚರ್ಯಪಟ್ಟರು.

ಡಿ) ಒಮ್ಮೆ ದ್ರೋಣಾಚಾರ್ಯರು ಹಾಗೂ ಅರ್ಜುನ ಇಬ್ಬರೂ ಕಾಡಿನಲ್ಲಿ ಪ್ರಯಾಣಿಸುತ್ತಿದ್ದರು. ಅಲ್ಲಿಂದ ಸ್ವಲ್ಪದೂರದಲ್ಲಿ ಒಂದು ನಾಯಿ ಜೋರಾಗಿ ಬೊಗಳುತ್ತಿತ್ತು. ಕಾಡಿನಲ್ಲಿ ಶಾಂತಿ ಭಂಗವನ್ನುಂಟು ಮಾಡುತ್ತಿತ್ತು. ಯಾರಾದರೂ ಅದು ಬೊಗಳುವ ಶಬ್ದವನ್ನು ನಿಲ್ಲಿಸುವಂತೆ ಮಾಡಬಾರದೇ ಎಂದು ಕೊಂಡು ತಮ್ಮ ಪ್ರಯಾಣ ಬೆಳೆಸಿದರು.

©KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 22

# ಚಿತ್ರದಲ್ಲಿರುವ ಘಟನೆ

N7I5E5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಮ್ಮ ಅನುಭವಗಳನ್ನು ಕಲ್ಪನೆಗೆ ತಂದು ಬರವಣಿಗೆಯಲ್ಲಿ ಅಭಿವ್ಯಕ್ತಿ ಮಾಡಬಲ್ಲರು. ಸನ್ನಿವೇಶ ಮತ್ತು ಕಥೆಯ ಬಗೆಗೆ ಅಭಿಪ್ರಾಯ ವ್ಯಕ್ತಪಡಿಸಬಲ್ಲರು. ವಿದ್ಯಾರ್ಥಿಗಳು ಹಬ್ಬ, ಹರಿದಿನ, ಜಾತ್ರೆ, ಉತ್ಸವ, ಸಂತೆ, ಮಾರುಕಟ್ಟೆ ಇತ್ಯಾದಿಗಳ ಕುರಿತು ತಮ್ಮ ಅನುಭವಗಳನ್ನು ವ್ಯಕ್ತಪಡಿಸುವರು.

**ಚಟುವಟಿಕೆ 1 :** ಚಿತ್ರಗಳನ್ನು ಗಮನಿಸಿ, ನಿಮ್ಮ ಅಭಿಪ್ರಾಯಗಳನ್ನು ಪಟ್ಟಿಮಾಡಿ.



ಚಿತ್ರ– 1



ಚಿತ್ರ– 2

ಚಿತ್ರ– 1 ನ್ನು ಗಮನಿಸಿ ಅಲ್ಲಿ ನಡೆಯುತ್ತಿರುವ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

@KTBS NOT TO BE REPUBLISHED

ಚಿತ್ರ –2 ನ್ನು ಗಮನಿಸಿ, ಅಲ್ಲಿ ಜನರು ವಹಿಸಬೇಕಾದ ಎಚ್ಚರಿಕೆಗಳೇನು ? ಎಂಬುದನ್ನು ಪಟ್ಟಿಮಾಡಿ.

**ಚಟುವಟಿಕೆ 2 :** ವಿವಿಧ ಹಬ್ಬಗಳ ಆಚರಣೆಯ ಬಗ್ಗೆ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಬರೆಯಿರಿ.

1. ವಿವಿಧ ಹಬ್ಬಗಳ ಆಚರಣೆಯ ಬಗ್ಗೆ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಬರೆಯಿರಿ.

   

2. ವಿವಿಧ ಹಬ್ಬಗಳ ಆಚರಣೆಯು ಜನರ ಮನಸ್ಸುಗಳನ್ನು ಒಟ್ಟುಗೂಡಿಸುತ್ತವೆಯೇ ? ಗುಂಪಿನಲ್ಲಿ ಚರ್ಚಿಸಿ.

@KTBS
NOT TO BE REPUBLISHED

3. ಭಾವೈಕ್ಯತೆಯನ್ನು ಮೂಡಿಸುವ ಹಬ್ಬಗಳನ್ನು ಪಟ್ಟಿಮಾಡಿ.

## ಬುನಾದಿ ಹಂತ – ಚಟುವಟಿಕೆ ಹಾಳೆ 23
# ನಮ್ಮ ಅನುಭವಗಳನ್ನು ಬರೆಯೋಣ

I5G7P6
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಮ್ಮ ಅನುಭವಗಳನ್ನು ಪ್ರಕಟಿಸಲು ಅಭ್ಯಾಸ ಮಾಡುವರು ಹಾಗೂ ಸಂಬಂಧಿತ ಪ್ರಶ್ನೆಗಳಿಗೆ ತಮ್ಮದೇ ಭಾಷಾಶೈಲಿಯಲ್ಲಿ ಉತ್ತರಿಸುವರು.

**ಚಟುವಟಿಕೆ 1 :** ನೀವು ನೋಡಿದ ದಸರಾ ಹಬ್ಬವನ್ನು ಕುರಿತು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

@KTBS
NOT TO BE REPUBLISHED

**ಚಟುವಟಿಕೆ 2 :** ನೀವು ಊರಿನ ಜಾತ್ರೆ, ಉತ್ಸವ, ಮೆರವಣಿಗೆ ಮತ್ತು ಹಬ್ಬಗಳಲ್ಲಿ ನೋಡಿರುವ ಜನಪದ ಕಲೆಗಳನ್ನು ಪಟ್ಟಿ ಮಾಡಿ.

| | |
|---|---|
| | |
| | |
| | |
| | |
| | |
| | |
| | |
| | |
| | |

## ಬುನಾದಿ ಹಂತ – ಚಟುವಟಿಕೆ ಹಾಳೆ 24
# ಅನುಭವ ಅನಿಸಿಕೆಗಳನ್ನು ಬರೆಯೋಣ

L9U3U3
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪದ್ಯದ ಅರ್ಥವನ್ನು ಗ್ರಹಿಸುವರು ಮತ್ತು ಸಂಬಂಧಿತ ಪ್ರಶ್ನೆಗಳಿಗೆ ಉತ್ತರಿಸುವರು.

**ಚಟುವಟಿಕೆ 1 :** ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು ಉತ್ತರಿಸೋಣ.

### ಪದ್ಯ : ಜೀವಕ್ಕೆ – ಇಂಧನ
ಕವಿ : ಬಸವರಾಜ ವಕ್ಕುಂದ

ಚರಾಚರಗಳಲಿ ಜೀವ ಅರಳಿಸಿ
ಭೂಮಿ ತಿರುಗುತಿದೆ ಬಯಲೊಳಗೆ
ಗಾಳಿ ನೀರು ಬೆಂಕಿ ಸೇರಿವೆ
ಉಸಿರಾಡುವ ಈ ಒಡಲೊಳಗೆ

ಉಳ್ಳವರ ಆಶೆಯ ಬೆಂಕಿ ಗಾಳಿಗಳು
ಸುಡುತಿವೆ ಜೀವದ ಸೆಲೆಗಳನ್ನು
ಬತ್ತಿ ಬರಡಾಗಿ ಒಣಗಿ ಹೋಗುತ್ತಿವೆ
ಹೀರಿವೆ ಕರುಣೆಯ ಜಲಗಳನು

ಧನಧನವೆನ್ನುವ ಧನದ ದಾಹಿಗಳು
ಮಾರಿಕೊಂಡರು ಭೂಮಿಯನು
ಮಹಲಿನ ಬುಡದಲಿ ಬಿರುಕುಗಳೆದ್ದಿವೆ
ಕೇಳರು ಮಾರಿಯ ಸದ್ದನು

ಧನವಿದ್ದರು ಇಂಧನ ಬೇಕಲ್ಲವೆ
ಜೀವಕೆ ಪ್ರತಿಕ್ಷಣ ಬದುಕಲು
ಜೈವಿಕ ಬೆಳೆಗಳ ಹಸಿರನು ಹೊದಿಸಿ
ಕಾಯಬೇಕು ಈ ಭೂಮಿಯ

ಜೈವಿಕ ಇಂಧನ ಬಳಸುವದೊಂದೆ
ಭೂಮಿಯ ಉಳಿಸುವ ದಾರಿ
ಸಮತೋಲನದಲ್ಲಿ ಬದುಕುವುದೊಂದೆ
ಜೀವ ಉಳಿಯುವ ದಾರಿ

"ಜೈವಿಕ ಇಂಧನ ಜೀವಕೆ ಇಂಧನ"
ಎಂದೂ ಕರಗದ ಮೂಲಧನ
ಬರಡು ಬಂಗಾರ ಹಸಿರು ಹೊನ್ನೆ
ಮುಗಿಯದ ದಾರಿಯ ಈ ಪಯಣ






@KTBS NOT TO BE REPUBLISHED

1) ಒಡಲೊಳಗೆ ಏನೇನು ಸೇರಿಕೊಂಡಿವೆ?

2) ಭೂಮಿ ಮತ್ತು ಜೀವವನ್ನು ಉಳಿಸುವ ದಾರಿ ಯಾವುದು ?

@KTBS
NOT TO BE REPUBLISHED

3) ಉಳ್ಳವರ ಸ್ವಾರ್ಥ ಭೂಮಿ ಮತ್ತು ಇಂದನವನ್ನು ಹೇಗೆ ನಾಶಮಾಡಿದೆ ? ವಿವರಿಸಿ.

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 01

## ವಿಭಕ್ತಿ ಪ್ರತ್ಯಯಗಳು ಮತ್ತು ಲಿಂಗಗಳು

H8F2W9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ವಿಭಕ್ತಿಪ್ರತ್ಯಯಗಳು ಮತ್ತು ಕಾರಕಾರ್ಥಗಳನ್ನು ಗುರುತಿಸಿ, ನಾಮಪದಗಳೊಂದಿಗೆ ಬಳಸಲು ಶಕ್ತರಾಗುವರು. ವಿದ್ಯಾರ್ಥಿಗಳು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗವನ್ನು ಗುರುತಿಸಿ, ಉದಾಹರಣೆಗಳನ್ನು ನೀಡಲು ಶಕ್ತರಾಗುವರು.

**ಚಟುವಟಿಕೆ 1 :** ಕೊಟ್ಟಿರುವ ಗದ್ಯಭಾಗವನ್ನು ಓದಿ, ವಿಭಕ್ತಿ ಪ್ರತ್ಯಯ ಮತ್ತು ಕಾರಕಾರ್ಥವನ್ನು ಪಟ್ಟಿ ಮಾಡಿ.

ರಂಗಮ್ಮ ಕಡು ಬಡತನದಲ್ಲಿ ಬೆಳೆದ ಹೆಂಗಸು. ತಾನು ತನ್ನ ತಂದೆಯಂತೆ ಕೃಷಿಕಳಾಗಬೇಕೆಂಬ ಆಸೆಯಿಂದ ಎರಡು ಎಕರೆ ಹೊಲದಲ್ಲಿ ಸರ್ಕಾರದಿಂದ ಅನುಮತಿ ಪಡೆದು ಬಾವಿಯನ್ನು ತೋಡಿಸಿಕೊಂಡು ಉಳುಮೆ ಮಾಡಿದಳು. ಹೊಲಕ್ಕೆ ಕೊಟ್ಟಿಗೆ ಗೊಬ್ಬರ ಹಾಕಿಸಿ ಭೂಮಿಯನ್ನು ಹದ ಮಾಡಿಸಿದಳು. ಹೊಲದ ಸುತ್ತಲೂ ಬೇಲಿಯನ್ನು ಹಾಕಿಸಿ ದನ–ಕರುಗಳು ಬರದಂತೆ ನೋಡಿಕೊಂಡಳು. ಮಳೆ ಬಂದಾಗ ರಾಗಿ, ಜೋಳವನ್ನು ಬಿತ್ತನೆ ಮಾಡಿ ಉತ್ತಮ ಫಸಲನ್ನು ತೆಗೆದಳು. ನಂತರ ಸುತ್ತಲೂ ತೇಗ, ಹಲಸಿನ ಗಿಡಗಳನ್ನು ಹಾಕಿಸಿ ತೆಂಗು ಮತ್ತು ಅಡಿಕೆ ಗಿಡಗಳನ್ನು ಹಾಕಿಸಿ ತೋಟಗಾರಿಕೆ ಇಲಾಖೆಯ ಸಹಾಯದಿಂದ ಹನಿ ನೀರಾವರಿ ಅಳವಡಿಸಿ 5–6 ವರ್ಷಗಳಾದ ನಂತರ ಹೆಚ್ಚು ಇಳುವರಿ ಪಡೆದು ತನ್ನ ಪರಿಶ್ರಮದಿಂದ ಕೈ ತುಂಬಾ ಹಣವನ್ನು ಸಂಪಾದಿಸಿದಳು. ರಂಗಮ್ಮಳ ಸಾಧನೆಯನ್ನು ಕಂಡ ಸರ್ಕಾರವು ಉತ್ತಮ ರೈತ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

| ವಿಭಕ್ತಿಯ ಹೆಸರು | ವಿಭಕ್ತಿ ಪ್ರತ್ಯಯ | ನಾಮಪದ | ಕಾರಕಾರ್ಥ |
|---|---|---|---|
| ಪ್ರಥಮ | ಉ | ಸರ್ಕಾರವು | ಕರ್ತೃಕಾರಕ |
| ದ್ವಿತೀಯ | ಅನ್ನು | | |
| ತೃತೀಯ | ಇಂದ | | |
| ಚತುರ್ಥಿ | ಗೆ,ಕ್ಕೆ,ಇಗೆ | | |
| ಪಂಚಮಿ | ದೆಸೆಯಿಂದ | | |
| ಷಷ್ಠಿ | ಅ | | |
| ಸಪ್ತಮಿ | ಅಲ್ಲಿ | | |

@KTBS NOT TO BE REPUBLISHED

* ಪಠ್ಯಪುಸ್ತಕದಲ್ಲಿರುವ ಯಾವುದಾದರೂ ಗದ್ಯಭಾಗವನ್ನು ಓದಿ, ಅದರಲ್ಲಿ ಬರುವ ವಿಭಕ್ತಿಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ಓದಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳನ್ನು ಗುರುತಿಸಿ ಪಟ್ಟಿಮಾಡಿ.

ಹುಡುಗ. ಹೂವು, ಅಜ್ಜಿ, ದೇವತೆ, ಗಂಡಸು, ಮರ, ದೊಡ್ಡಪ್ಪ, ರಾಜ, ಹುಡುಗಿ, ಪುಸ್ತಕ, ತಂದೆ, ಹೆಂಗಸು, ಬೆಟ್ಟ, ಬಾಲಕಿ, ದೇವರು, ರಾಣಿ, ಕುದುರೆ, ಬಾಲಕ

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| | | |
| | | |
| | | |
| | | |
| | | |
| | | |

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 02

# ವಚನಗಳು ಮತ್ತು ಕಾಲಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

R5S2R9

**ಕಲಿಕಾ ಫಲ:**ವಿದ್ಯಾರ್ಥಿಗಳು ವಚನಗಳ ಅರ್ಥವನ್ನು ತಿಳಿದು, ಉದಾಹರಣೆಗಳನ್ನು ನೀಡಲು ಶಕ್ತರಾಗುವರು. ಹಾಗೂ ವಿದ್ಯಾರ್ಥಿಗಳು ಕಾಲಗಳ ಅರ್ಥವನ್ನು ತಿಳಿದು, ವಾಕ್ಯಗಳಲ್ಲಿ ಬಳಸಲು ಶಕ್ತರಾಗುವರು.

**ಚಟುವಟಿಕೆ 1 :** ಕೊಟ್ಟಿರುವ ಏಕವಚನ ಪದಗಳಿಗೆ ಬಹುವಚನ ರೂಪವನ್ನು ಬರೆಯಿರಿ.

| ಏಕವಚನ | ಬಹುವಚನ |
|---|---|
| ರಾಜ | |
| ತರಗತಿ | |
| ಅಕ್ಕ | |
| ಮಗು | |
| ಶಿಕ್ಷಕ | |
| ಪಕ್ಷಿ | |
| ಹೆಂಗಸು | |
| ಪುಸ್ತಕ | |
| ರಾಣಿ | |
| ವಿದ್ಯಾರ್ಥಿ | |
| ಅಣ್ಣ | |
| ಬಾಲಕಿ | |
| ನದಿ | |
| ಅಮ್ಮ | |
| ಚಾಲಕಿ | |

@KTBS NOT TO BE REPUBLISHED

**ಚಟುವಟಿಕೆ 2 :** ನಿಮಗೆ ತಿಳಿದಿರುವ 10 ಏಕವಚನ ಮತ್ತು ಬಹುವಚನ ಪದಗಳನ್ನು ಪಟ್ಟಿಮಾಡಿ (ಮೇಲಿನ ಪಟ್ಟಿಯಲ್ಲಿರುವ ಪದಗಳನ್ನು ಬಿಟ್ಟು)

| ಏಕವಚನ | ಬಹುವಚನ |
|---|---|
| | |
| | |
| | |
| | |
| | |
| | |
| | |
| | |
| | |
| | |

**ಚಟುವಟಿಕೆ 3 :** ಕಾಲಗಳು

ಕಾಲ ಎಂದರೆ ವೇಳೆ, ಸಮಯ ಎಂದರ್ಥ – ಘಟನೆ ನಡೆದ ಕಾಲವನ್ನು ತಿಳಿಯುವುದು, ನಡೆದ, ನಡೆಯುತ್ತಿರುವ, ನಡೆಯುವ ಘಟನೆಗಳನ್ನು ತಿಳಿಸುವುದು.

**ಕಾಲದ ವಿಧಗಳು** – ಕಾಲದಲ್ಲಿ ಮೂರು ವಿಧ ಅವುಗಳೆಂದರೆ

1. **ಭೂತಕಾಲ** – ಹಿಂದೆ ನಡೆದಿರುವ ಘಟನೆಗಳನ್ನು ತಿಳಿಸುವ ಕಾಲವೇ ಭೂತಕಾಲ.
ಕಾಲಸೂಚಕ ಪ್ರತ್ಯಯ – ದ ಉದಾ– ಗಿಳಿಯು ಹಣ್ಣನ್ನು ತಿಂದಿತು.

2. **ವರ್ತಮಾನಕಾಲ** – ಈಗ ನಡೆಯುತ್ತಿರುವ ಘಟನೆಗಳನ್ನು ತಿಳಿಸುವ ಕಾಲವೇ ವರ್ತಮಾನಕಾಲ.
ಕಾಲಸೂಚಕ ಪ್ರತ್ಯಯ – ಉತ್ತ ಉದಾ – ಮಗು ಅಟವನ್ನು ಆಡುತ್ತದೆ.

3. **ಭವಿಷ್ಯತ್ ಕಾಲ** – ಮುಂದೆ ನಡೆಯುವ ಘಟನೆಗಳನ್ನು ತಿಳಿಸುವ ಕಾಲವೇ ಭವಿಷ್ಯತ್ ಕಾಲ.
ಕಾಲಸೂಚಕ ಪ್ರತ್ಯಯ– ವ/ಉವ ಉದಾ– ಮಕ್ಕಳು ಮನೆಗೆ ಹೋಗುವರು.

**ಚಟುವಟಿಕೆ 4 :** ಕೊಟ್ಟಿರುವ ಮಾದರಿಯಂತೆ ವಾಕ್ಯಗಳ ಕಾಲವನ್ನು ಪರಿವರ್ತಿಸಿ ಬರೆಯಿರಿ.

**ಮಾದರಿ :** ಭೂ – ಹಣ್ಣು ಮರದಿಂದ ಬಿದ್ದಿತು ವ – ಹಣ್ಣು ಮರದಿಂದ ಬೀಳುತ್ತದೆ. ಭ – ಹಣ್ಣು ಮರದಿಂದ ಬೀಳುವುದು.

| ಭೂತಕಾಲ | ವರ್ತಮಾನಕಾಲ | ಭವಿಷ್ಯತ್ ಕಾಲ |
|---|---|---|
| 1 ಶಿಕ್ಷಕರು ಪಾಠವನ್ನು ಮಾಡಿದರು. | | |
| 2 ಹಸು ಕೊಟ್ಟಿಗೆಗೆ ಬಂದಿತು. | | |
| 3. ರಮೇಶನು ಮರವನ್ನು ಹತ್ತಿದನು. | | |
| 4. ಮಕ್ಕಳು ಶಾಲಾ ಚುನಾವಣೆಯಲ್ಲಿ ಮತವನ್ನು ಹಾಕಿದರು. | | |
| 5. ಸಂದೀಪನು ಚಲನಚಿತ್ರವನ್ನು ನೋಡಿದನು. | | |

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 03
## ಸಂಧಿಗಳು

U4X9X8
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಂಧಿಗಳನ್ನು ಕುರಿತಾದ ಪ್ರಶ್ನೆಗಳಿಗೆ ಉತ್ತರಿಸುವರು.

**ಚಟುವಟಿಕೆ 1 :** ಸಂಧಿಗಳ ವಿವರಗಳನ್ನು ಓದಿರಿ ಹಾಗೂ ಉದಾಹರಣೆಯಂತೆ ಪದಗಳನ್ನು ಬಿಡಿಸಿ ಬರೆಯಿರಿ.

**ಸಂಸ್ಕೃತ ಸ್ವರ ಸಂಧಿಗಳು :** ಸವರ್ಣ ದೀರ್ಘ ಸಂಧಿ, ಗುಣ ಸಂಧಿ, ವೃದ್ಧಿ ಸಂಧಿ, ಯಣ್ ಸಂಧಿ. ಸಂಸ್ಕೃತ
**ವ್ಯಂಜನ ಸಂಧಿಗಳು :** ಜಶ್ತ್ವ ಸಂಧಿ, ಶ್ಚುತ್ವ ಸಂಧಿ, ಅನುನಾಸಿಕ ಸಂಧಿ

**ಸವರ್ಣದೀರ್ಘ ಸಂಧಿ :** ಸವರ್ಣ ಸ್ವರಗಳು ಒಂದರ ಮುಂದೆ ಒಂದು ಸೇರಿ ಸಂಧಿಯಾಗುವಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರ ಆದೇಶವಾಗಿ ಬಂದರೆ ಅದನ್ನು ಸವರ್ಣದೀರ್ಘಸಂಧಿ' ಎಂಧು ಕರೆಯುವರು.

(ಅಆ, ಇಈ, ಉಊ–ಇವು ಸವರ್ಣ ಸ್ವರಗಳು)

**ಉದಾಹರಣೆ :** ದೇವ+ಅಸುರ = ದೇವಾಸುರ
(ಅ+ಅ=ಆ)

ಮಹಾತ್ಮ:____________________
ಹರೀಶ್ವರ:____________________
ಕವೀಂದ್ರ:____________________
ಗುರೂಪದೇಶ:____________________

**ಗುಣಸಂಧಿ :** ಸಂಧಿ ಕಾರ್ಯ ನಡೆಯುವಾಗ ಪೂರ್ವಪದದ ಅಂತ್ಯದಲ್ಲಿರುವ 'ಅಆ' ಕಾರಗಳಿಗೆ ಉತ್ತರ ಪದದ ಆದಿಯಲ್ಲಿ 'ಇಈ' ಕಾರಗಳು ಪರವಾದರೆ 'ಏ' ಕಾರವೂ, 'ಉಊ' ಕಾರಗಳು ಪರವಾದರೆ ಓ' ಕಾರವೂ 'ಋ' ಕಾರ ಪರವಾದರೆ 'ಅರ್' ಕಾರವು ಆದೇಶವಾಗಿ ಬಂದರೆ ಅದನ್ನು 'ಗುಣಸಂಧಿ' ಎನ್ನುವರು.

**ಉದಾಹರಣೆ :** ನರ + ಇಂದ್ರ = ನರೇಂದ್ರ
(ಅ+ಇ=ಏ)

ಮಹೇಶ್ವರ : ____________________
ಸೂರ್ಯೋದಯ:____________________

**ವೃದ್ಧಿಸಂಧಿ :** ಸಂಧಿಕಾರ್ಯ ನಡೆಯುವಾಗ ಪೂರ್ವಪದದ ಅಂತ್ಯದಲ್ಲಿರುವ 'ಅಆ' ಕಾರಗಳಿಗೆ ಉತ್ತರಪದದ ಆದಿಯಲ್ಲಿ 'ಏಐ' ಕಾರಗಳು ಪರವಾದಾಗ ಅವರಡರ ಸ್ಥಾನದಲ್ಲಿ 'ಐ'ಕಾರವೂ "ಓಔಕಾರಗಳು ಪರವಾದಾಗ 'ಔ' ಕಾರವೂ ಆದೇಶವಾಗಿ ಬಂದರೆ ಅದನ್ನು "ವೃದ್ಧಿಸಂದಿ' ಎನ್ನುವರು.

**ಉದಾಹರಣೆ :** ಏಕ + ಏಕ = ಏಕೈಕ

(ಆ + ಏ =ಐ)

ಮಹೈಶ್ವರ್ಯ: ____________________
ದಿವೌಷಧ:____________________

@KTBS NOT TO BE REPUBLISHED

**ಯಣ್ ಸಂಧಿ :** ಸಂಧಿಕಾರ್ಯ ನಡೆಯುವಾಗ ಪೂರ್ವಪದದ ಅಂತ್ಯದಲ್ಲಿರುವ 'ಇಈ' ಕಾರಗಳಿಗೆ ಉತ್ತರಪದದ ಆದಿಯಲ್ಲಿ ಸವರ್ಣವಲ್ಲದ ಯಾವುದೇ ಸ್ವರಗಳು ಸೇರಿ ಸಂಧಿಯಾದಾಗ 'ಯ್' ಕಾರವೂ 'ಉಊ' ಕಾರಗಳಿಗೆ 'ವ್ ಕಾರವೂ 'ಋ' ಕಾರಕ್ಕೆ 'ರ್' ಕಾರವೂ ಆದೇಶವಾಗಿ ಬಂದರೆ ಅದನ್ನು 'ಯಣ್ ಸಂಧಿ' ಎನ್ನುವರು.

**ಉದಾಹರಣೆ :** ಅತಿ + ಅವಸರ = ಅತ್ಯವಸರ
(ಇ + ಅ = ಯ)

ಇತ್ಯಾದಿ: ______________________

ಮನ್ವಂತ: ______________________

ಪಿತ್ರಾಜ್ಞೆ :______________________

**ಜಶ್ತ್ವಸಂಧಿ :** ಸಂಧಿಕಾರ್ಯ ನಡೆಯುವಾಗ ಪೂರ್ವಪದದ ಅಂತ್ಯದಲ್ಲಿ ವರ್ಗದ ಪ್ರಥಮಾಕ್ಷರಕ್ಕೆ ಅಂದರೆ 'ಕ್,ಚ್,ಟ್,ತ್,ಪ್'ಗಳಿಗೆ ಅದೇ ವರ್ಗದ ತೃತೀಯಾಕ್ಷರಗಳು ಅಂದರೆ ಗ್,ಜ್,ಡ್,ದ್,ಬ್ ಗಳು ಕ್ರಮವಾಗಿ ಆದೇಶವಾಗಿ ಬಂದರೆ ಅದನ್ನು 'ಜಶ್ತ್ವಸಂಧಿ' ಎನ್ನುವರು.

**ಉದಾಹರಣೆ :** ದಿಕ್ + ಅಂತ =ದಿಗಂತ
(ಕ್ ಸ್ಥಾನದಲ್ಲಿ ಗ್ ಆದೇಶ)

ಅಜಂತ:______________________

ಷಡಾನನ:______________________

@KTBS NOT TO BE REPUBLISHED

**ಶ್ಚುತ್ವಸಂಧಿ :** ಸಂಧಿಕಾರ್ಯ ನಡೆಯುವಾಗ ಪೂರ್ವಪದದ ಅಂತ್ಯದಲ್ಲಿ 'ಸ' ಕಾರ ಮತ್ತು 'ತ'ವರ್ಗಗಳಿಗೆ 'ಶ' ಕಾರ ಮತ್ತು 'ಚ' ವರ್ಗಗಳು ಅಂದರೆ 'ಶ್ಚು' ಅಕ್ಷರಗಳು ಆದೇಶವಾಗಿ ಬಂದರೆ ಅದನ್ನು 'ಶ್ಚುತ್ವಸಂಧಿ' ಎನ್ನುವರು.

**ಉದಾಹರಣೆ :** ಉದಾಹರಣೆ : ಮನಸ್ + ಶಾಂತಿ = ಮನಶ್ಶಾಂತಿ (ಸ್ ಸ್ಥಾನದಲ್ಲಿ ಶ್ ಆದೇಶ)

ಪಯಶ್ಶಯನ:______________________

ಸಜ್ಜನ: ______________________

ಸಚ್ಚಿತ್ರ: ______________________

**ಅನುನಾಸಿಕಸಂಧಿ :** ಸಂಧಿಕಾರ್ಯ ನಡೆಯುವಾಗ ವರ್ಗದ ಪ್ರಥಮ ಅಕ್ಷರಗಳಿಗೆ ಅಂದರೆ ಕ್, ಚ್,ಟ್, ತ್, ಪ್ ಗಳಿಗೆ ಉತ್ತರಪದದ ಆದಿಯಲ್ಲಿ ಯಾವುದೇ ಅನುನಾಸಿಕಾಕ್ಷರಗಳು ಸೇರಿ ಸಂಧಿಯಾಗುವಾಗ ಪೂರ್ವಪದದ ಅಂತ್ಯದಲ್ಲಿರುವ ಪ್ರಥಮಾಕ್ಷರಗಳಿಗೆ ಕ್ರಮವಾಗಿ ಅದೇ ವರ್ಗದ ಅನುನಾಸಿಕಾಕ್ಷರಗಳು ಅಂದರೆ ಙ್, ಞ್, ಣ್, ನ್, ಮ್ ಗಳು ಆದೇಶವಾಗಿ ಬಂದರೆ ಅದನ್ನು 'ಅನುನಾಸಿಕಸಂಧಿ' ಎನ್ನುವರು.

**ಉದಾಹರಣೆ :** ವಾಕ್+ ಮಯ = ವಾಙ್ಮಯ
(ಕ್ ಸ್ಥಾನದಲ್ಲಿ ಙ ಆದೇಶ)

ಷಣ್ಮುಖ: ______________________

ತನ್ಮಯ: ______________________

ಅಮ್ಮಯ: ______________________

ಚಟುವಟಿಕೆ 2 : ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.

1. ಬೇರೊಬ್ಬ =__________

2. ಶಾಲೆಯಲ್ಲಿ =__________

3. ಪುಸ್ತಕವನ್ನು =__________

4. ಹುಲ್ಲುಗಾವಲು =__________

5. ಹಿಮಾಲಯ =__________

6. ಗಣೇಶ =__________

7. ಸಪ್ತರ್ಷಿ =__________

8. ಲಿಂಗೈಕ್ಯ =__________

9. ವನೌಷಧ =__________

10. ವಾಗ್ಭಟ =__________

11. ಜಗಜ್ಜನನಿ =__________

12. ಸನ್ಮಾನ =__________

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 04
## ಸಮಾಸಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಸಮಾಸಗಳನ್ನು ಕುರಿತಾದ ಪ್ರಶ್ನೆಗಳಿಗೆ ಉತ್ತರಿಸುವರು.

### ಸಮಾಸಗಳ ಪರಿಚಯ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಸೇರುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪಮಾಡಿಕೊಂಡು ಹೇಳುವುದೇ 'ಸಮಾಸ'. ಸಮ್ ಅಂದರೆ ಸಂಕ್ಷೇಪ, ಆಸ ಎಂದರೆ ಆಗಿರುವುದು. ಸಂಕ್ಷೇಪವಾಗಿರುವುದೇ ಸಮಾಸ. ಸಮಾಸ ಎಂದರೆ ಸಮಸ್ತಪದ. ಸಮಾಸ ಪದವನ್ನು ಬಿಡಿಸಿ ಬರೆಯುವುದಕ್ಕೆ 'ವಿಗ್ರಹವಾಕ್ಯ' ಎನ್ನುತ್ತೇವೆ.

1. ಎರಡು ಪದಗಳು ನಾಮಪದವಾಗಿದ್ದು, ಉತ್ತರ ಪದದ ಅರ್ಥವೇ ಪ್ರಧಾನವಾಗಿರುತ್ತದೆ. **ತತ್ಪುರುಷ**
2. ಪೂರ್ವಪದ ವಿಶೇಷಣವಾಗಿದ್ದು, ಉತ್ತರ ಪದ ನಾಮಪದ(ವಿಶೇಷ)ವಾಗಿರುತ್ತದೆ. **ಕರ್ಮಧಾರಯ**
3. ಪೂರ್ವಪದ ಸಂಖ್ಯಾವಾಚಕವಾಗಿದ್ದು, ಉತ್ತರಪದ ನಾಮಪದವಾಗಿರುತ್ತದೆ. **ದ್ವಿಗು**
4. ಎಲ್ಲಾ ಪದಗಳು ನಾಮಪದಗಳಾಗಿದ್ದು, ಎಲ್ಲಾ ಪದಗಳ ಅರ್ಥ ಪ್ರಧಾನವಾಗಿರುತ್ತದೆ. **ದ್ವಂದ್ವ**
5. ಎಲ್ಲಾ ಪದಗಳು ನಾಮಪದಗಳಾಗಿದ್ದು, ಬೇರೊಂದು ಪದದ ಅರ್ಥ ಪ್ರಧಾನವಾಗಿರುತ್ತದೆ. **ಬಹುವ್ರೀಹಿ**
6. ಪೂರ್ವಪದವು ನಾಮಪದವಾಗಿದ್ದು, ಉತ್ತರ ಪದ ಕ್ರಿಯಾಪದವಾಗಿರುತ್ತದೆ. **ಕ್ರಿಯಾ**
7. ಪೂರ್ವೋತ್ತರ ಪದಗಳು ಅಂಶ, ಅಂಶಿ ಸಂದಂಧದಿಂದ ಕೂಡಿದ್ದು, ಪೂರ್ವಪದ ಪ್ರಧಾನವಾಗಿರುತ್ತದೆ. **ಅಂಶಿ**
8. ಪೂರ್ವಪದವು ಸರ್ವನಾಮ, ಕೃದಂತವಾಗಿದ್ದು, ಉತ್ತರಪದ ನಾಮಪದವಾಗಿರುತ್ತದೆ. **ಗಮಕ**

**ಉದಾಹರಣೆ :** ಅರಸನ + ಮನೆ = ಅರಮನೆ = ತತ್ಪುರುಷ ಸಮಾಸ

ಕೆರೆಕಟ್ಟೆಬಾವಿಗಳು = ಕೆರೆಯು + ಕಟ್ಟೆಯು + ಬಾವಿಯು = ದ್ವಂದ್ವ ಸಮಾಸ

**ಚಟುವಟಿಕೆ 1 :** ಕೊಟ್ಟಿರುವ ಚಿತ್ರಕ್ಕೆ ಹೊಂದುವ ಸೂಕ್ತ ಪದಗಳನ್ನು ಬರೆದು, ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.

| ಚಿತ್ರಗಳು | ಚಿತ್ರಕ್ಕೆ ಸೂಕ್ತವಾದ ಪದಗಳು | ವಿಗ್ರಹವಾಕ್ಯ |
|---|---|---|
|  | ಮಾದರಿ: ತಲೆನೋವು | ತಲೆಯಲ್ಲಿ + ನೋವು = ತತ್ಪುರುಷ ಸಮಾಸ |
|  | | |
|  | | |
|  | | |

@KTBS NOT TO BE REPUBLISHED

| | | |
|---|---|---|
|  | | |
|  | | |
|  | | |

**ಚಟುವಟಿಕೆ 2 :** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಗೆರೆ ಎಳೆದ ಪದಗಳನ್ನು ಪಟ್ಟಿ ಮಾಡಿ ಬರೆಯಿರಿ.

ಒಂದಾನೊಂದು ಕಾಲದಲ್ಲಿ ಒಬ್ಬ ಋಷಿ ಇದ್ದರು, ಅವರು ಕಾಡಿನಲ್ಲಿ ಅಲೆದಾಡುತ್ತಿರುವಾಗ ಒಂದು ಕೊಳದಲ್ಲಿ ಕೆಂದಾವರೆ ಹೂವನ್ನು ನೋಡುತ್ತ ತಂಗಾಳಿಗೆ ಮುಖ ಕೊಟ್ಟು ನಿಂತರು. ಪಕ್ಕದ ಮರದಲ್ಲಿ ಕೆಳಗೆ ಈ ತಪಸ್ವಿಯು ಕಣ್ತೆರೆದು ನೋಡುತ್ತ ಮುಂದಕ್ಕೆ ಹೋದಾಗ ಅಂಗಾಲಿಗೆ ಮುಳ್ಳು ಚುಚ್ಚಿತು. ಆಗ ಅವರು ಕಾಲುನೋವಿನಿಂದ ನರಳುತ್ತ ಮುಂದಕ್ಕೆ ಹೋದರು. ಅಲ್ಲಿ ಮುಕ್ಕಣನ ದೇವಾಲಯಕ್ಕೆ ಕೈಮುಗಿದು ಆ ನದಿಯನ್ನು ದಾಟಿ ತಮ್ಮ ಆಶ್ರಮದ ಕಡೆಗೆ ಹೋದರು.

@KTBS NOT TO BE REPUBLISHED

| ಸಮಾಸ ಕಾರ್ಯ ನಡೆದ ಪದ | ವಿಗ್ರಹವಾಕ್ಯ ಮಾಡಿ ಬರೆದ ಪದಗಳು | ಈ ಪ್ರಕ್ರಿಯೆಯಿಂದ ಕಂಡು ಬಂದ ಅಂಶ |
|---|---|---|
| ಹೆಜ್ಜೇನು | ಹಿರಿದಾದ + ಜೇನು | ಪೂರ್ವೋತ್ತರ ಪದಗಳು ವಿಶೇಷಣ + ವಿಶೇಷ್ಯಗಳಿಂದ ಕೂಡಿರುತ್ತವೆ. – ಕರ್ಮಧಾರೆಯ ಸಮಾಸ |
| | | |
| | | |
| | | |
| | | |
| | | |
| | | |
| | | |
| | | |

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 05

# ನಾಮಪದ ಮತ್ತು ಸರ್ವನಾಮಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

J4P2J6

**ಕಲಿಕಾಫಲ :** ನಾಮಪದ ಮತ್ತು ಸರ್ವನಾಮಗಳನ್ನು ಗುರುತಿಸಿ ಬರೆಯುವರು.

## ನಾಮಪದಗಳು

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಓದಿಕೊಂಡು, ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳಾಗಿ ವಿಂಗಡಿಸಿ ಪಟ್ಟಿಮಾಡಿ.

ಬೆಟ್ಟ, ಕುರುಡ, ಮೈಸೂರು, ವಿಜ್ಞಾನಿ, ಹೂವು, ನದಿ, ಕಿವುಡ, ಕನ್ನಡ, ಭಾಷೆ, ರಾಮ, ಭಾರತ, ಹುಲಿ, ಹೆಂಗಸು, ವಿದ್ಯಾರ್ಥಿ, ವಿದ್ಯಾ, ಚಾಲಕ, ಕುಂಟ, ಕಾರವಾರ, ಶಿಕ್ಷಕ, ಬೆಂಗಳೂರು, ಗಂಡಸು, ರೈತ, ವ್ಯಾಪಾರಿ, ಅರ್ಜುನ, ಮೂಗ, ಹಣ್ಣು, ಸೀತೆ

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| | | |

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ಓದಿಕೊಂಡು, ಬಿಟ್ಟಿರುವ ಸ್ಥಳಗಳಲ್ಲಿ ವಿಭಾಗಿಸಿ ಬರೆಯಿರಿ.

ತೆಂಕಣ, ಅಂತಹ, ಬೆಟ್ಟದಷ್ಟು, ಸುಂದರ, ಬಿಳಿಯ, ಎರಡು, ಪಶ್ಚಿಮ, ಹತ್ತು, ಒಂಭತ್ತನೆಯ, ಬಡಗಣ, ಆನೆಯಷ್ಟು, ಕೆಟ್ಟ, ಹೊಸದು, ಇಂಥ, ಒಳ್ಳೆಯ, ದೊಡ್ಡದು, ಎಂಥ, ಐವರು, ಒಂದನೆಯ, ಚಿಕ್ಕದು, ಎರಡು, ಪಶ್ಚಿಮ, ಮೂರನೆಯ, ಮೂಡಣ, ಕನಿಷ್ಠ, ದಡ್ಡ, ಇಷ್ಟು,

| ಗುಣವಾಚಕ | ಸಂಖ್ಯಾವಾಚಕ | ಸಂಖ್ಯೇಯವಾಚಕ | ಪರಿಮಾಣವಾಚಕ | ಪ್ರಕಾರವಾಚಕ | ದಿಗ್ವಾಚಕ |
|---|---|---|---|---|---|
| | | | | | |

## ಸರ್ವನಾಮಗಳು

**ಚಟುವಟಿಕೆ 3 :** ಕೊಟ್ಟಿರುವ ಪದಗಳನ್ನು ಓದಿಕೊಂಡು, ಸರ್ವನಾಮ ಪ್ರಕಾರಗಳನ್ನು ವಿಭಾಗಿಸಿ ಬರೆಯಿರಿ.

ನಾನು, ತಾನು, ಅವನು, ಏನು, ಆ, ಎಷ್ಟು, ಇವರು, ಅದು, ಈ, ಹೇಗೆ, ಇದು, ನೀನು, ಅವರು, ತಾವು, ಯಾರು, ಯಾವಾಗ, ಇವನು, ಎಲ್ಲಿ, ನೀವು, ಅವಳು, ನಾವು, ಇವಳು, ಅವು, ಇವು

| ವ್ಯಕ್ತಿ / ಪುರುಷವಾಚಕ | ಆತ್ಮಾರ್ಥಕ | ಪ್ರಶ್ನಾರ್ಥಕ | ನಿರ್ದೇಶನಾತ್ಮಕ |
|---|---|---|---|
| ಉತ್ತಮ ಪುರುಷ : | | | |
| ಮಧ್ಯಮ ಪುರುಷ : | | | |
| ಪ್ರಥಮ ಪುರುಷ : | | | |

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 06

# ದ್ವಿರುಕ್ತಿ, ಜೋಡುನುಡಿ ಮತ್ತು ಅನುಕರಣಾವ್ಯಯ

M3U9Q5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ದ್ವಿರುಕ್ತಿ, ಅನುಕರಣಾವ್ಯಯ ಮತ್ತು ಜೋಡುನುಡಿಗಳನ್ನು ಗುರುತಿಸಿ ಬರೆಯಲು ಸಮರ್ಥರಾಗುವರು.

**ದ್ವಿರುಕ್ತಿ** – ಅರ್ಥವಿರುವ ಪದಗಳನ್ನು ಎರಡೆರಡು ಸಾರಿ ಬಳಸಿ ಬರೆಯುವುದನ್ನು ದ್ವಿರುಕ್ತಿ ಎನ್ನುತ್ತೇವೆ.
ಮಾದರಿ : **ನಡೆನಡೆ, ನುಡಿನುಡಿ.**

**ಚಟುವಟಿಕೆ 1 :** ಹೊಂದಿಸಿ ಬರೆಯಿರಿ.

| ಅ | ಬ | ದ್ವಿರುಕ್ತಿ ಪದಗಳು |
|---|---|---|
| ಮೊದಲು | ಕಡೆಗೆ | |
| ಓಡು | ತುದಿ | |
| ತಿನ್ನು | ರಾಶಿ | |
| ನಡುವೆ | ಬೇಗ | |
| ಚಿಕ್ಕ | ಓಡು | |
| ಬಯಲು | ಮೊದಲು | |
| ಆಗ | ದೊಡ್ಡ | |
| ಕೂಡು | ಪುಟ್ಟ | |
| ಬೇಗ | ನಡುವೆ | |
| ಕಡೆಗೆ | ಚಿಕ್ಕ | |
| ತುದಿ | ತಿನ್ನು | |
| ರಾಶಿ | ಬಯಲು | |
| ಪುಟ್ಟ | ಆಗ | |
| ದೊಡ್ಡ | ಕೂಡು | |

@KTBS NOT TO BE REPUBLISHED

**ಅನುಕರಣಾವ್ಯಯ :** ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ಎರಡೆರಡುಬಾರಿ ಹೇಳುವುದನ್ನು ಅನುಕರಾಣಾವ್ಯಯ ಎಂದು ಹೇಳುತ್ತೇವೆ.

ಉದಾ– ಫಳಫಳ, ರಪರಪ

**ಚಟುವಟಿಕೆ 2 :** ಕೊಟ್ಟಿರುವ ಸಾಲುಗಳಲ್ಲಿ ಇರುವ ಅನುಕರಣಾವ್ಯಯ ಪದಗಳನ್ನು ಪಟ್ಟಿಮಾಡಿ.

1. ದೇವಸ್ಥಾನದಲ್ಲಿ ಘಂಟೆಯು ಢಣಢಣ ಬಾರಿಸಿತು.
2. ನದಿಯ ನೀರು ಜುಳುಜುಳು ಹರಿಯುತ್ತದೆ.
3. ಹಾವು ಸರಸರನೆ ಹೋಗುತ್ತದೆ.
4. ಮಳೆಯ ಹನಿ ಪಟಪಟ ಬೀಳುತ್ತದೆ.
5. ಲವನು ಬಾಣವನ್ನು ರೊಯ್ಯನೆ ಬಿಟ್ಟನು.
6. ಗಾಳಿಯು ಸುಯ್ಯನೆ ಬೀಸುತ್ತದೆ.

______________________________

______________________________

______________________________

______________________________

______________________________

**ಜೋಡುನುಡಿ :** ಒಂದಕ್ಕೊಂದು ಪೂರಕವಾದ, ವಿರುದ್ಧವಾದ ಅಥವಾ ಬೇರೆಬೇರೆ ಅರ್ಥಗಳುಳ್ಳ ಪದಗಳನ್ನು ಒಟ್ಟಿಗೆ ಬಳಸಿದರೆ ಅದನ್ನು 'ಜೋಡುನುಡಿ' ಎಂದುಕರೆಯುತ್ತೇವೆ. ಅಭಿಪ್ರಾಯಗಳನ್ನು ಒತ್ತಿ ಹೇಳುವುದಕ್ಕೂ, ವಿವಿಧತೆಯನ್ನು ಸೂಚಿಸುವುದಕ್ಕೂ ಇಂತಹ ಪದಗಳನ್ನು ಬಳಸಲಾಗುತ್ತದೆ. ಉದಾಹರಣೆ– ಹಾಲುಜೇನು, ಕೆನೆಮೊಸರು, ಹೊಲಗದ್ದೆ, ಮರಗಿಡ ಇತ್ಯಾದಿ.
ಮೊದಲನೆಯ ಪದಕ್ಕೆ ಅರ್ಥ ಉಂಟು, ಎರಡನೆಯ ಪದಕ್ಕೆ ಕೆಲವು ಕಡೆ ಅರ್ಥವುಂಟು, ಕೆಲವು ಕಡೆ ಅರ್ಥವಿರುವುದಿಲ್ಲ. ಇದನ್ನು 'ಮಾತಿಗೊಂದು ಗೀತು' ಎಂದು ಕರೆಯುತ್ತೇವೆ. ಉದಾಹರಣೆ; ಹುಳಹುಪ್ಪಡಿ, ಕಾಫಿಗೀಫಿ, ಮಕ್ಕಳುಮರಿ

NOT TO BE REPUBLISHED @KTBS

**ಚಟುವಟಿಕೆ 3 :** ಜೋಡುನುಡಿಗಳನ್ನು ಆರಿಸಿ ಹೊಂದಿಸಿ ಬರೆಯಿರಿ.

**ಮಾದರಿ** – ಕಪ್ಪು– ಬಿಳುಪು

ತಿಂಡಿ, ತನು, ತಂಗಿ, ಬೇವು, ಹಸೆ, ಮೇಡು, ಕಟ್ಟೆ, ಅವಳಿ, ಬೀದಿ, ಕಹಿ, ಜೋಡು, ನಯ, ಪೇರು, ಕಸ, ರುಜಿನ, ಪಕ್ಕ, ನೀತಿ, ಕಸಾಲೆ, ಕಾಳು, ಭಕ್ತಿ

| | | | |
|---|---|---|---|
| ಕಾಡು | | ಹಾಡು | |
| | ತೀರ್ಥ | | ಜವಳಿ |
| | ಬೆಲ್ಲ | ಈಡು | |
| | ತಿನಿಸು | | ಮನ |
| ಅಕ್ಕ | | ಕೆರೆ | |
| ರೀತಿ | | | ವಿನಯ |
| | ಕಡ್ಡಿ | ಹಾದಿ | |
| ಕಾಯಿಲೆ | | | ಭಾವ |
| ರೋಗ | | ಸಿಹಿ | |
| ಏರು | | | |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 07
# ದೇಶೀಯ–ಅನ್ಯದೇಶೀಯ (ಎರವಲು ಪದಗಳು)

B8T8B3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಾಹಿತ್ಯದಲ್ಲಿನ ದೇಶೀಯ ಹಾಗೂ ಅನ್ಯದೇಶೀಯ ಪದಗಳನ್ನು ಪತ್ತೆ ಹಚ್ಚುವರು.

- ಅಚ್ಚಗನ್ನಡದ ಪದಗಳನ್ನು 'ದೇಶೀಯ ಪದಗಳು' ಎನ್ನುತ್ತೇವೆ.
- ಅಚ್ಚಗನ್ನಡದ ಪದಗಳನ್ನು ಬಿಟ್ಟು ಬೇರೆ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪದಗಳನ್ನು ಅನ್ಯದೇಶೀಯ ಪದಗಳು ಎನ್ನುತ್ತೇವೆ.
- ಕನ್ನಡ ಭಾಷೆಗೆ ಅರಬ್ಬಿ, ಉರ್ದು, ಪರ್ಷಿಯನ್, ಪೋರ್ಚುಗೀಸ್, ಇಂಗ್ಲಿಷ್ ಭಾಷೆಗಳಿಂದ ಕೆಲವು ಪದಗಳು ಬಂದಿವೆ.

### * ದೇಶೀಯ ಪದಗಳು

ಸಂಖ್ಯಾಪದಗಳು : ಒಂದರಿಂದ ಒಂಬತ್ತುನೂರ ತೊಂಬತ್ತೊಂಬತ್ತರವರೆಗೆ

ಅಂಗಾಂಗಗಳು : ಕೈ, ಕಣ್ಣು, ಬಾಯಿ, ನಾಲಿಗೆ, ಕಾಲು ಇತ್ಯಾದಿ

ವಿಭಕ್ತಿ ಪ್ರತ್ಯಯಗಳು : ಉ, ಅನ್ನು, ಇಂದ, ಗೆ, ಕ್ಕೆ, ದೆಸೆಯಿಂದ, ಅ, ಅಲ್ಲಿ

ಬಂಧುವಾಚಕ ಪದಗಳು : ಅಪ್ಪ, ಅಮ್ಮ, ಅಜ್ಜಿ, ತಾತ, ಅಣ್ಣ, ಅಕ್ಕ

### * ಅನ್ಯದೇಶೀಯ ಪದಗಳು (ಎರವಲು ಪದಗಳು)

ಇಂಗ್ಲಿಷ್ : ಬಸ್ಸು, ಕಾರು, ಸ್ಕೂಲು, ರೋಡು, ಪೆನ್ನು ಇತ್ಯಾದಿ.

ಅರಬ್ಬಿ : ಅಮಲ್ದಾರ, ಇಲಾಖೆ, ಕಾಗದ ಇತ್ಯಾದಿ.

ಉರ್ದು : ರುಮಾಲು, ಮಹಲು, ದುರಸ್ತಿ, ನಗದು ಇತ್ಯಾದಿ

ಪರ್ಷಿಯನ್ : ದಿವಾನ, ಕಾರು, ಸ್ಕೂಲು, ರೋಡು ಇತ್ಯಾದಿ

ಪೋರ್ಚುಗೀಸ್ : ಜಮೀನು, ಅನಾನಸು, ತಂಬಾಕು ಇತ್ಯಾದಿ.

**ಚಟುವಟಿಕೆ 01 :** ಕೊಟ್ಟಿರುವ ಪದಗಳನ್ನು ದೇಶ್ಯ ಮತ್ತು ಅನ್ಯ ದೇಶ್ಯ ಪದಗಳಾಗಿ ಪಟ್ಟಿ ಮಾಡಿರಿ.

ಕಾರು ನಾಲಿಗೆ ಸ್ಕೂಲು ಆರು ರೋಡು ಅವನು ಕಾರು ಮರ ಸ್ಕೂಲು ರೋಡು
ಬೆಟ್ಟ ಇಲಾಖೆ ಅನ್ನು ಹಸುರು ಇಂದ ಅನಾನಸು ಬಾಯಿ ಅಮ್ಮ ಕಾಗದ

| ದೇಶ್ಯಪದಗಳು | ಅನ್ಯದೇಶ್ಯಪದಗಳು (ಎರವಲುಪದಗಳು) |
|---|---|
| | |

©KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 08
# ತತ್ಸಮ – ತದ್ಭವ

B1C8K8
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ತತ್ಸಮ ಪದಗಳಿಗೆ ತದ್ಭವ, ತದ್ಭವ ಪದಗಳಿಗೆ ತತ್ಸಮ ಪದಗಳನ್ನು ಗುರುತಿಸುವರು.

- **ತತ್ಸಮ** – ತತ್ + ಸಮ ಸಂಸ್ಕೃತಕ್ಕೆ ಸಮನಾದುದು ಎಂದರ್ಥ. ಸಂಸ್ಕೃತದಿಂದ ನೇರವಾಗಿ ತಂದು ಕನ್ನಡದಲ್ಲಿ ಬಳಸುವ ಪದಗಳೇ ತತ್ಸಮ ಪದಗಳು.
- **ತದ್ಭವ** – ಸಂಸ್ಕೃತದಿಂದ ಅಲ್ಪಸ್ವಲ್ಪ ಬದಲಾವಣೆ ಅಥವಾ ಸಂಪೂರ್ಣ ಬದಲಾವಣೆ ಹೊಂದಿ ಕನ್ನಡದಲ್ಲಿ ಬಳಸುವ ಪದಗಳೇ ತದ್ಭವ ಪದಗಳು.

**ಚಟುವಟಿಕೆ 01 :** ಕೊಟ್ಟಿರುವ ಪದಗಳನ್ನು ಗಮನವಿಟ್ಟು ಅರ್ಥೈಸಿಕೊಂಡು ಓದಿ.

| ತತ್ಸಮ | ತದ್ಭವ | ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|---|---|
| ಕಾವ್ಯ | ಕಬ್ಬ | ಶೂನ್ಯ | ಸೊನ್ನೆ | ಕೀರ್ತಿ | ಕೀರುತಿ |
| ಕಾರ್ಯ | ಕಜ್ಜ | ಸಿಂಹ | ಸಿಂಗ | ಹರ್ಷ | ಹರುಷ |
| ವಿದ್ಯೆ | ಬಿಜ್ಜೆ | ವಂಶ | ಬಂಚ | ಪಕ್ಷಿ | ಹಕ್ಕಿ |
| ಜನ್ಮ | ಜನುಮ | ವೀರ | ಬೀರ | ಭಕ್ತಿ | ಬಕುತಿ |
| ಸ್ಥಾನ | ಠಾಣ | ಪ್ರಾಣ | ಹರಣ | ವೈಶಾಖ | ಬೇಸಗೆ |
| ಕೋಕಿಲ | ಕೋಗಿಲೆ | ವರ್ಷ | ವರುಷ | ವಿಜ್ಞಾಪನೆ | ಬಿನ್ನಹ |
| ಅಮೃತ | ಅಮರ್ದ | ಶಶಿ | ಸಸಿ | ಶರ್ಕರಾ | ಸಕ್ಕರೆ |
| ಸಂಧ್ಯಾ | ಸಂಜೆ | ಧರ್ಮ | ಧರುಮ | ಯಮ | ಜವ |
| ವಿಜ್ಞಾನ | ಬಿನ್ನಣ | ಯಜ್ಞ | ಜನ್ನ | ರಾಜ | ರಾಯ |
| ವ್ಯಯ | ಬೀಯ | ಶ್ರೀ | ಸಿರಿ | ಭೂಮಿ | ಬುವಿ |

©KTBS NOT TO BE REPUBLISHED

**ಚಟುವಟಿಕೆ 2 :** ಮಾದರಿಯಂತೆ ತತ್ಸಮಗಳಿಗೆ ತದ್ಭವ ರೂಪಗಳನ್ನು ಬರೆಯಿರಿ.

**ಮಾದರಿ** – ಮಲ್ಲಿಕಾ – ಮಲ್ಲಿಗೆ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಶ್ರೀ | | ವಿಜ್ಞಾಪನೆ | |
| ಆಶ್ಚರ್ಯ | | ಕುಠಾರ | |
| ದಿಶಾ | | ಕ್ಷಣ | |
| ಹಂಸ | | ತಪಸ್ವಿ | |
| ಕ್ಷಣ | | ದೃಷ್ಟಿ | |
| ಕುಮಾರ | | ಯುಗ | |
| ಕಸ್ತೂರಿ | | ಯೌವನ | |
| ಶೃಂಗಾರ | | ಸಂಸ್ಕೃತ | |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 09
# ಛಂದಸ್ಸು

E1Y4D6
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪದ್ಯ, ಪ್ರಾಸ, ಪಾದ, ಗಣ ಹಾಗೂ ಛಂದಸ್ಸುಗಳನ್ನು ಪರಿಚಯಿಸುವರು.

**ಪ್ರಾಸ : ಪದ್ಯದ ಜೀವಾಳವೇ ಪ್ರಾಸ. ಪ್ರಾಸವಿಲ್ಲದ ಪದವ ತಾಸು ಹಾಡಿದರೇನು? ಎಂದು ಕವಿಗಳೇ ಹೇಳಿದ್ದಾರೆ. ಪ್ರಾಸದಲ್ಲಿ ಆದಿಪ್ರಾಸ, ಅಂತ್ಯಪ್ರಾಸ ಹಾಗೂ ಮದ್ಯಪ್ರಾಸ ಎಂಬ ಮೂರು ವಿಧಗಳಿವೆ.**

**ಚಟುವಟಿಕೆ 1 :** ಕೊಟ್ಟಿರುವ ಪದ್ಯಭಾಗದಲ್ಲಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

**ಆದಿಪ್ರಾಸ** – ಪದ್ಯದ ಪ್ರತಿ ಪಾದದ ಆರಂಭದ ನಿಯತವಾದ ಸ್ಥಾನದಲ್ಲಿ ಒಂದೇ ರೀತಿಯ ವರ್ಣ ಬರುವುದು.

ಮುಗಿಲ ಮಾರಿಗೆ
ರಾಗರತಿಯ ನಂಜ ಏರಿತ್ತ
ಆಗ ಸಂಜೆ ಆಗಿತ್ತ
ನೆಲದ ಅಂಚಿಗೆ ಮಂಜಿನಮುಸುಕು
ಹ್ಯಾಂಗೋ ಬಿದ್ದಿತ್ತ
ಗಾಳಿಗೆ ಮೇಲಕ್ಕೆದಿತ್ತ

**ಅಂತ್ಯಪ್ರಾಸ** – ಪದ್ಯದ ಪ್ರತಿ ಪಾದದ ಅಂತ್ಯದ ನಿಯತವಾದ ಸ್ಥಾನದಲ್ಲಿ ಒಂದೇ ರೀತಿಯ ವರ್ಣ ಬರುವುದು.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು.
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು

**ಚಟುವಟಿಕೆ 2 :** ಕೊಟ್ಟಿರುವ ಪದ್ಯಭಾಗದಲ್ಲಿರುವ ಆದಿಪ್ರಾಸ, ಮಧ್ಯಪ್ರಾಸಮತ್ತು ಅಂತ್ಯಪ್ರಾಸವಿರುವ ಪದಗಳನ್ನು ಗುರುತಿಸಿ ಬರೆಯಿರಿ.

ಗುರು ಹಿರಿಯರ ಅರಿಯದವನ ಅರಿವದೇತಕೆ
ಪರಹಿತಾರ್ಥಕಿಲ್ಲದವನ ಶರೀರವೇತಕೆ
ಹರಿಯ ಪೂಜೆ ಮಾಡದವನ ಜನುಮವೇತಕೆ
ಸೇರಿದವರ ಹೊರೆಯದಂಥ ದೊರೆಯು ಏತಕೆ

@KTBS NOT TO BE REPUBLISHED

| ಆದಿಪ್ರಾಸ | ಮಧ್ಯಪ್ರಾಸ | ಅಂತ್ಯಪ್ರಾಸ |
|---|---|---|
| | | |
| | | |
| | | |
| | | |
| | | |
| | | |

**ಚಟುವಟಿಕೆ 3 :** ಬಿಟ್ಟ ಸ್ಥಳವನ್ನು ಸೂಕ್ತ ಪ್ರಾಸಪದಗಳಿಂದ ಪೂರ್ಣಗೊಳಿಸಿ.

1. ಮಕ್ಕಳಿಗೆ ಇಷ್ಟ ಆಟ
ಹಸಿದಾಗ ಬೇಕು ____________________

2. ಅರಸನ ವಾಸ ಅರಮನೆ
ಕಳ್ಳನ ವಾಸ ____________________

3. ದೇವಾಲಯ ಮುಂದೆ ಕಂಬ
ಕನ್ನಡಿ ಒಳಗೆ ಕಾಣುವುದು ____________________

4. ಉಸಿರಾಡಲು ಬೇಕು ಗಾಳಿ
ವಧುವಿನ ಕೊರಳಿಗೆ ಕಟ್ಟಲು ಬೇಕು ________________

5. ಕಥೆ ಹೇಳಲು ಬೇಕು ಅಜ್ಜಿ
ಕಾಫಿ ಜೊತೆ ತಿನ್ನಲು ಬೇಕು ________________

6.ಮನೆಯನ್ನು ನಿಷ್ಠೆಯಿಂದ ಕಾಯುವುದು ನಾಯಿ
ಮಕ್ಕಳನ್ನು ಪ್ರೀತಿಯಿಂದ ಪಾಲಿಸುವವಳು ____________

7. ಕುಡಿಯಲು ಬೇಕು ಹಾಲು
ನಡೆಯಲು ಬೇಕು ________

8. ಜಪ ಮಾಲೆಯಲ್ಲಿ ಇರುವುದು ಮಣಿ
ಕೊರವಂಜಿ ಹೇಳುವುದು ____________________

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 10
# ಪ್ರಸ್ತಾರ ಹಾಕೋಣ

T1D1X5
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಛಂದಸ್ಸಿನ ಮೂಲಾಂಶಗಳನ್ನು ತಿಳಿದು, ಪದ್ಯದ ಪಾದಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯುವರು.

ಪದ್ಯದ ಸಾಲುಗಳನ್ನು **'ಪಾದ'** ಎನ್ನುವರು.
ಅಕ್ಷರವನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲವನ್ನು **'ಮಾತ್ರೆ'** ಎನ್ನುವರು.
**ಲಘು – ಒಂದು ಮಾತ್ರಾಕಾಲ, ಗುರು – ಎರಡು ಮಾತ್ರಾಕಾಲ**

**ಚಟುವಟಿಕೆ 1 :** ಪ್ರಸ್ತಾರ ಹಾಕಲು ಕಲಿಯಿರಿ. (ಲಘು ಗುರು ಗುರುತಿಸಿ).

1. ಎಲ್ಲಾ ಹ್ರಸ್ವ ಸ್ವರಗಳು ಲಘುವಾಗುತ್ತವೆ. (ಮಾದರಿಯನ್ನು ಗಮನಿಸಿ ಬರೆಯಿರಿ)

| | |
|---|---|
| U | |
| ಅ | |

2. ಎಲ್ಲಾ ಧೀರ್ಘ ಸ್ವರಗಳು ಗುರುವಾಗುತ್ತವೆ.

| | |
|---|---|
| _ | |
| ಆ | |

3. ದೀರ್ಘ ಸ್ವರ ಸಹಿತ ಗುಣಿತಾಕ್ಷರಗಳು ಗುರುವಾಗುತ್ತವೆ.

| | |
|---|---|
| _ | |
| ಕಾ | |

4, ಅನುಸ್ವಾರ ಮತ್ತು ವಿಸರ್ಗಗಳಿಂದ ಕೂಡಿದ ಅಕ್ಷರಗಳು ಗುರುವಾಗುತ್ತದೆ.

| | |
|---|---|
| _ | |
| ಕಂ | |

5. ಸಂಧ್ಯಕ್ಷರಗಳು ಗುರುವಾಗಿರುತ್ತದೆ.

| | |
|---|---|
| _ | |
| ಔ | |

6. ವ್ಯಂಜನಾಕ್ಷರದ ಹಿಂದಿನಾಕ್ಷರ ಗುರುವಾಗುತ್ತದೆ.

| | |
|---|---|
| — | |
| ಕಣ್ | |

7. ಒತ್ತಕ್ಷರದ ಹಿಂದಿನಾಕ್ಷರ ಗುರುವಾಗುತ್ತದೆ.

| | |
|---|---|
| _ _ U | |
| ನ ಕ್ಷ ತ್ರ | |

8. ಷಟ್ಪದಿಯ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಗುರುವಾಗುತ್ತದೆ.

@KTBS NOT TO BE REPUBLISHED

ಚಟುವಟಿಕೆ 2 : ನಿಮ್ಮ ಮನೆಯವರ, ಸ್ನೇಹಿತರ ಹೆಸರುಗಳನ್ನು ಬರೆದು, ಪ್ರಸ್ತಾರ ಹಾಕಿ.

| | | |
|---|---|---|
| | | |
| | | |
| | | |
| | | |
| | | |

ಚಟುವಟಿಕೆ 3 : ಕೊಟ್ಟಿರುವ ಕಂದಪದ್ಯಕ್ಕೆ ಪ್ರಸ್ತಾರ ಹಾಕಿ ಪೂರ್ಣಗೊಳಿಸಿರಿ.

ಭವ ಧನುಜನುರಣ ಜಲಮಂ
ಸವಿ ನೋಡಿದನೆಂತು ನಿನ್ನ ಬಲ ಜಲ ನಿಧಿಯಂ
ಸವಿ ನೋಡಿದೆ ನೀಕೊಳನಂ
ತವೆಪೀರ್ದು ಬಳಿಕ್ಕೆ ನಿನ್ನ ಸವಿಯಂನೋಳ್ಪೆಂ

@KTBS
NOT TO BE REPUBLISHED

ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಲಕ್ಷಣಗಳನ್ನು ಚರ್ಚಿಸಿ ಬರೆಯಿರಿ.

ಕಂಡು ಖಳ ಬೆರಗಾದನವನು
ದ್ದಂಡ ತನುವಚ್ಚರಿಯ ಲಾಹರಿ
ಖಂಡ ಪರಶುಗಳಳುಕು ವರುತನ್ನೊಡವೆ ತೊಡಕುವರೆ

| |
|---|
| |
| |
| |
| |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 11

# ಅಲಂಕಾರ ತಿಳಿಯೋಣ

K5H7P2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪದ್ಯದಲ್ಲಿರುವ ಪ್ರಾಸ ಹಾಗೂ ಅಲಂಕಾರಗಳನ್ನು ಪತ್ತೆಹಚ್ಚುವರು.

**ಚಟುವಟಿಕೆ 1 :** ಕೊಟ್ಟಿರುವ ಜನಪ್ರಿಯ ಸಿನಿಮಾ ಹಾಡನ್ನು ಗಮನಿಸಿ ಯಾವುದನ್ನು ಯಾವುದಕ್ಕೆ ಹೋಲಿಸಲಾಗಿದೆ. ಎಂಬುದನ್ನು ಗುರುತಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಕಣ್ಣೆರಡು ಕಮಲಗಳಂತೆ,
ಮುಂಗುರುಳು ದುಂಬಿಗಳಂತೆ,
ನಾಸಿಕವು ಸಂಪಿಗೆಯಂತೆ,
ನೀ ನಗಲು ಹೂ ಬಿರಿದಂತೆ,
ನಡೆಯುತಿರೆ ನಾಟ್ಯದಂತೆ
ರತಿಯೇ ಧರೆಗಿಳಿದಂತೆ
ಈ ಅಂದಕೆ ಸೋತೆನು ಸೋತೆ ನಾನು

1. ಕಣ್ಣುಗಳನ್ನು ಯಾವುದಕ್ಕೆ ಹೋಲಿಸಲಾಗಿದೆ?

_______________________________________________

2. ದುಂಬಿಯಂತೆ ಕಾಣುವುದು ಏನು?

_______________________________________________

3. ನಾಟ್ಯದಂತೆ ಕಾಣುವುದು ಯಾವುದು?

_______________________________________________

4. ನಾಸಿಕವನ್ನು ಯಾವುದಕ್ಕೆ ಹೋಲಿಸಲಾಗಿದೆ?

_______________________________________________

@KTBS NOT TO BE REPUBLISHED

* ಎರಡು ವಸ್ತುಗಳನ್ನು ಪರಸ್ಪರ ಹೋಲಿಸಿ ಹೇಳುವುದಕ್ಕೆ 'ಉಪಮಾಲಂಕಾರ' ಎನ್ನುವರು. ಈ ಅಲಂಕಾರದಲ್ಲಿ ನಾಲ್ಕು ಅಂಶಗಳಿವೆ ಎಂಬುದನ್ನು ಓದಿ ತಿಳಿಯಿರಿ.

1. ಉಪಮೇಯ : ಹೋಲಿಸಲ್ಪಡುವ ವಸ್ತು (ವರ್ಣ್ಯ)
2. ಉಪಮಾನ : ಹೋಲಿಸುವ ವಸ್ತು (ಅವರ್ಣ್ಯ)
3. ಉಪಮಾವಾಚಕ : ಸಂಬಂಧ ಕಲ್ಪಿಸುವ ಪದ
4. ಸಮಾನಧರ್ಮ : ಎರಡು ವಸ್ತುಗಳಲ್ಲಿರುವ ಸಮಾನ ಗುಣ

**ಚಟುವಟಿಕೆ 2 :** ಕೊಟ್ಟಿರುವ ಹೇಳಿಕೆಯಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ.

1.ನನ್ನ ಶಾಲೆಯು ದೇವಾಲಯದಂತೆ ಪವಿತ್ರವಾಗಿದೆ.

ಉಪಮೇಯ :________________________

ಉಪಮಾನ :________________________

ಉಪಮಾವಾಚಕ :________________________

ಸಮಾನಧರ್ಮ :________________________

ಸಮನ್ವಯ :________________________________________________

________________________________________________________________

________________________________________________________________

________________________________________________________________

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 12
# ರೂಪಕಾಲಂಕಾರ ತಿಳಿಯೋಣ

C4A2T4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ರೂಪಕ ಅಲಂಕಾರಗಳನ್ನು ಗುರುತಿಸಿ, ಲಕ್ಷಣಗಳೊಂದಿಗೆ ಸಮನ್ವಯಗೊಳಿಸಿ ಬರೆಯುವರು.

**ಚಟುವಟಿಕೆ 1 :** ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿ – ವ್ಯತ್ಯಾಸ ಅರಿಯಿರಿ.

1) ಈಕೆ ಸಾಕ್ಷಾತ್ ಸರಸ್ವತಿ

ಇಲ್ಲಿ ಈಕೆಯನ್ನು ಸರಸ್ವತಿಗೆ ಹೋಲಿಸಿಲ್ಲ, ಈಕೆ ಸಾಕ್ಷಾತ್ ಸರಸ್ವತಿಯೇ– ಈಕೆ ಬೇರೆಯಲ್ಲ, ಸರಸ್ವತಿ ಬೇರೆಯಲ್ಲ ಇಬ್ಬರೂ ಒಂದೇ ಎಂದು ಹೇಳಿದ್ದಾರೆ. ಈ ರೀತಿಯ ಅಲಂಕಾರವನ್ನು 'ರೂಪಕ ಅಲಂಕಾರ' ಎನ್ನುವರು.

ಉದಾಹರಣೆ : ಚಂದ್ರಮುಖಿ, ಸೇನಾಸಾಗರ, ಪಾದಕಮಲ, ರಕ್ತಕಣ್ಣೀರು ಇಲ್ಲಿ ಎರಡು ಒಂದೇ ಎಂದು ಹೇಳಿರುವುದರಿಂದ ಅದನ್ನು 'ರೂಪಕ ಅಲಂಕಾರ' ಎನ್ನುವರು.

2) ಪಾದಕಮಲ

ಉಪಮೇಯ : ______________________

ಉಪಮಾನ : ______________________

ಸಮನ್ವಯ : ಇಲ್ಲಿ ಉಪಮೇಯವಾದ______________________ಅನ್ನು

ಉಪಮಾನವಾದ ______________________ ಕ್ಕೆ ಎರಡು ಒಂದೇ ಎಂಬಂತೆ ಅಭೇದವಾಗಿ ಹೇಳಲಾಗಿದೆ.

**ಚಟುವಟಿಕೆ 2 :** ಕೊಟ್ಟಿರುವ ಸಾಮಾನ್ಯ ವಾಕ್ಯಗಳನ್ನು ಅಲಂಕಾರ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ಉದಾಹರಣೆ : ಶ್ರೇಯಾ ಅವರು ಹಾಡುತ್ತಾರೆ.

ಶ್ರೇಯಾ ಅವರು ಕೋಗಿಲೆಯಂತೆ ಹಾಡುತ್ತಾರೆ.

1. ಹಕ್ಕಿಗಳು ಹಾರುತ್ತಿವೆ.

________________________________________________

2. ರೂಪಳ ಜಡೆಯು ಉದ್ದವಾಗಿದೆ.

________________________________________________

3. ಉಪಮನ್ಯುವಿನ ಕಣ್ಣುಗಳು ಹೊಳೆಯುತ್ತಿವೆ.

________________________________________________

4. ರಾಮಣ್ಣ ಭೀಮಣ್ಣ ಹೋರಾಡುತ್ತಿದ್ದಾರೆ.

________________________________________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 13
## ಕಥೆಯನ್ನು ಓದೋಣ

F3F9Z3
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಾಹಿತ್ಯದ ಒಂದು ಪ್ರಕಾರವಾದ ಕಥೆಯನ್ನು ಓದಿ ಅರ್ಥೈಸಿಕೊಳ್ಳುವರು.

**ಚಟುವಟಿಕೆ 1 :** ಈ ನೀತಿ ಕಥೆಯನ್ನು ಓದಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

### ಬಡವನ ಒಳ್ಳೆಯತನ

ರಾಮ ಒಬ್ಬ ಬಡ ರೈತ ಅವನ ಬಳಿ ತುಂಡು ಭೂಮಿಯನ್ನು ಬಿಟ್ಟರೆ ಬೇರೇನು ಇರಲಿಲ್ಲ. ಸಾಧ್ಯ ಸಾಧ್ಯವಾದದ್ದನ್ನೆಲ್ಲ ಆ ಭೂಮಿಯಲ್ಲಿ ಬೆಳೆಯುತ್ತಿದ್ದನು. ರಾಮನು ಬಹಳ ಸಹೃದಯಿ ಕೂಡಾ ಹೌದು, ಅವನ ಹತ್ತಿರವಿದ್ದ ದೇವಸ್ಥಾನಕ್ಕೆ ಹೋಗಿ ದೇವರಿಗೆ ಪೂಜೆಯನ್ನು ಸಲ್ಲಿಸುತ್ತಿದ್ದ. ಒಮ್ಮೆ ಅವನು ಎರಡು ಬಾಳೆಹಣ್ಣುಗಳನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋದನು. ಅವನು ದೇವಸ್ಥಾನದ ಒಳಗೆ ಇನ್ನೇನು ಹೋಗ ಬೇಕೆನ್ನುವಷ್ಟರಲ್ಲಿ, ಒಬ್ಬ ಸನ್ಯಾಸಿಯು ಅವನನ್ನು ತಡೆದು "ನಾನು ಬಹಳ ಹಸಿದಿದ್ದೇನೆ, ತಿನ್ನಲು ಏನಾದರೂ ಕೊಡುವೆಯಾ?" ಎಂದು ಕೇಳಿದನು. ರಾಮನು ಸಂಕೋಚವಿಲ್ಲದೆ ಆ ಎರಡು ಬಾಳೆಹಣ್ಣುಗಳನ್ನು ಆ ಸನ್ಯಾಸಿಗೆ ಕೊಟ್ಟನು. ಆಗ ಸನ್ಯಾಸಿಯು" ಈಗ ದೇವರಿಗೆ ಏನು ಅರ್ಪಿಸುವೆ? ಎಂದು ಕೇಳಿದನು. ಅದಕ್ಕೆ ರಾಮನು ಎರಡು ಬಾಳೆ ಹಣ್ಣುಗಳು ನಿನ್ನ ಹಸಿವನ್ನು ನೀಗಿಸುವುದಾದರೆ, ಅದು ದೇವರ ಸೇವೆಯೇ"ಎಂದನು. ಸನ್ಯಾಸಿಯು ರಾಮನ ಪ್ರಾಮಾಣಿಕತೆ ಮತ್ತು ಒಳ್ಳೆಯತನವನ್ನು ಮೆಚ್ಚಿ ಅವನಿಗೆ ಅನೇಕ ವರಗಳನ್ನು ದಯಪಾಲಿಸಿದರು ಹಾಗೂ ಅವನನ್ನು ಶ್ರೀಮಂತನನ್ನಾಗಿ ಮಾಡಿದನು. ಆಗಲೂ ರಾಮನು ತನ್ನ ದಾನ ಧರ್ಮವನ್ನು ಮುಂದುವರಿಸಿದನು.

1) ರಾಮ ಯಾರು?

____________________________________________________________

2) ರಾಮನ ಗುಣವನ್ನು ತಿಳಿಸಿ ?

____________________________________________________________

3) ಸನ್ಯಾಸಿಯು ರಾಮನನ್ನು ತಡೆದು ಏನನ್ನು ಕೇಳಿದನು?

____________________________________________________________

4) ರಾಮನು ಸನ್ಯಾಸಿಗೆ ಏನನ್ನು ನೀಡಿದನು?

____________________________________________________________

5) ರಾಮನ ಯಾವ ಗುಣವನ್ನು ಸನ್ಯಾಸಿಯು ಮೆಚ್ಚಿದನು?

____________________________________________________________

6) ಈ ಕಥೆಯಿಂದ ನಿಮಗೆ ತಿಳಿದು ಬರುವ ನೀತಿ ಏನು?

____________________________________________________________

____________________________________________________________

7) ನಿನಗೆ ತಿಳಿದಿರುವ ಯಾವುದಾದರು ಒಂದು ಕಥೆಯನ್ನು ತರಗತಿಯಲ್ಲಿ ಹೇಳು.

8) ಮೊಲ ಮತ್ತು ಆಮೆಯ ಕಥೆಯನ್ನು ನಿನ್ನ ಶಿಕ್ಷಕರಿಂದ ಕೇಳಿ ತಿಳಿದುಕೊಳ್ಳಿ.

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 14
## ನಾಟಕ ರೂಪ ತಿಳಿಯೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

S6K7W5

**ಕಲಿಕಾ ಫಲ :** ಸಾಹಿತ್ಯದ ಒಂದು ಪ್ರಕಾರವಾದ ನಾಟಕವನ್ನು ಕಥೆಯ ರೂಪದಲ್ಲೂ, ಕಥೆಯನ್ನು ನಾಟಕದ ರೂಪದಲ್ಲೂ ಬರೆಯಲು ಶಕ್ತರಾಗುವರು.

**ಚಟುವಟಿಕೆ 1 :** ಕೊಟ್ಟಿರುವ ನಾಟಕದ ಸಂಭಾಷಣೆಯನ್ನು ಹೇಳಿರಿ.

**ನಾಟಕದ ಹೆಸರು : ಭೂಕೈಲಾಸ**

**ದೃಶ್ಯ – ಸಮುದ್ರತೀರ (ರಾವಣನ ಕೈಯಲ್ಲಿ ಶಿವನ ಆತ್ಮಲಿಂಗ)**

ರಾವಣ : ಆಹಾ! ಪಶುಪತಿ! ಇದೇನು ನಿನ್ನ ಲೀಲೆ? ಈ ತಾಣ ಅದೆಷ್ಟು ಸೊಗಸಾಗಿದೆ! ಚಿಲಿಪಿಲಿ ಗುಟ್ಟುವ ಪಕ್ಷಿಗಳ ಗುಂಪು, ತಣ್ಣನೆ ತೀಡಿ ಬರುವ ತಂಗಾಳಿ. ಪಶ್ಚಿಮ ಸಮುದ್ರದಲ್ಲಿ ಮುಳುಗುತ್ತಿರುವ ಸೂರ್ಯ. ಓಹ್! ಸಂಧ್ಯಾಕಾಲ ಬರುತ್ತಿದೆ. ನನ್ನ ಅನುಷ್ಠಾನಕ್ಕೆ ಸಮಯ ಮೀರುವುದಲ್ಲ.! ಏನು ಮಾಡಲಿ! ಈ ಆತ್ಮಲಿಂಗವನ್ನು ಯಾರ ಕೈಗೆ ಒಪ್ಪಿಸಲಿ? ಓ, ವಟುವೊಬ್ಬ ಇತ್ತಲೇ ಬರುತ್ತಿರುವನು. ಆತನನ್ನೇ ಕರೆಯುವೆ. ಅಯ್ಯಾ ಕುಮಾರ ! ಇತ್ತ ಬಾ.

ವಟು : (ಪ್ರವೇಶಿಸಿ) ಏನಯ್ಯಾ, ನನ್ನನ್ನೇಕೆ ಕರೆದೆ ?

ರಾವಣ : ನಿನ್ನ ಹೆಸರೇನು ಪುಟ್ಟ ?

ವಟು : ನನ್ನ ಹೆಸರು ಗಣಪ ಎಂದು.

ರಾವಣ : ನಿನ್ನ ತಂದೆ–ತಾಯಿ ಯಾರು ?

ವಟು : ತಂದೆ ಪರಮೇಶ್ವರ, ತಾಯಿ ಶಾಂಭವಿ.

ರಾವಣ : ನನಗೊಂದು ಕೆಲಸ ಆಗಬೇಕಾಗಿದೆ; ಮಾಡಿ ಕೊಡುವೆಯಾ ?

ವಟು : ನನ್ನಿಂದ ಆಗುವುದಾದರೆ ಮಾಡುತ್ತೇನೆ.

ರಾವಣ : ನೋಡು ಗಣಪ! ನಾನು ಸಂಧ್ಯಾವಂದನೆ ಮಾಡಬೇಕಾಗಿದೆ. ನನ್ನ ಕೈಯಲ್ಲಿ ಇರುವ ಈ ಲಿಂಗವನ್ನು ನೆಲದಲ್ಲಿ ಇಡುವಂತಿಲ್ಲ. ಸಂಧ್ಯಾವಂದನೆ ಮುಗಿಯುವವರೆಗೆ ಇದನ್ನು ಹಿಡಿದು ಕೊಂಡಿರುವಿಯಾ ?

ವಟು : ಆಗಲಿ, ಇತ್ತಕೊಡಿ (ತೆಗೆದುಕೊಳ್ಳುವನು) ಅಯ್ಯೋ! ಇದು ಬಹಳ ಭಾರವಾಗಿದೆ. ನನ್ನಿಂದಾಗದು.

ರಾವಣ : ಹೆದರಬೇಡ! ನನ್ನ ಜಪ ಮುಗಿಯುವವರೆಗೆ ಇದನ್ನು ಹಿಡಿದಿರು.

ವಟು : ಆದರೆ ಒಂದು ಮಾತು. ನನ್ನ ಕೈಲಾಗದಿದ್ದರೆ ನಿನ್ನನ್ನು ಕರೆಯುತ್ತೇನೆ. ಮೂರು ಬಾರಿ ಕರೆದಾಗಲೂ ಬಾರದಿದ್ದರೆ ನೆಲದ ಮೇಲೆ ಇಟ್ಟು ಬಿಡುತ್ತೇನೆ.

ರಾವಣ : ಬೇಡ ಬೇಡ ಹಾಗೆ ಮಾಡಬೇಡ. ನಾನು ಆದಷ್ಟು ಬೇಗ ಬಂದು ಬಿಡುವೆ. (ರಾವಣ ಹೋಗುವನು, ನಾರದ ಬರುವನು)

ನಾರದ : ಸದ್ಯ ಶಿವನ ಆತ್ಮಲಿಂಗವನ್ನು ರಾವಣ ನಿನ್ನ ಕೈಗೊಪ್ಪಿಸಿದ್ದಾನೆ. ಆದಷ್ಟು ಬೇಗ ನೆಲದಲ್ಲಿ ಇಟ್ಟುಬಿಡು.

ನಾರದ : ವಚನ ಭಂಗ ಮಾಡಬಾರದು. ಆದರೆ ನೀನೇ ಅವನೊಡನೆ ಹೇಳಿದಂತೆ ಮೂರು ಬಾರಿ ಕರೆದು ಕೆಳಗಿಡು.

ವಟು : ಆಗಲಿ ಹಾಗೆಯೇ ಮಾಡುತ್ತೇನೆ. ರಾವಣಾSS (ನೇಪಥ್ಯದಲ್ಲಿ ರಾವಣ–ಅರ್ಘ್ಯ ಕೊಡುತ್ತಿದ್ದೇನೆ......)

ನಾರದ : ಅಂಬಾ ತನಯ! ಇನ್ನೊಮ್ಮೆ ಕೂಗಿ ಬಿಡು.

ವಟು : ರಾವಣಾSS ಭಾರ ತಡೆಯಲಾರೆ ಬೇಗ ಬಾSSS (ನೇಪಥ್ಯದಲ್ಲಿ "ಸಂಧ್ಯಾ ವಂದನೆ ಮುಗಿಯುತ್ತಾ ಬಂತು. ಇದೋ ಬಂದೆ")

ನಾರದ : ಗಣೇಶ! ಇದು ಅಂತಿಮ ಕ್ಷಣ. ನಮ್ಮನ್ನು ಹಾಲಿನಲ್ಲಾದರೂ ಹಾಕು ನೀರಲ್ಲಾದರೂ ಹಾಕು....ನಿನ್ನಿಷ್ಟ ನಾನಿನ್ನು ಬರುತ್ತೇನೆ .....ನಾರಾಯಣ.... (ನಿರ್ಗಮನ)

NOT TO BE REPUBLISHED @KTBS

**ಚಟುವಟಿಕೆ 2 :** ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

1) ಈ ನಾಟಕದಲ್ಲಿ ಬರುವ ಪಾತ್ರಧಾರಿಗಳನ್ನು ಹೆಸರಿಸಿ.

2) ಈ ನಾಟಕದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು?

3) ಈ ನಾಟಕವನ್ನು ಗದ್ಯರೂಪದಲ್ಲಿ ಬರೆಯಿರಿ.

@KTBS
NOT TO BE REPUBLISHED

**ಚಟುವಟಿಕೆ 3 :** 1) ಈ ನಾಟಕವನ್ನು ನಿಮ್ಮ ತರಗತಿಯಲ್ಲಿ ಅಭಿನಯಿಸಿ.
2) ಪೌರಾಣಿಕ ನಾಟಕದಲ್ಲಿ ಬಳಸುವ ವೇಷಭೂಷಣ ವಸ್ತ್ರಾಲಂಕಾರಗಳ ಪಟ್ಟಿಯನ್ನು ಮಾಡಿ.

| | | |
|---|---|---|
| | | |
| | | |
| | | |
| | | |

# ಏಕೆ? ಹೇಗೆ? ಹಾಗಾದರೆ

S5W7F4
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಏಕೆ, ಹೇಗೆ, ಹಾಗಾದರೆ ಇತ್ಯಾದಿ ಪ್ರಶ್ನೆಗಳಿಗೆ ಕಾರಣ ಸಹಿತ ಉತ್ತರ ಬರೆಯುವರು.

**ಚಟುವಟಿಕೆ 1 :** ಕೊಟ್ಟಿರುವ ಜಾನಪದಗೀತೆಯನ್ನು ಆಲಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ಮುಂಜಾನೆದ್ದು ಕುಂಬಾರಣ್ಣ ಹಾಲು ಬಾನುಂಡಾನ
ಹಾರ್ಯಾಡಿ ಮಣ್ಣಾ ತುಳಿದಾನ
ಹಾರಿ ಹಾರ್ಯಾಡಿ ಮಣ್ಣಾ ತುಳಿಯುತ್ತ ಮಾಡ್ಯಾನ
ನಾರ್ಯಾರು ಹೊರುವಂತ ಐರಾಣಿ ॥

ಹೊತ್ತಾರೆದ್ದು ಕುಂಬಾರಣ್ಣ ತುಪ್ಪ ಬಾನುಂಡಾನ
ಗಟ್ಟೇಸಿ ಮಣ್ಣಾ ತುಳಿದಾನ
ಗಟ್ಟೇಸಿ ಮಣ್ಣಾ ತುಳಿಯುತ್ತ ಮಾಡ್ಯಾನ
ಮಿತ್ರೇರು ಹೊರುವಂತ ಐರಾಣಿ ॥

ಅಕ್ಕಿ ಹಿಟ್ಟು ನಾವು ತಕ್ಕೊಂಡು ತಂದೀವಿ
ಗಿಂಡೀಲಿ ತಂದೀವ್ನಿ ತಿಳಿದುಪ್ಪ
ಗಿಂಡೀಲಿ ತಂದೀವ್ನಿ ತಿಳಿದುಪ್ಪ ಕುಂಬಾರಣ್ಣ
ತಂದೀಡು ನಮ್ಮ ಐರಾಣಿ ॥

ಕುಂಬಾರಣ್ಣನ ಮಡದಿ ಕಡಗಾದ ಕೈಯಿಕ್ಕಿ
ಕೊಡದ ಮ್ಯಾಲೇನ ಬರೆದಾಳ
ಕೊಡದ ಮ್ಯಾಲೇನ ಬರೆದಾಳ ಕಲ್ಯಾಣದ
ಶರಣ ಬಸವನ ನಿಲಿಸ್ಯಾಳ ॥



**ಪ್ರಶ್ನೆಗಳು :**

1) ಕುಂಬಾರಣ್ಣ ಯಾವಾಗ ಏಳುತ್ತಾನೆ?

________________________________________________

2) ಮುಂಜಾನೆ ಏಳುವ ಕುಂಬಾರಣ್ಣ ಏನನ್ನು ಊಟ ಮಾಡುತ್ತಾನೆ?

________________________________________________

3) ಹೊತ್ತಾರೆ ಏಳುವವರು ಯಾರು?

________________________________________________

4) ಕುಂಬಾರಣ್ಣ ಮಣ್ಣನ್ನು ಹೇಗೆ ತುಳಿಯುತ್ತಾನೆ?

________________________________________________

5) ಕೊಡದ ಮೇಲೆ ಬರೆದವರು ಯಾರು?

________________________________________________

NOT TO BE R... @KTBS

**ಚಟುವಟಿಕೆ 2 :** ನೀಡಿರುವ ಕಥೆಯನ್ನು ಓದಿ, ಆಲಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಒಂದು ಊರಲ್ಲಿ ಒಬ್ಬ ರಾಜ ಇರುತ್ತಾನೆ. ಅವನು ರಾಜ್ಯವನ್ನು ತುಂಬಾ ಚೆನ್ನಾಗಿ ಆಳ್ವಿಕೆ ಮಾಡುತ್ತಾ ಇದ್ದನು. ಇದ್ದಕ್ಕಿದ್ದಂತೆ ಒಂದು ರಾತ್ರಿ ಮಲಗಿದ್ದಾಗ ತನ್ನ ಹಲ್ಲುಗಳೆಲ್ಲ ಉದುರಿಹೋದವು ಎಂಬ ಕನಸನ್ನು ಕಾಣುತ್ತಾನೆ. ಆ ಕನಸಿನ ಅರ್ಥವೇನಿರಬಹುದು ಎಂದು ತಿಳಿಯಲು ಜ್ಯೋತಿಷ್ಯರನ್ನು ಕರೆಯುತ್ತಾನೆ. ಆಗ ಜ್ಯೋತಿಷ್ಯ ರಾಜರೇ ಈ ಕನಸಿನ ಅರ್ಥವೇನು ಎಂದರೆ ನಿಮ್ಮ ಕುಟುಂಬದವರೆಲ್ಲರೂ ನಿಮ್ಮ ಕಣ್ಣ ಮುಂದೆಯೇ ಸಾಯುತ್ತಾರೆ ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ರಾಜನು ಕೋಪಗೊಂಡು ಅವನಿಗೆ ಶಿಕ್ಷೆ ನೀಡುತ್ತಾನೆ. ಈ ಸುದ್ದಿ ಊರೆಲ್ಲ ಹರಡುತ್ತದೆ. ಮತ್ತೆ ಮರುದಿನ ರಾಜನು ಇನ್ನೊಬ್ಬ ಜ್ಯೋತಿಷ್ಯರನ್ನು ಕರೆದು ಈ ಕನಸಿನ ಅರ್ಥವನ್ನು ಕೇಳುತ್ತಾನೆ. ಆಗ ಇನ್ನೊಬ್ಬ ಜ್ಯೋತಿಷ್ಯ ನೀವು ನಿಮ್ಮ ಕುಟುಂಬದಲ್ಲಿ ಇರುವವರಿಗಿಂತ ಹೆಚ್ಚು ದಿನ ಬದುಕುತ್ತೀರಿ ಎಂದು ಹೇಳುತ್ತಾನೆ. ಆಗ ರಾಜ ಸಂತೋಷಗೊಂಡು ಅವನಿಗೆ ಬಹುಮಾನ ನೀಡುತ್ತಾನೆ. ಇಲ್ಲಿ ನಾವು ಗಮನಿಸಬೇಕಾದ ವಿಷಯವೇನೆಂದರೆ ಇಬ್ಬರು ಜ್ಯೋತಿಷ್ಯರ ಮಾತಿನ ಅರ್ಥ ಒಂದೇ ಆದರೆ ಹೇಳುವ ರೀತಿ ಬೇರೆ ಅಷ್ಟೇ. ಹಾಗೆ ನಮ್ಮ ಮಾತು ಯಾರನ್ನಾದರೂ ಖುಷಿಪಡಿಸಬಹುದು ಅಥವಾ ದುಃಖ ಪಡುವಂತೆ ಮಾಡಬಹುದು. ಎರಡು ನಮ್ಮ ಮೇಲೆ ಅವಲಂಬಿತವಾಗಿರುತ್ತದೆ.

ಪ್ರಶ್ನೆಗಳು

1) ರಾಜನು ಯಾವ ರೀತಿ ಕನಸನ್ನು ಕಾಣುತ್ತಾನೆ?

_______________________________________________

2) ಜ್ಯೋತಿಷ್ಯನ ಯಾವ ಮಾತಿನಿಂದ ರಾಜನು ಕೋಪಗೊಂಡನು ?

_______________________________________________

3) ರಾಜನು ಇನ್ನೊಬ್ಬ ಜ್ಯೋತಿಷ್ಯನಿಗೆ ಬಹುಮಾನ ನೀಡಲು ಕಾರಣವೇನು ?

_______________________________________________

4) ಈ ಕಥೆಯಿಂದ ನಾವು ತಿಳಿಯಬಹುದಾದ ಮೌಲ್ಯವೇನು ?

_______________________________________________

5) ಈ ಕಥೆಗೊಂದು ಸುಲಭವಾದ ಶೀರ್ಷಿಕೆಯನ್ನು ನೀಡಿ.

_______________________________________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 16
## ಕಥನ ಕವನ

B9H8S4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಾಹಿತ್ಯದ ಒಂದು ಪ್ರಕಾರವಾದ ಕಥನ ಕವನದ ಬಗ್ಗೆ ತಿಳಿದು, ಪ್ರಶ್ನೆಗಳ ಪಟ್ಟಿ ತಯಾರಿಸಿ, ಉತ್ತರಿಸುವರು

**ಚಟುವಟಿಕೆ 1 :** ಕೊಟ್ಟಿರುವ ಕಥನ ಕವನವನ್ನು ಆಲಿಸಿರಿ..

ದಟ್ಟ ಕಾಡಿನಲೊಂದು ಹೆಮ್ಮರದ ಹೊದರಿನಲಿ
ಇರುತಿತ್ತು ಪುಟ್ಟ ಸಂಸಾರ ಹೂಡಿ
ಮುದ್ದು ಬಿಳಿ ಪಾರಿವಾಳಗಳ ಜೋಡಿ
ಹಗಲಿರುಳು ಜೊತೆಗೂಡಿ ಬಾಳಿದವು ಈ ಜೋಡಿ
ಎಂದಿಗೂ ಅಗಲಿರವು ಒಂದನೊಂದು
ಹಿಗ್ಗು ತುಂಬಿತು ಹೊದರಿನಲ್ಲಿ ಬಂದು
ಇಟ್ಟ ಮೊಟ್ಟೆಯನೊಡೆದು ಹಿಗ್ಗಿತಿವುಗಳ ಪ್ರೀತಿ
ಮುದ್ದುಮರಿಗಳ ಮಧುರ ಸದ್ದು ಕೇಳಿ
ದಿನ ಕಳೆದವಾನಂದದಿಂದ ಬಾಳಿ
ಬೇಡನೊಬ್ಬನು ಬಂದು ಬಲೆಯ ಹರಡಿದನೊಮ್ಮೆ
ಪುಟ್ಟಮರಿಗಳು ಹಾರಿ ಸಿಲುಕಿ ಸೆರೆಗೆ
ಚೀತ್ಕರಿಸ ತೊಡಗಿದವು ಬರಲು ಹೊರಗೆ
ಕಂಡು ಪಾರಿವಾಳಗಳ ಪಾಡು ತಾಯಿ ಧುಮುಕಿತು ಬಲೆಗೆ
ಹೆಂಡತಿಯನಗಲಿರದ ಗಂಡು ಹಕ್ಕಿ
ಒಳಗೆ ಬಂದಿತು ಬಳಿಗೆ ಬಿಕ್ಕಿಬಿಕ್ಕಿ
ಕುರುಡು ವಾತ್ಸಲ್ಯದಲಿ ಕಳೆದುಕೊಂಡು ವಿವೇಕ
ಬಲೆಗೆ ನುಗ್ಗಿದ ಪಾರಿವಾಳ ಹಿಂಡು
ಹಸಿದ ಬೇಡನು ನಡೆದ ಹೊತ್ತುಕೊಂಡು
ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರು ಕೂಡ ತಾಳಬೇಕು

@KTBS NOT TO BE REPUBLISHED

**ಚಟುವಟಿಕೆ 2 :** ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.

1) ಮುದ್ದು ಬಿಳಿ ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?______________________________

______________________________________________

2) ಬಲೆಯನ್ನು ಹರಡಿದವನು ಯಾರು ? ______________________________

3) ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ? ______________________________

4) ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು ? ______________________________

5) ಏನನ್ನು ತೊರೆದು ಬಾಳಬೇಕು?______________________________

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 17
# ಗಾದೆಮಾತು

Z6Z7M7
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಬರೆಹಗಳಲ್ಲಿ ಔಚಿತ್ಯಪೂರ್ಣ ನೀತಿ, ಗಾದೆ, ಪದಪುಂಜ ಹಾಗೂ ಇತರ ವ್ಯಾಕರಣಾಂಶಗಳನ್ನು ಬಳಸಿ ಬರೆಯುವರು.

**ಚಟುವಟಿಕೆ 1 :** ಮಾದರಿಯಂತೆ ಈ ಕೆಳಗಿನ ಗಾದೆಗಳನ್ನು ಪೂರ್ಣ ಗೊಳಿಸಿ.

**ಉದಾ :** ಉಪ್ಪಿಗಿಂತ ರುಚಿಯಿಲ್ಲ : (ತಾಯಿಗಿಂತ ಬಂಧುವಿಲ್ಲ)

1) ಹಾಸಿಗೆ ಇದ್ದಷ್ಟು : ______________________

2) ಮಾತು ಬಲ್ಲವನಿಗೆ ಜಗಳವಿಲ್ಲ : ______________________

3) ಅಲ್ಪನಿಗೆ ಐಶ್ವರ್ಯ ಬಂದರೆ : ______________________

4) ಅಲ್ಪರ ಸಂಗ : ______________________

5) ಅವರು ಚಾಪೆ ಕೆಳಗೆ ತೂರಿದರೆ ನೀನು : ______________________

6) ಅಹಂಕಾರಕ್ಕೆ ಉದಾಸೀನವೇ: ______________________

7) ಅಳಿಯ ಅಲ್ಲ: ______________________

8) ಅಡ್ಡಗೋಡೆ ಮೇಲೆ: ______________________

9) ಅಕ್ಕಿ ಮೇಲೆ ಆಸೆ: ______________________

10) ಅತ್ತೆಗೊಂದು ಕಾಲ: ______________________

**ಚಟುವಟಿಕೆ 2 :** ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಗಾದೆಗಳನ್ನು ಪೂರ್ಣಗೊಳಿಸಿ.

| | |
|---|---|
|   | |
|  | |
|  | |
|   | |

@KTBS NOT TO BE REPUBLISHED

**ಚಟುವಟಿಕೆ 3 :** ಹತ್ತು ಗಾದೆಗಳನ್ನು ಸಂಗ್ರಹಿಸಿ ಬರೆಯಿರಿ.

01) ______________________________

02) ______________________________

03) ______________________________

04) ______________________________

05) ______________________________

06) ______________________________

07) ______________________________

08) ______________________________

09) ______________________________

10) ______________________________

@KTBS NOT TO BE REPUBLISHED

**ಚಟುವಟಿಕೆ 4 :** ಅದಲು ಬದಲಾದ ಗಾದೆ ಮಾತುಗಳನ್ನು ಮಾದರಿಯಂತೆ ಜೋಡಿಸಿ ಬರೆಯಿರಿ.

**ಮಾದರಿ**–ಬಂಧುವಿಲ್ಲ/ರುಚಿಯಿಲ್ಲ/ತಾಯಿಗಿಂತ/ಉಪ್ಪಿಗಿಂತ
ಉಪ್ಪಿಗಿಂತ ರುಚಿಯಿಲ್ಲ: ತಾಯಿಗಿಂತ ಬಂಧುವಿಲ್ಲ

ದುಡ್ಡು / ಯಾರದ್ದೋ/ ಜಾತ್ರೆ / ಯಲ್ಲಮ್ಮನ

______________________________

ವೇಂಕಟರಮಣ / ಬಂದಾಗ / ಸಂಕಟ

______________________________

ಬಿದ್ದಂತೆ / ಹಗಲು / ಬಾವಿಗೆ / ಇರುಳು / ಕಂಡ

______________________________

ಮಾಡಿ / ನೋಡು / ಮದುವೆ / ನೋಡು / ಕಟ್ಟಿ / ಮನೆ

______________________________

ಪ್ರೀತಿ / ಮೇಲೆ / ನೆಂಟರ / ಮೇಲೆ / ಆಸೆ / ಅಕ್ಕಿಯ

______________________________

**ಚಟುವಟಿಕೆ 5 :** ಕೊಟ್ಟಿರುವ ಗಾದೆಗಳನ್ನು ವಿಸ್ತರಿಸಿ ಬರೆಯಿರಿ.

1. ತುಂಬಿದ ಕೊಡ ತುಳುಕುವುದಿಲ್ಲ:

2. ದೂರದ ಬೆಟ್ಟ ನುಣ್ಣಗೆ:

3. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ;

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 18
## ಪದ್ಯ ಪ್ರಕಾರ – ಜನಪದ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗುರುತಿಸುತ್ತಾ, ಜನಪದ ಗೀತೆಗಳನ್ನು ಹಾಡಿ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವರು.

**ಚಟುವಟಿಕೆ 01 :** ಕೊಟ್ಟಿರುವ ಪದ್ಯ ಓದಿ ಅರ್ಥೈಸಿಕೊಂಡು ಸಾಹಿತ್ಯದ ಪ್ರಕಾರ ಗುರುತಿಸಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿ ಹುಬ್ಬು ಬೇವಿನೆಸಳ್ಹಂಗ ।
ಕಣ್ಣೋಟ ಶಿವನ ಕೈಯಲಗು ಹೊಳೆದ್ಹಾಂಗ॥

1. ಈ ಪದ್ಯಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

---

2. ಅಳುವ ಕಂದನ ತುಟಿಯನ್ನು ಯಾವುದಕ್ಕೆ ಹೋಲಿಸಲಾಗಿದೆ ?

---

3. ಮಗುವಿನ ಕುಡಿ ಹುಬ್ಬನ್ನು ಯಾವುದಕ್ಕೆ ಹೋಲಿಸಲಾಗಿದೆ?

---

4. ಮಗುವಿನ ಕಣ್ಣೋಟವನ್ನು ಯಾವುದಕ್ಕೆ ಹೋಲಿಸಲಾಗಿದೆ?

---

**ಚಟುವಟಿಕೆ 2 :** ಲಾವಣಿಗಳನ್ನು ತಿಳಿಯೋಣ – ಕೊಟ್ಟಿರುವ ಲಾವಣಿಯನ್ನು ಓದಿ ಅರ್ಥೈಸಿಕೊಂಡು, ಪ್ರಶ್ನೆಗಳಿಗೆ ಉತ್ತರಿಸಿ.

ಏ ಸಿಂಹದಂಥಾ ಸಂಗೊಳ್ಳಿ ರಾಯ
ಭೂಮಿಗೆ ಬಿದ್ದಂಗ ಸೂರ್ಯನ ಛಾಯಾ
ನೆತ್ತರ ಕಾವಲಿ ಹರಿಸಿದಾನೊ ಕಿತ್ತೂರ ನಾಡಾಗ
ಭಾಳಬಂಟಸ್ತಾನ ಪದವಿ ಇತ್ತ ಅವನ ಹೊಟ್ಟೆಯೊಳಗ
ಸೃಷ್ಟಿಯೊಳಗ ಹುಟ್ಟಿಬಂದ ಶ್ರೇಷ್ಠನಾಗಿ ಹೋಗಿದಾನ
ದುಷ್ಟ ರಾವಣಾಸುರನ ಲಂಕಾ ಸುಟ್ಟಾಂಗ
ಹಿಂಗ ಸಂಪಗಾಂವಿ, ಬೀಡಿ ಕಚೇರಿ ಸುಟ್ಟಾನ ಕಲಕಿದೊಳಗ

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಇವು ಏಕ ಘಟನೆಯನ್ನು ಆಧರಿಸಿ ಕಥನಾತ್ಮಕವಾಗಿ ಕಟ್ಟಿರುವ ಗೀತೆಗಳಾಗಿದ್ದು, ವೀರತನ ಮತ್ತು ಸಾಹಸವನ್ನು ವರ್ಣಿಸುವುದರಿಂದ ಇವುಗಳನ್ನು "ವೀರಗೀತೆಗಳು" ಎಂದು ಕರೆಯುವುದು ವಾಡಿಕೆ.

1. ಲಾವಣಿಗಳನ್ನು 'ವೀರಗೀತೆಗಳು' ಎಂದು ಏಕೆ ಕರೆಯುತ್ತಾರೆ ?

---

---

2. ಸಂಗೊಳ್ಳಿರಾಯಣ್ಣನನ್ನು ಲಾವಣಿಕಾರ ಯಾರಿಗೆ ಹೋಲಿಸಿದ್ದಾನೆ?

---

---

NOT TO BE REPUBLISHED @KTBS

**ಚಟುವಟಿಕೆ 3 :** ಕೊಟ್ಟಿರುವ ಪದ್ಯವನ್ನು ಓದಿ ಅರ್ಥೈಸಿಕೊಂಡು, ಪ್ರಶ್ನೆಗಳಿಗೆ ಉತ್ತರಿಸಿ.

ಕಾವೇರಿಯಿಂದ ಮಾ ಗೋ
ದಾದರಿವರಮಿರ್ದ ನಾಡದ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ

1. ಈ ಪದ್ಯಭಾಗದಲ್ಲಿರುವಂತೆ ಉಲ್ಲೇಖವಾಗಿರುವ ನದಿಗಳ ಹೆಸರುಗಳನ್ನು ಬರೆಯಿರಿ.

______________________________________________

______________________________________________

______________________________________________

______________________________________________

______________________________________________

______________________________________________

2. ಕೊಟ್ಟಿರುವ ಪದಗಳ ಅರ್ಥವನ್ನು ಬರೆಯಿರಿ.

ಜನಪದಂ = ______________________

ವಸುಧಾ = ______________________

ವಿಶದ = ______________________

3. ಈ ಪದ್ಯಭಾಗದಲ್ಲಿರುವಂತೆ ಕನ್ನಡ ನಾಡಿನ ವಿಸ್ತಾರವನ್ನು ತಿಳಿಸಿ.

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

NOT TO BE REPUBLISHED @KTBS

**ಚಟುವಟಿಕೆ 4 :** ನಡುಗನ್ನಡ ಕಾಲದ ಪ್ರಮುಖ ಕವಿಗಳು ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ ಮುಂತಾದವರ ಬಗ್ಗೆ ತಿಳಿಯಿರಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01. ನಡುಗನ್ನಡ ಕಾಲದ ಇಬ್ಬರು ಪ್ರಮುಖ ಕವಿಗಳನ್ನು ಹೆಸರಿಸಿ.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ವ ವಿಚಾರ ಮಂತ್ರಿಜನಕ್ಕೆ ಬುದ್ಧಿ ಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣಿತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ

______________________________

______________________________

______________________________

______________________________

02. ರಾಘವಾಂಕನು ರಚಿಸಿದ ಪ್ರಮುಖ ಕಾವ್ಯದ ಬಗ್ಗೆ ಶಿಕ್ಷಕರಿಂದ ಕೇಳಿ ಬರೆಯಿರಿ.

______________________________

______________________________

______________________________

______________________________

______________________________

______________________________

______________________________

______________________________

______________________________

______________________________

______________________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 19

# ವಚನಗಳನ್ನು ಓದೋಣ

F2R9I2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸಾಹಿತ್ಯದ ಪ್ರಕಾರಗಳಾದ ವಚನಗಳು ಹಾಗೂ ಕೀರ್ತನೆಗಳನ್ನು ಪರಿಚಯಿಸಿಕೊಂಡು ಅವುಗಳ ಸಾರಾಂಶ ಬರೆಯುವರು.

**ಚಟುವಟಿಕೆ 1 :** ವಚನವನ್ನು ಓದಿ ಮಾತಿನ ಮಹತ್ವ ತಿಳಿದು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮ ದೇವನೆಂತನೊಲಿವನಯ್ಯಾ?
– ಬಸವಣ್ಣ

**ಪ್ರಮುಖ ವಚನಕಾರರು:**

ದೇವರ ದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಮುಕ್ತಾಯಕ್ಕ ಚನ್ನಬಸವಣ್ಣ, ಮೊದಲಾದವರು.

01. ಮಹಿಳಾ ವಚನಕಾರರ ಹೆಸರು ಬರೆಯಿರಿ?

______________________________

______________________________

______________________________

02. ಬಸವಣ್ಣನವರು ನಮ್ಮ ನುಡಿ ಹೇಗಿರಬೇಕೆಂದು ಹೇಳುತ್ತಾರೆ?

______________________________

______________________________

______________________________

______________________________

03. ಕೂಡಲ ಸಂಗಮದೇವ ಯಾರಿಗೆ ಒಲಿಯುವುದಿಲ್ಲ?

______________________________

______________________________

______________________________

______________________________

@KTBS NOT TO BE REPUBLISHED

**ಚಟುವಟಿಕೆ 2** : ಕೀರ್ತನೆಗಳು ಮತ್ತು ಕೀರ್ತನಕಾರರ ಬಗೆಗೆ ತಿಳಿಯೋಣ.

**ಪ್ರಮುಖ ಕೀರ್ತನಕಾರರು :**
ವ್ಯಾಸರಾಯರು,
ಶ್ರೀಪಾದರಾಜರು,
ಪುರಂದರದಾಸರು,

ತಲ್ಲಣಿಸದಿರು ಕಂಡ್ಯಾ ತಾಳು ಮನವೆ
ಎಲ್ಲರನು ಸಲುಹುವನು ಇದಕೆ ಸಂಶಯವಿಲ್ಲ
ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದ ಮೇಲೆ
ಘಟ್ಟಿಯಾಗಿ ಸಲಹುವನು ಇದಕೆ ಸಂಶಯ

***

ಬೇಡಬೇವುಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದರೇನು ಫಲ?
ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನವ ಮಾಡಿದರೇನು ಫಲ?
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ?

**ಚಟುವಟಿಕೆ 3** : ನಿಮಗೆ ತಿಳಿದಿರುವ ಯಾವುದಾದರೂ ಎರಡು ಕೀರ್ತನೆಗಳನ್ನು ಸಂಗ್ರಹಿಸಿ ಬರೆಯಿರಿ.

@KTBS NOT TO BE REPUBLISHED

**ಚಟುವಟಿಕೆ 4 :** ಕೊಟ್ಟಿರುವ ಪದ್ಯಭಾಗವನ್ನು ಓದಿ/ಹಾಡಿ, ಪ್ರಶ್ನೆಗಳಿಗೆ ಉತ್ತರಿಸಿರಿ.

**ಭಾವಗೀತೆ** – ಕೆ.ಎಸ್.ನರಸಿಂಹಸ್ವಾಮಿ – ಲಾಲಿಹಾಡು

ಅತ್ತಿತ್ತ ನೋಡದಿರು, ಅತ್ತು ಹೊರಳಾಡದಿರು
ನಿದ್ದೆ ಬರುವಳು ಹೊದ್ದು ಮಲಗು ಮಗುವೆ
ಜೋ ಜೋ ಜೋ ಜೋ ಜೋ ಜೋ ಜೋ ॥
ಸುತ್ತಿ ಹೊರಳಾಡಿದರು, ಮತ್ತೆ ಹಠ ಮಾಡದಿರು
ನಿದ್ದೆ ಬರುವಳು ಹೊದ್ದು ಮಲಗು ಮಗುವೆ

ಜೋ ಜೋ ಜೋ ಜೋ ಜೋ ಜೋ ಜೋ ॥
ಮಲಗು ಚೆಲ್ವಿನ ತೆರೆಯೆ, ಮಲಗು ಒಲ್ಮೆಯ ಸೆರೆಯೇ
ಮಲಗು ತೊಟ್ಟಿಲ ಸಿರಿಯೇ, ದೇವರಂತೆ ।
ಮಲಗು ಮುದ್ದಿನ ಗಿಣಿಯೆ, ಮಲಗು ಮುತ್ತಿನ ಮಣಿಯೆ
ಮಲಗು ಚಂದಿರ ನೂರ ಹೋಗುವೆಯಂತೆ ॥

1. ನಿಮಗೆ ತಿಳಿದಿರುವ ಯಾವುದಾದರೂ ಒಂದು ಭಾವಗೀತೆಯನ್ನು ಬರೆಯಿರಿ.

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 20
# ನುಡಿಗಟ್ಟು

Q1F6L8
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿ ಬಳಸಿಕೊಂಡು ಮಾತನ್ನು ಕಲಾತ್ಮಕಗೊಳಿಸುವರು.

**ಚಟುವಟಿಕೆ 1 :** ಕೊಟ್ಟಿರುವ ನುಡಿಗಟ್ಟುಗಳ ಅರ್ಥ ಬರೆಯಿರಿ.

ಅಜಗಜಾಂತರ : ____________________

ಉಭಯಸಂಕಟ : ____________________

ಅಳಿಲುಸೇವೆ : ____________________

ಆಕಾಶಕ್ಕೆಏಣಿಹಾಕು : ____________________

ಎದೆಗಟ್ಟಿಮಾಡಿಕೊಳ್ಳು : ____________________

ಕಟ್ಟಿಟ್ಟಬುತ್ತಿ : ____________________

ರಾಮಬಾಣ : ____________________

ಆಕಾಶಕ್ಕೆಹಾರು : ____________________

ಮೂಗುತೂರಿಸು : ____________________

ಕೈಕೊಡು : ____________________

@KTBS
NOT TO BE REPUBLISHED

**ಚಟುವಟಿಕೆ 2 :** ಮಾದರಿಯಂತೆ ನುಡಿಗಟ್ಟು ಬಳಸಿ ವಾಕ್ಯ ರಚಿಸಿ.

ಡಂಗೂರಸಾರು ಉದಾ : ಮನೆಯ ವಿಚಾರವನ್ನು ಊರು ತುಂಬಾ ಡಂಗೂರ ಸಾರಬಾರದು..

ಕಣ್ಣಿಡು : ____________________

ಒಗ್ಗರಣೆ ಹಾಕು : ____________________

ಅಳಿಲು ಸೇವೆ: ____________________

ಮೂಗು ತೂರಿಸು : ____________________

ಕಾಲಿಗೆ ಬುದ್ಧಿಹೇಳು : ____________________

ಹಿತ್ತಾಳೆ ಕಿವಿ : ____________________

ತಲೆದೂಗು : ____________________

ಆಕಾಶಕ್ಕೆ ಹಾರು : ____________________

ಕೈಕೊಡು : ____________________

**ಚಟುವಟಿಕೆ 3 :** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ನುಡಿಗಟ್ಟುಗಳನ್ನು ಗುರುತಿಸಿ, ಅರ್ಥ ಬರೆಯಿರಿ.

ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಗಳಿಸಬೇಕಾದರೆ ಉತ್ತಮವಾದ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಅವುಗಳು ವಿದ್ಯಾರ್ಜನೆಗೆ ದಾರಿ ದೀಪಗಳಾಗುತ್ತವೆ. ಅದೆಷ್ಟೇ ಅನ್ಯವಿಚಾರಗಳು ಮನದಲ್ಲಿ ಮೂಡಿದರೂ ಅವುಗಳಿಗೆ ಸೊಪ್ಪು ಹಾಕದೆ ನಿರ್ದಿಷ್ಟ ಗುರಿಯೆಡೆಗೆ ಸಾಗಬೇಕು. ಆಗ ಮಾತ್ರ ಗುರಿ ಸಾಧಿಸಿ ದಡ ಮುಟ್ಟಲು ಸಾಧ್ಯವಾಗುತ್ತದೆ. ಗುರು ಹಿರಿಯರ ಮಾತಿಗೆ ಬೆಲೆ ಕೊಟ್ಟು ಅವರು ತೋರಿದ ದಾರಿಯಲ್ಲಿ ನಡೆದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಸಾಧನೆಯ ಪಥದಲ್ಲಿ ಸಾಗುವಾಗ ಹಲವಾರು ಎಡರು ತೊಡರುಗಳು ಬಂದು ನಮ್ಮನ್ನು ದಾರಿತಪ್ಪಿಸಲು ಯತ್ನಿಸುತ್ತವೆ. ಆದರೆ ನಾವು ಅವುಗಳನ್ನು ಮಟ್ಟಹಾಕಿ ಅವುಗಳ ಕಪಿಮುಷ್ಟಿಗೆ ಸಿಲುಕದೆ ಮುನ್ನುಗ್ಗಬೇಕು. ಸ್ವಾಮಿ ಜಗದಾತ್ಮಾನಂದರು ಹೇಳುವಂತೆ "ಪ್ರತಿನಿತ್ಯ ನಿಗದಿಪಡಿಸಿಕೊಂಡ ಕೆಲಸ ಕಾರ್ಯಗಳನ್ನು ಚಾಚು ತಪ್ಪದೆ ಮಾಡುವುದರಿಂದ ನಮ್ಮ ಗುರಿಯನ್ನು ನಿಖರವಾಗಿ ಮುಟ್ಟಬಹುದು". ಇಲ್ಲವಾದರೆ ನಮ್ಮ ಕಾರ್ಯಗಳೆಲ್ಲವೂ ಹಳ್ಳ ಹಿಡಿದು ವಿದ್ಯಾರ್ಥಿ ಜೀವನ ವ್ಯರ್ಥವಾಗಿ ಜೀವನದಲ್ಲಿ ತಲೆ ಎತ್ತಿ ನಿಲ್ಲುವುದು ಕಷ್ಟವಾಗುತ್ತದೆ.

| ನುಡಿಗಟ್ಟು | ನುಡಿಗಟ್ಟಿನ ಅರ್ಥ |
|---|---|
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 21
## ಲೇಖನ ಓದಿ ಉತ್ತರಿಸುವುದು

L7H5E9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ : ಲೇಖನ, ಗದ್ಯ, ಕಥೆ ಮುಂತಾದವುಗಳನ್ನು ಓದಿ, ಅವುಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವರು.

**ಚಟುವಟಿಕೆ 1 :** ಕೊಟ್ಟಿರುವ ಕಥೆಯನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಶ್ರೀರಾಮನು ಭಗ್ನವಾದ ಶಿವಧನಸ್ಸನ್ನು ಭೂಮಿಯ ಮೇಲಿಟ್ಟು ಏನು ಅನಿಸುತ್ತಿದೆ'? ಎಂದು ಶಿವಧನಸ್ಸನ್ನು ಕೇಳುತ್ತಾನೆ. ಆಗ ಶಿವಧನಸ್ಸು "ಅಪಾರ ಆನಂದವಾಗುತ್ತಿದೆ ನನ್ನನ್ನು ಯಾವುದೇ ರಾಕ್ಷಸ ಎತ್ತಿದ್ದರೆ ಜನ್ಮ ಪೂರ್ತಿ ಧನಸ್ಸು ಬಾಣದ ಬಂಧನದಲ್ಲಿ ಸಿಲುಕಿರುತ್ತಿದ್ದೆ. ನೀನು ನನ್ನನ್ನು ಮುಕ್ತಗೊಳಿಸಿದೆ" ಎಂದು ಹೇಳಿತು. ಶಿವಧನಸ್ಸನ್ನು ರಾಮ ಮುರಿದು ಭೂಮಿಯ ಮೇಲಿಟ್ಟರು ಶಿವಧನಸ್ಸಿಗೆ ಸ್ವಲ್ಪವೂ ನೋವಾಗಲಿಲ್ಲ. ಬದಲಾಗಿ 'ನಾನು ಶ್ರೀರಾಮನ ಕಾಲುಗಳ ಬಳಿಯೇ ಇದ್ದೇನೆ. ಶ್ರೀರಾಮನ ಪಾದ ಸೇವೆ ಮಾಡುವ ಅವಕಾಶ ಲಭಿಸಿತು ಎಂದು ಹರ್ಷಪಟ್ಟಿತು. ಆಗ ಶ್ರೀರಾಮನು 'ನೀನು ಎರಡು ತುಂಡಾದೆಯಲ್ಲವೆ? ಎಂದಾಗ ಶಿವಧನಸ್ಸು 'ಶ್ರೀರಾಮನು ನನ್ನ ಅಹಂಕಾರವನ್ನು ಮುರಿದಿದ್ದಾನೆ. ನಾನು ಎರಡು ತುಂಡಾದೆ ನಿಜ. ಆದರೆ ಆ ಎರಡು ತುಂಡುಗಳಿಂದ ಎರಡು ಜೀವಗಳ ಮಿಲನವಾಯಿತು' ಎಂದು ಶಿವಧನಸ್ಸು ಹೇಳಿದಾಗ ಶ್ರೀರಾಮನು ಮೆಚ್ಚುಗೆಯ ನೋಟ ಬೀರಿದನು.

ಪ್ರಶ್ನೆಗಳು :

1) ಶಿವಧನಸ್ಸನ್ನು ಮುರಿದವರು ಯಾರು?

______________________________

______________________________

2) ಶಿವಧನಸ್ಸಿಗೆ ದೊರೆತ ಅವಕಾಶ ಯಾವುದು?

______________________________

______________________________

3) ಶಿವಧನಸ್ಸಿನ ಅಹಂಕಾರ ಹೇಗೆ ಮುರಿಯಿತು?

______________________________

______________________________

4) ಶ್ರೀರಾಮನು ಶಿವಧನಸ್ಸಿನ ಕಡೆ ಮೆಚ್ಚುಗೆಯ ನೋಟ ಬೀರಲು ಕಾರಣವೇನು?

______________________________

______________________________

5) ಈ ಕಥೆಯಲ್ಲಿ ನೀವು ಮೆಚ್ಚುವ ಪಾತ್ರ ಯಾವುದು?

______________________________

______________________________

@KTBS NOT TO BE REPUBLISHED

**ಚಟುವಟಿಕೆ 2 :** ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿ.

ನಾ ಮುಂದೆ ನೀ ಮುಂದೆ ಎಂದು ತಲಕಾಡಿನ ಕಡೆಗೆ ಪ್ರವಾಸಿಗರನ್ನು ಹೊತ್ತು ಕೊಂಡೊಯ್ಯುತ್ತಿದ್ದ ಎರಡು ಮೋಟಾರುಗಳು ಓಡುತ್ತಿರುವಾಗ ನನ್ನ ಕಣ್ ಮುಂದೆ ತಲಕಾಡಿನ ನೆಲದ ಮೇಲೆ ವೈಭವದಿಂದ ರಾಜ್ಯವಾಳಿದವರ ಕಥೆ ಹಕ್ಕಿಯಂತೆ ಚಲಿಸಿ ಪಾತರಗಿತ್ತಿಯಂತೆ ಕುಣಿದು ಮೃಗಜಲದಂತೆ ಮಾಯವಾಯಿತು. ಇದು ಕೀರ್ತಿನಾರಾಯಣನ ದೇಗುಲ. ಕ್ರಿಸ್ತಶಕಾಬ್ದ 1117ನೆಯ ವರ್ಷದಲ್ಲಿ ವಿಷ್ಣುವರ್ಧನದೇವ ತಲಕಾಡಿನ ವಿಜಯದ ನಿಮಿತ್ತ ವೀರನಾರಾಯಣನ ಹೆಸರಿನಲ್ಲಿ ಗುಡಿಕಟ್ಟಿಸಿದನು. ಕೀರ್ತಿನಾರಾಯಣ ದೇವಾಲಯದ ಆಚೆಗೆ 150 ಗಜದ ಅಂತರದಲ್ಲಿ ವೈದ್ಯೇಶ್ವರ ದೇವಾಲಯ! ಈ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು. ದೇವಾಲಯದ ಹೊರವಲಯದಲ್ಲಿ ಇರುವ ಕಳಶಗಳೂ ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ದೇಶಿಸುವವು. ಇವು ಶೃಂಗೇರಿಯ ವಿದ್ಯಾಶಂಕರ ದೇಗುಲ, ಹಂಪೆಯ ಹಜಾರರಾಮರ ಗುಡಿ, ತಾಡಪತ್ರಿಯ ಲೇಪಾಕ್ಷಿಮಂದಿರ, ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿಹೊಂದುವ ಕಟ್ಟಡಗಳಾಗಿವೆ. ಸಂಜೆ ಧಾವಿಸಿ ಬರುತ್ತಲಿದ್ದಿತು. ಕಪ್ಪು ಪರದೆ ಇಳೆಯ ಮೇಲೆ ರಭಸದಿಂದ ಇಳಿಯುತ್ತಲಿದ್ದಿತು. ನಾವಾಗ ಪಾತಾಳೇಶ್ವರನ ಗುಡಿಯಿಂದ ಮರಳೇಶ್ವರ ದೇಗುಲದೆಡೆಗೆ, ಮರಳೇಶ್ವರನಿಂದ ಗೋಕರ್ಣೇಶ್ವರ ಅಲ್ಲಿಂದ ವೀರಭದ್ರನೆಡೆಗೆ ಮರಳಿನಲ್ಲಿ ಸಿಕ್ಕಿ ಬೀಳುತ್ತಿದ್ದ ಕಾಲುಗಳನ್ನು ಕಸುವಿನಿಂದ ಕೀಳುತ್ತ ಮುಂದಕ್ಕೆ ಬಾಗಿ ಉದ್ವೇಗ ಅನುತಾಪಗಳನ್ನು ಬೆಂದ ಹೃದಯದಲ್ಲಿರಿಸಿ ಕೊಂಡು ನಾಗಾಲೋಟಕ್ಕೆ ತೊಡಗಿದ್ದೆವು.

ಪ್ರಶ್ನೆಗಳು–

1) ತಲಕಾಡಿನ ವಿಜಯದ ನಿಮಿತ್ತ ಯಾವ ದೇವರ ಹೆಸರಿನಲ್ಲಿ ಗುಡಿಯನ್ನು ಕಟ್ಟಿಸಿದರು ?

2) ಕೀರ್ತಿನಾರಾಯಣ ದೇವಾಲಯದ ಆಚೆಗೆ ಎಷ್ಟು ದೂರದಲ್ಲಿ ವೈದ್ಯೇಶ್ವರ ದೇವಾಲಯ ಇದೆ ?

3) ವೈದ್ಯೇಶ್ವರ ದೇವಾಲಯ ಎಲ್ಲಿದೆ ?

4) ಸಂಜೆ ಧಾವಿಸಿ ಬರುತ್ತಿರುವಾಗ ಇಳೆಯ ಮೇಲೆ ರಭಸದಿಂದ ಏನು ಇಳಿಯುತ್ತಲಿತ್ತು ?

5) ಈ ಮೇಲಿನ ಗದ್ಯಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 22

# ಕಥೆ – ಕವಿತೆ ಓದಿ ಉತ್ತರಿಸೋಣ

X8M5L4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ಕಥೆ ಮತ್ತು ಕವಿತೆಗಳ ವ್ಯತ್ಯಾಸಗಳನ್ನು ಗ್ರಹಿಸುವರು. ಕವಿತೆಗಳ ಭಾವಾರ್ಥವನ್ನು ಅರ್ಥಮಾಡಿಕೊಳ್ಳುವರು.

**ಚಟುವಟಿಕೆ 1 :** ಕೊಟ್ಟಿರುವ ಜನಪದ ಕಥೆಯನ್ನು ಓದಿ ಗ್ರಹಿಸಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿ.

ಕಥೆ: ಒಂದು ಊರಿನಲ್ಲಿ ಸಂಪತ್ತು ಎನ್ನುವ ಹುಡುಗ ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಯಾರ ಹಿತವಚನಕ್ಕೂ ಜಗ್ಗುತ್ತಿರಲಿಲ್ಲ. 'ಓದು' ಎಂದರೆ ಓದುತ್ತಿರಲಿಲ್ಲ. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಅಪ್ಪನ ಅಂಗಿಯ ಜೇಬಿನಿಂದ ಹಣ ಕದಿಯುತ್ತಿದ್ದನು. ಅಂಗಡಿಯಿಂದ ಬಗೆಬಗೆಯ ತಿಂಡಿತಿನಿಸು ಕೊಂಡು ತಿನ್ನುತ್ತಿದ್ದನು. ಅಂಗಡಿಯಿಂದ ಆಟಿಕೆಗಳನ್ನು ಕದಿಯುತ್ತಿದ್ದನು. ಸಂಪತ್ತುವಿನ ಅಜ್ಜಿ, ಅಮ್ಮ, ಅಪ್ಪ – ಹೀಗೇ ಎಲ್ಲರೂ ಅವನಿಗೆ ಬುದ್ಧಿ ಹೇಳಿದರು. ಏಟೂ ಕೊಟ್ಟರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಅವನು ಕದಿಯುವುದನ್ನು ನಿಲ್ಲಿಸಲಿಲ್ಲ. ಹಲವಾರು ವರ್ಷಗಳು ಕಳೆದವು. ಸಂಪತ್ತು ಈಗ ಯುವಕನಾಗಿದ್ದನು. ಅವನು ವಿದ್ಯೆ ಕಲಿತಿರಲಿಲ್ಲ. ಹಾಗಾಗಿ ಅವನಿಗೆ ಒಳ್ಳೆಯ ಉದ್ಯೋಗವೂ ಸಿಕ್ಕಿರಲಿಲ್ಲ. ಊರೆಲ್ಲ ಅಲೆಯುತ್ತಿದ್ದನು, ಹಣ ಬೇಕಾದಾಗ ಕಳ್ಳತನ ಮಾಡುತ್ತಿದ್ದನು.

ಒಂದು ದಿನ, ಹೀಗೆ ಕಳ್ಳತನ ಮಾಡುವಾಗ ಪೊಲೀಸರ ಕೈಗೆ ಸಿಕ್ಕಿ ಬಿದ್ದನು. ಸಂಪತ್ತುವಿನ ತಂದೆ–ತಾಯಿ ಆ ವೇಳೆಗೆ ವೃದ್ಧರಾಗಿದ್ದರು. "ಅಯ್ಯೋ, ನಮ್ಮ ಮಗನನ್ನು ಪೊಲೀಸರು ಹಿಡಿದುಕೊಂಡು ಹೋದರಂತೆ" ಎಂದು ಸಂಪತ್ತುವಿನ ಅಮ್ಮ ಗೋಳಿಟ್ಟಳು. "ನಾವು ಏನು ತಾನೇ ಮಾಡಲು ಸಾಧ್ಯ? ನಮಗಂತೂ ಅವನನ್ನು ಬಾಲ್ಯದಲ್ಲಿಯೇ ತಿದ್ದಲು ಸಾಧ್ಯವಾಗಲಿಲ್ಲ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಇಷ್ಟು ದೊಡ್ಡವನಾದ ಮೇಲೆ ನಾವು ಅವನನ್ನು ತಿದ್ದಲು ಸಾಧ್ಯವೇ?" ಎಂದು ತಂದೆ ಹೇಳಿದರು. ಛೇ! ಮಗ ಹೀಗಾದನಲ್ಲಾ ಎಂದು ತಾಯಿ ದುಃಖಪಟ್ಟಳು.

1. ಸಂಪತ್ತು ಹಣವನ್ನು ಕದ್ದು ಏನು ಮಾಡುತ್ತಿದ್ದನು ?

______________________________

______________________________

______________________________

______________________________

2. ಸಂಪತ್ತಿನ ಅಮ್ಮ ಏಕೆ ಗೋಳಿಟ್ಟಳು ?

______________________________

______________________________

______________________________

______________________________

3. ಈ ಕಥೆಗೆ ಅನ್ವಯಿಸುವ ಗಾದೆ ಯಾವುದು ?

______________________________

______________________________

______________________________

______________________________

@KTBS NOT TO BE REPUBLISHED

**ಚಟುವಟಿಕೆ 2 :** ಕವಿತೆಯನ್ನು ಅರ್ಥೈಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ
ಹಸುವಿನ ಕೊರಳಿನ ಗೆಜ್ಜೆಯ ದನಿಯು ನಾನಾಗುವ ಆಸೆ
ಹಬ್ಬಿದ ಕಾಮನಬಿಲ್ಲಿನ ಮೇಲಿನ ಮುಗಿಲಾಗುವ ಆಸೆ
ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ ಮಿಂಚಾಗುವ ಆಸೆ
ತೋಟದ ಕಂಪಿನ ಉಸಿರಲಿ ತೇಲುವ ಜೇನಾಗುವ ಆಸೆ
ಕಡಲಿನ ನೀಲಿಯ ನೀರಲಿ ಬಳುಕುವ ಮೀನಾಗುವ ಆಸೆ
ಸಿಡಿಲನು ಕಾರುವ ಬಿರುಗಾಳಿಗಂಜದೆ ಮುನ್ನಡೆಯುವ ಆಸೆ
ನಾಳೆಯ ಬದುಕಿನ ಇರುಳಿನ ತಿರುಳಿಗೆ ದೀಪವ ನೀಡುವಾಸೆ
ಮಣ್ಣಿನ ಕೊಡುಗೆಗೆ ನೋವಿಗೆ ನಲಿವಿಗೆ ಕನ್ನಡಿ ಹಿಡಿವಾಸೆ
ಮಾನವ ಹೃದಯದ ಕರುಣೆಗೆ ಒಲವಿಗೆ ದನಿಗೂಡಿಸುವಾಸೆ

1. ಹಸುವಿನ ಕೊರಳಿಗೆ ಏನಾಗ ಬೇಕೆಂದು ಕವಿಯ ಆಸೆಯಾಗಿದೆ ?

______________________

______________________

2. ಚಿನ್ನದ ಬಣ್ಣದ ಕಣ್ಣನ್ನು ಹೊಂದಿರುವ ಪ್ರಾಣಿ ಯಾವುದು ?

______________________

______________________

3. ಕವಿಗೆ ಎಂತಹ ಬಿರುಗಾಳಿ ಗಂಜದೆ ಮುನ್ನಡೆಯುವ ಆಸೆ ?

______________________

______________________

4. ಕವಿ ಎಲ್ಲಿ ದೀಪವನ್ನು ಹಚ್ಚಬೇಕು ಎನ್ನುತ್ತಾರೆ ?

______________________

______________________

5. ಕವಿಗೆ ಎಲ್ಲಿ ದನಿಗೂಡಿಸುವಾಸೆ ಇದೆ ?

______________________

______________________

@KTBS
NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥಗಳನ್ನು ಹುಡುಕಿ ಬರೆಯಿರಿ.

| ಪದಗಳು | ಅರ್ಥ |
|---|---|
| ಕಂಪು | |
| ಕರುಣೆ | |
| ಬಳುಕು | |
| ಇರುಳು | |
| ಗೆಜ್ಜೆ | |

**ಚಟುವಟಿಕೆ 4 :** ಈ ಪದ್ಯದ ಸಾರಾಂಶವನ್ನು ಬರೆಯಿರಿ.

______________________

______________________

______________________

______________________

______________________

______________________

______________________

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 23

## ಪತ್ರಲೇಖನ – ವೈಯಕ್ತಿಕ

L6T4X8

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪತ್ರಲೇಖನದ ವಿಧಗಳು ಮತ್ತು ಅವುಗಳ ಅರ್ಥ, ಬಳಕೆಯನ್ನು ತಿಳಿದುಕೊಳ್ಳುವರು ಮತ್ತು ವೈಯಕ್ತಿಕ ಪತ್ರಗಳನ್ನು ಸರಿಯಾದ ಶೈಲಿಯಲ್ಲಿ ಬರೆಯಲು ಅಭ್ಯಾಸ ಮಾಡುವರು.

**ಚಟುವಟಿಕೆ 1 :** ಕೊಟ್ಟಿರುವ ಖಾಸಗಿಪತ್ರವನ್ನು ಪೂರ್ಣಗೊಳಿಸಿ.

ನಿಮ್ಮನ್ನು ಚಾಮರಾಜನಗರದ ನವೀನ ಎಂದು ಭಾವಿಸಿಕೊಂಡು ನಿಮ್ಮ ಊರಿನ ಜಾತ್ರೆಯ ಸೊಬಗನ್ನು ಕುರಿತು ಕೊಳ್ಳೇಗಾಲದಲ್ಲಿರುವ ನಿಮ್ಮ ಅಕ್ಕಳಿಗೆ ಒಂದು ಪತ್ರ ಬರೆಯಿರಿ.

ಕ್ಷೇಮ

ದಿನಾಂಕ:
ಹೆಸರು:
ಸ್ಥಳ:

ಪ್ರೀತಿಯ ಅಕ್ಕಳಿಗೆ/ ಮಾತೃಶ್ರೀ ಸಮಾನರಾದ ಅಕ್ಕಳಿಗೆ

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

ವಂದನೆಗಳೊಂದಿಗೆ

ನಿಮ್ಮ ಪ್ರೀತಿಯ ತಮ್ಮ

ಹೊರ ವಿಳಾಸ

ಇವರಿಗೆ

______________________

______________________

______________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 24

# ಪತ್ರಲೇಖನ – ವ್ಯಾವಹಾರಿಕ

B6G9V9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವ್ಯಾವಹಾರಿಕ ಪತ್ರಗಳನ್ನು ನಿರ್ದಿಷ್ಟ ಹಂತಗಳನ್ನು ಅನುಸರಿಸಿ ಬರೆಯುವರು.

**ಚಟುವಟಿಕೆ 1 :** ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಂಕಲ್ಪ ಎಂದು ಭಾವಿಸಿಕೊಂಡು ನಿಮ್ಮ ಗ್ರಾಮಕ್ಕೆ ಗ್ರಂಥಾಲಯ ಒದಗಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.

ಇಂದ

____________________

____________________

____________________

____________________

ಇವರಿಗೆ

____________________

____________________

____________________

ಮಾನ್ಯರೇ

ವಿಷಯ : ________________________________________

__________________________

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ __________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

ವಂದನೆಗಳೊಂದಿಗೆ

ಸ್ಥಳ :

ತಮ್ಮ ನಂಬುಗೆಯ

ದಿನಾಂಕ :

@KTBS NOT TO BE REPUBLISHED

**ಚಟುವಟಿಕೆ 2 :** ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಮರ್ಥ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಗೆ 50 ಕನ್ನಡ–ಕನ್ನಡ ನಿಘಂಟನ್ನು ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.

@KTBS
NOT TO BE REPUBLISHED

## ಗದ್ಯಭಾಗವನ್ನು ಓದಿ ಮೌಲ್ಯ ಗುರುತಿಸೋಣ

G1Z4D2
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ : ಗದ್ಯದಲ್ಲಿನ ಮೌಲ್ಯಗಳನ್ನು ಗುರುತಿಸಿ ಸರಳ ಪ್ರಶ್ನೆಗಳಿಗೆ ಮತ್ತು ಸಂವಾದಗಳಿಗೆ ಉತ್ತರಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಹಾಗೂ ಅದರಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

ನೋಬೆಲ್ ಪ್ರಶಸ್ತಿ ಪುರಸ್ಕೃತ ಸರ್. ಸಿ. ವಿ. ರಾಮನ್ ತಮ್ಮ ಸಂಶೋಧನಾ ಸಂಸ್ಥೆಯಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳ ಅವಶ್ಯಕತೆ ಇದೆ ಎಂದು ಪ್ರಕಟಿಸಿದರು. ಸಂದರ್ಶನದ ನಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದರು. ಒಬ್ಬ ವ್ಯಕ್ತಿ ಚೆನ್ನಾಗಿ ಓದಿದ್ದರು. ಸಂದರ್ಶನದಲ್ಲಿ ಸರಿಯಾಗಿ ಉತ್ತರಿಸಲಿಲ್ಲ ಎಂಬ ಕಾರಣಕ್ಕೆ ಆಯ್ಕೆಮಾಡಲಿಲ್ಲ. ಸಂದರ್ಶನ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಿ ವಿ ರಾಮನ್ ಅವರು ಆಚೆಗೆ ಬಂದಾಗ ಆ ವ್ಯಕ್ತಿ ಕಾಣಿಸಿದನು. ಇನ್ನು ಏಕೆ ಇಲ್ಲೇ ಇದ್ದೀರಿ? ಎಂದು ಕೇಳಿದರು. "ಸರ್ ತಮ್ಮವರು ನನಗೆ ನೀಡಿದ ಪ್ರಯಾಣ ವೆಚ್ಚದಲ್ಲಿ ಅಕಸ್ಮಾತ್ ಆಗಿ ಐದು ರೂಪಾಯಿ ಹೆಚ್ಚಿಗೆ ನೀಡಿದ್ದಾರೆ. ಅದನ್ನು ವಾಪಾಸ್ಸು ನೀಡಲು ಕಾದು ಕುಳಿತಿದ್ದೇನೆ" ಎಂದನು. ಸಿ.ವಿ.ರಾಮನ್ ಅವರಿಗೆ ಹೆಚ್ಚು ಸಂತೋಷವಾಗಿ ಆತನನ್ನು ಕೆಲಸಕ್ಕೆ ತೆಗೆದುಕೊಂಡರು. ಆ ವ್ಯಕ್ತಿ ರಾಮನ್ ಸಂಸ್ಥೆಯಲ್ಲಿ ಒಳ್ಳೆಯ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದರು. ಎಲ್ಲಕ್ಕಿಂತಲೂ ಶಿಸ್ತು ಮೌಲ್ಯಗಳ ಕುರಿತು ಸಹೋದ್ಯೋಗಿಗಳಿಗೆ ಅರೆದು ಕುಡಿಸಿ ಸಂಸ್ಥೆ ಏಳಿಗೆಗೆ ದುಡಿಯುವಂತೆ ಮಾಡಿದರು.

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 26

# ಕಥೆಯಲ್ಲಿನ ಸಾರಾಂಶ

U2U7J2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾ ಫಲ – ಕಥೆಯನ್ನು ಗಮನವಿಟ್ಟು ಓದುವರು. ಕಥೆಯ ಮುಖ್ಯ ಅಂಶಗಳನ್ನು ಗ್ರಹಿಸಿ, ಸಾರಾಂಶ ಬರೆಯುವರು.

**ಚಟುವಟಿಕೆ 1 :** ಕೊಟ್ಟಿರುವ ಕಥೆಯನ್ನು ಓದಿರಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿ.

ಒಂದು ಸಂದರ್ಭದಲ್ಲಿ ತೆನಾಲಿರಾಮಕೃಷ್ಣನು ಒಂದು ಕವಿತೆಯನ್ನು ಹೇಳಿದನು. ಅದನ್ನು ಮೆಚ್ಚಿ ಶ್ರೀಕೃಷ್ಣದೇವರಾಯನು ಚಿನ್ನವನ್ನು ಬಹುಮಾನವಾಗಿ ನೀಡಿದರು. ಅವನ್ನು ಹೊತ್ತುಕೊಂಡು ಮನೆಗೆ ಹೋಗುತ್ತಿದಾಗ, ಕಳ್ಳರು ಹಿಂದೆ ಬಿದ್ದರು. ಅದನ್ನು ಗಮನಿಸಿದಂತೆ ತೆನಾಲಿರಾಮಕೃಷ್ಣ ಸರಸರನೆ ನಡೆದು ಬೇಗ ಮನೆಗೆ ಸೇರಿ ಹೆಂಡತಿಗೆ ವಿಷಯ ತಿಳಿಸಿದನು. ಆ ಚಿನ್ನವನ್ನು ಹೆಂಡತಿಯ ಕೈಗಿತ್ತು ಕಳ್ಳರಿಗೆ ಕೇಳಿಸುವಂತೆ ಜೋರಾಗಿ ಹೀಗೆ ಹೇಳಿದನು. "ನೋಡಿಲ್ಲಿ ಈ ಊರಿನಲ್ಲಿ ಕಳ್ಳರ ಕಾಟ ಬಹಳವಾಗಿದೆ. ಆಸ್ಥಾನದಲ್ಲಿ ರಾಜರು ನೀಡಿದ ಚಿನ್ನವನ್ನು ಮೂಟೆಯಲ್ಲಿ ಕಟ್ಟಿ ಬಾವಿಗೆ ಹಾಕುತ್ತಿದ್ದೇನೆ" ಎಂದು ಹೇಳಿ ಎರಡು ಬಂಡೆ ಕಲ್ಲುಗಳನ್ನು ಮೂಟೆಯಲ್ಲಿ ಕಟ್ಟಿ ಧಡ್ ಎಂದು ಬಾವಿಗೆ ಹಾಕಿ ಬಾಗಿಲು ಹಾಕಿಕೊಂಡು ಮಲಗಿದನು. ಕಳ್ಳರಿಬ್ಬರೂ ಖುಷಿಯಾಗಿ ಅಲ್ಲಿಗೆ ಬಂದು ಬಕೇಟಿನಲ್ಲಿ ನೀರು ಸೇದಿ ಹೆಚ್ಚು ಕಡಿಮೆ ಬಾವಿ ಖಾಲಿ ಮಾಡಿದರು. ಅಷ್ಟರಲ್ಲಿ ಬೆಳಗಾಯಿತು. ಅವರು ನಿರಾಶೆಯಿಂದ ಓಡಿ ಹೋದರು. ಬೆಳಗಾದ ಮೇಲೆ ತೆನಾಲಿರಾಮಕೃಷ್ಣನು ತನ್ನ ಹಿತ್ತಲಿನ ಗಿಡಗಳಿಗೆ ನೀರು ಹಾಕಿರುವ ಕೆಲಸವನ್ನು ಕಳ್ಳರು ಮುಗಿಸಿದಕ್ಕೆ ಸಂತೋಷಪಟ್ಟನು. ಸಮಯ ಸ್ಫೂರ್ತಿಯಿಂದ ತನ್ನ ಚಿನ್ನ ಕಳ್ಳರ ಪಾಲಾಗಲಿಲ್ಲ. ತನ್ನ ತೋಟ ಹಸಿ–ರಿನಿಂದ ಕಂಗೊಳಿಸಿತು ಎಂದು ತೆನಾಲಿರಾಮನು ಆನಂದಿಸಿದನು.

@KTBS NOT TO BE REPUBLISHED

1. ಈ ಕಥೆಯಲ್ಲಿ ನಿಮಗೆ ಇಷ್ಟವಾದ ಸಂಗತಿ ಯಾವುದು ? ಬರೆಯಿರಿ.

2. ತೆನಾಲಿ ರಾಮಕೃಷ್ಣನ ಬುದ್ಧಿವಂತಿಕೆಯನ್ನು ಮೆಚ್ಚುವಿರಾ ? ಏಕೆ ?

3. ಉಪಾಯ ಬಲ್ಲವನಿಗೆ ಅಪಾಯವಿಲ್ಲ ಎಂಬ ಗಾದೆ ಮಾತಿಗೆ ಈ ಕಥೆ ಸರಿ ಹೊಂದುವುದೆ ? ಅದರ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

@KTBS
NOT TO BE REPUBLISHED

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 27

## ಪದ್ಯದಲ್ಲಿರುವ ಹೊಸ ಪದ ಪರಿಚಯ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

Q8W6C3

**ಕಲಿಕಾ ಫಲ :** ಓದಿದ ಸಾಹಿತ್ಯದಲ್ಲಿ ಬರುವ ಹೊಸ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥವನ್ನು ಹುಡುಕುವರು. ಹೊಸ ಪದಗಳನ್ನು ವಾಕ್ಯಗಳಲ್ಲಿ ಸರಿಯಾಗಿ ಬಳಸುವರು.

**ಚಟುವಟಿಕೆ 1 :** ಪದ್ಯದಲ್ಲಿ ಗೆರೆ ಎಳೆದ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥ ಹುಡುಕಿ ಬರೆಯಿರಿ.

ಪದ್ಯ : ಬಿಡುಗಡೆಯ ಹಾಡು

ಕವಿ : ಮುದೇನೂರುಸಂಗಣ್ಣ

ಹಂಗಿನರಮನೆಯ ಮುಳ್ಳಿನೀ ಪಂಜರದಲ್ಲಿ
ರೆಕ್ಕೆಗಳ ಬಿಗಿ ಹಿಡಿದು ನರಳುತಿದೆ ಹಕ್ಕಿ
ಕದ ಮುರಿದು ಹೊರಬಂದು ಬಾನಾಡಿಯಾಗುತ್ತ
ವಿಹರಿಸಲಿ, ಹರ್ಷಿಸಲಿ ಹಿಗ್ಗಿನೊಳು ಸೊಕ್ಕಿ

ಮಡುಗಟ್ಟಿ ನಿಲ್ಲಿಸಿದ ನೀರು ತಾ ಕೊಳೆಗೊಂಡು
ಚಡಪಡಿಸುತಿದೆ ಮುನ್ನಡೆವ ಹಾದಿ ಹುಡುಕಿ
ಹಸಿದ ನೆಲವನು ತಣಿಸಿ ಹಸಿರು ವಸನವನುಡಿಸಿ
ಅಡೆತಡೆಯ ಗೋಡೆಗಳು ಕೆಡಹಲ್ಕೆ ದುಡುಕಿ

ಸುತ್ತಿಟ್ಟು ಮೃಗರಾಜ ಹತ್ತಡಿಯ ಹದ್ದಿನೊಳು
ಗೊಣಗುತಿಹ "ಇನ್ನು ಈ ಬಂಧನ ಸಾಕು"
ಕನಲಿ ಕೆಂಗಿಡಿಯುಗುಳಿ ಪಂಜರಗಳನೆತ್ತುತಿಹ–
"ಸೆರೆಯಿಂದ ನಾ ಜಿಗಿದುಸದರೇರಬೇಕು"

ರವಿಕಿರಣಗಳ ಸೆರೆಯೊಳಡಗಿಸಿಹ ಕಾರಿರುಳೆ
ಹೊರಗೆ ಬಿಡು, ದೂರ ಸರಿ ಹರಡಲೀ ಬೆಳಕು;
ತೊಳೆದು ಹೋಗಲಿ ಸಕಲ ಮೈಮನದ ಕೊಳಕುಗಳು!
ಒಳ – ಹೊರಗು ತಿಳಿನೀರ ಮಳೆ ಸುರಿಯಬೇಕು

| ಪದಗಳು | ಅರ್ಥಗಳು |
|---|---|
| ಹಂಗು | ____________ |
| ವಸನ | ____________ |
| ಪಂಜರ | ____________ |
| ದುಡುಕು | ____________ |
| ಬಾನಾಡಿ | ____________ |
| ಹದ್ದು | ____________ |
| ವಿಹರಿಸು | ____________ |
| ಕನಲು | ____________ |
| ಸೊಕ್ಕು | ____________ |
| ಕೆಂಗಿಡಿ | ____________ |
| ಮಡುಗಟ್ಟು | ____________ |
| ಸದರೇರು | ____________ |
| ಅಡಗು | ____________ |
| ಕಾರಿರುಳು | ____________ |

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ.

ಹಂಗು : ______________________________

______________________________

ಪಂಜರ : ______________________________

______________________________

ಕಾರಿರುಳು : ______________________________

______________________________

ವಿಹರಿಸು : ______________________________

______________________________

ಸೊಕ್ಕು : ______________________________

______________________________

ದುಡುಕು: ______________________________

______________________________

ಅಡಗು : ______________________________

______________________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 28
## ದಿನಪತ್ರಿಕೆ ಓದು

V3H4B7
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ವಿವಿಧ ದಿನಪತ್ರಿಕೆಗಳ ಕುರಿತು ತಿಳಿದುಕೊಳ್ಳುವರು. ದಿನಪತ್ರಿಕೆ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವರು. ಪ್ರಚಲಿತ ವಿದ್ಯಮಾನಗಳನ್ನು ಓದಿ ತಿಳಿಯುವರು.

ಚಟುವಟಿಕೆ 1 : ಶಾಲಾ ಪ್ರಾರ್ಥನೆಯ ವೇಳೆ ದಿನಪತ್ರಿಕೆ ಓದುವುದು, ದಿನಪತ್ರಿಕೆಯ ಹೆಸರು, ದಿನಾಂಕ, ದಿನದ ಸುಭಾಷಿತ, ಪ್ರಮುಖ ಸುದ್ದಿಗಳು, ಸ್ಥಳೀಯ ಸುದ್ದಿಗಳು, ರಾಜ್ಯ ಸುದ್ದಿ, ರಾಷ್ಟ್ರೀಯ ಸುದ್ದಿ,ಅಂತರಾಷ್ಟ್ರೀಯ ಸುದ್ದಿ, ಕ್ರೀಡಾ ಸುದ್ದಿ, ಇತ್ಯಾದಿಗಳನ್ನು ಬರೆಯುವುದು.

**ಓದಿದ ದಿನಪತ್ರಿಕೆ ಬರೆಯುವರು**

ದಿನಪತ್ರಿಕೆ ಹೆಸರು: ______________________ ದಿನಪತ್ರಿಕೆ ದಿನಾಂಕ: ______________

ದಿನದ ಸುಭಾಷಿತ : ____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

ಮುಖಪುಟದ ಪ್ರಮುಖ ಅಂಶ: ____________________________________________

____________________________________________

____________________________________________

____________________________________________

____________________________________________

____________________________________________

____________________________________________

____________________________________________

@KTBS NOT TO BE REPUBLISHED

ಸ್ಥಳೀಯ ಸುದ್ದಿ: ______

ರಾಜ್ಯ ಸುದ್ದಿ : ______

@KTBS
NOT TO BE REPUBLISHED

ರಾಷ್ಟ್ರೀಯ ಸುದ್ದಿ : ______

ಅಂತರಾಷ್ಟ್ರೀಯ ಸುದ್ದಿ

ಕ್ರೀಡಾ ಸುದ್ದಿ :

@KTBS
NOT TO BE REPUBLISHED